ಶಿರಗಾನಹಳ್ಳಿ ಶಾಂತನಾಯ್ಕ

ಆ ದಿನಗಳ ಮಾತು ಈಗೇಕೆ?

ಕವನ ಸಂಕಲನ



ಆ ದಿನಗಳ ಮಾತು ಹಾಗಿರಲಿ ?

ಕವನ ಸಂಕಲನ

ಶಿರಗಾನಹಳ್ಳಿ ಶಾಂತನಾಯ್ಕ

ಅಕ್ಷರ ಪ್ರಕಾಶನ
ಹಂಪಿನಗರ, ಬೆಂಗಳೂರು-560 104

[illegible]

by [illegible] Professor, English Department

Vijayanagara Sri Krishnadevaraya Vishwavidyalaya, Ballari.

Published by

[illegible]

[illegible]

6th [illegible] Nagar

[illegible]

[illegible]

Size: Demy 1/8

Paper Used : 70 GSM Maplitho

ISBN: [illegible]

[illegible]

ಆ ದಿನಗಳ ಮಾತು ಈಗೇಕೆ ?

ಕವನ ಸಂಕಲನ

ಶಿರಗಾನಹಳ್ಳಿ ಶಾಂತನಾಯ್ಕ

ಅಕ್ಷರ ಮಂಟಪ
ಹಂಪಿನಗರ, ಬೆಂಗಳೂರು–560 104

AA DINAGALA MATU EGEKE?
by Shiraganahalli Shantha Naik, Professor, English Department, Vijayanagara Sri Krishnadevaraya Vishwavidyalaya, Ballari.

Published by
AKSHARA MANTAPA
1667, 6th Cross
6th `C' Main, Hampi Nagar
Bangalore- 560104

First Edition : 2023

Pages : 166

Copies : 1000

Price : 180/-

Size : Demy 1/8

Paper Used : 70 GSM Maplitho

ISBN: 978-93-94771-88-8

ಆ ದಿನಗಳ ಮಾತು ಈಗೇಕೆ?

ಪ್ರಥಮ ಮುದ್ರಣ : 2023

ಪುಟಗಳು : 166

ಪ್ರತಿಗಳು : 1000

ಬೆಲೆ : 180/-

ಅಳತೆ : ಡೆಮಿ 1/8

ಕಾಗದ : 70 ಜಿಎಸ್‌ಎಂ ಮ್ಯಾಪ್ಲಿತೋ

ಮುಖಪುಟ ವಿನ್ಯಾಸ : ಚೇತನ್

Printed at
A. M. Prints
Kamakshipalya, Bengaluru - 560079
Mob: 9986167684

ಮುನ್ನುಡಿ

ಕಾವ್ಯ ಭಾವನೆಯ ಜೊತೆಗೆ ಮುಖಾಮುಖಿಯಾಗಿ ವಿಸ್ಮಯ ರೂಪದ ಪದಗಳೊಂದಿಗೆ ಮೂರ್ತ ರೂಪವನ್ನು ಪಡೆದುಕೊಳ್ಳುತ್ತದೆ. ಕಾವ್ಯಕ್ಕೆ ಇರುವ ಶಕ್ತಿ ಅಗಾಧವಾದದ್ದು. ಕಾವ್ಯ ಹಾಡಾಗಿ ಬೇಸರವನ್ನು ಹೋಗಲಾಡಿಸುವ ಅಸ್ತ್ರವಾದರೆ, ಕ್ರಾಂತಿ ಉಂಟುಮಾಡುವ, ಜನರ ಮನಸನ್ನು ಬದಲಿಸುವ ತಾಕತ್ತು ಕಾವ್ಯಕ್ಕಿದೆ. ಕಾವ್ಯವನ್ನು ಆಸ್ವಾದಿಸುವ ಮನಸ್ಸುಗಳನ್ನು ಹುಡಕಬೇಕಾಗಿದೆ. ಹಾಗಂತ ಕಾವ್ಯದ ಆರಾಧಕರು ಇಲ್ಲ ಎಂದಲ್ಲ. ಇವತ್ತು ಸರ್ವಜ್ಞ ಬಸವಾದಿ ಶರಣರು ಉಳದಿರುವುದು ಅವರ ಕಾವ್ಯದ ಸಾಲುಗಳಿಂದಾಗಿಯೆ. ಇಂತ ಗಟ್ಟಿಯಾದ ಕಾವ್ಯ ಶಾಶ್ವತವಾಗಿ ಜನಮಾನದಲ್ಲಿ ಉಳಿಯುವುದು ಏಕೆಂದರೆ ಕೆಲವರ ಕಾವ್ಯ ಜೊಳ್ಳು ಜೊಳ್ಳಾಗಿದ್ದರು ವಂದಿಮಾಗದರಿಂದ ಸುತ್ತುವರಿಯಲ್ಪಟ್ಟಿರುವುದರಿಂದಾಗಿಯೆ ಅವರು ಪ್ರಶಸ್ತಿಗೆ ತೃಪ್ತರಾಗಬೇಕೆ ವಿನಃ ಅದು ಜನರ ಮನಸ್ಸಿನೊಳಗೆ ಉಳಿಯಲ್ಲ ಸಾಧ್ಯವೆ? ಇಂತಹ ಬಹಳಷ್ಟು ಕವಿಗಳು ಪ್ರಶಸ್ತಿ ಪಡೆದು ಮಾಯವಾಗಿ ಹೋಗಿದ್ದಾರೆ.

ಸಂಬಂಧಗಳು ಅರ್ಥ ಕಳೆದುಕೊಂಡು ಸವಕಲು ನಾಣ್ಯದಂತೆ ಚಲಾವಣೆಯಾಗದಂತೆ ಮೂಲೆ ಸೇರಿರುವ ಸಂದರ್ಭದಲ್ಲಿ "ಆ ದಿನಗಳ ಮಾತು ಈಗೇಕೆ?" ನಿಜವಾಗಿಯೂ ಸಂಬಂಧಗಳ ನಡುವಿನ ಬಿರುಕು ಹೇಗೆ ದೊಡ್ಡದಾಗುತ್ತ ಹೋಗುತ್ತದೆ ಎನ್ನುವುದನ್ನು ಸ್ಪಷ್ಟ ಪಡಿಸುತ್ತದೆ. ಅವ್ವನ ಏಳುಪದರದ ಎಲೆ ಅಡಿಕೆಯ ಚೀಲ ಕುತೂಹಲವಾಗಿ ಕಂಡರೆ, ಜನರ ಮೈಯೊಳಗೆ ದೇವರು ಬಂದರೆ ಅವು ನಮ್ಮ ಭಾಷೆಯಲ್ಲಿ ಮಾತನಾಡುವುದನ್ನು ಕವಿತೆಯೊಂದು ಹೇಳುತ್ತದೆ. ಈ ದೇವರು ಎನ್ನುವ ಕಾಣದ ಶಕ್ತಿಯನ್ನು ಹಿಡಿದುಕೊಂಡು ಆಟ ಆಡಿಸುತ್ತಿರುವ ಪರಂಪರಾಗತವಾದ ಮನಸ್ಸುಗಳು ದೇವರನ್ನ ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿರುವ ಈ ಸಂದರ್ಭದಲ್ಲಿ ದೇವರು ನೇರವಾಗಿ ನಮ್ಮೊಂದಿಗೆ

ಹೇಗೆ ಮಾತನಾಡುತ್ತವೆ, ನಮ್ಮ ದೇವರು ಮಾಂಸಹಾರಿಗಳಾಗಿರುವುದರಿಂದ ವರ್ಷಕ್ಕೊಂದು ಕುರಿ, ಕೋಳಿಯನ್ನು ಬೇಡುತ್ತವೆ. ಕುರಿ ಕೋಳಿಯನ್ನು ಬಲಿಕೊಟ್ಟ ಮನುಷ್ಯರು ಸಾಲದ ಬಾದೆ ತಾಳಲಾರದೆ ಕಷ್ಟ ಪಡುತ್ತಿರುವ ಪರಿ ಜಗತ್ತಿಗೆ ಮನವರಿಕೆಯಾಗ ಬೇಕಿದೆ. ಇದು ಯಾರ ಹುನ್ನಾರ, ಯಾರ ಕೈವಾಡ ಎನ್ನುವುದು ತಿಳಿಯಬೇಕಾಗಿದೆ. ಇಂತ ಸಾಮಾಜಿಕ ಅನಿಷ್ಟಗಳನ್ನ ಸೃಷ್ಟಿಸಿದ ಒಂದು ವರ್ಗ ಮಾತ್ರ ಅಪಮಾನಿತ ಸಮಾಜದ ನಿರ್ಮಾಣ ಮಾಡಿತು. ಅವರ ನಡುವೆ ನಾವೆ ಮೆರೆಯಬೇಕು ಎನ್ನುವ ಜಿದ್ದನ ಹೊಂದಿದೆ. ಅದಕ್ಕೆ ದೇವರನ್ನ ನಾನಾ ರೀತಿಯಲ್ಲಿ ಸೃಷ್ಟಿಸಿ ಮುಗ್ದ ಮನುಷ್ಯನನ್ನ ಹೆದರಿಸುವ ಅಸ್ತ್ರವನ್ನಾಗಿಸಿಕೊಂಡಿದ್ದಾರೆ.

ತಲೆಮಾರಿನ ಅಂತರ ಹೆಚ್ಚಾದಂತೆ ಮಾತುಗಳು ಅಂತರವನ್ನುಂಟು ಮಾಡುತ್ತವೆ ಅದು ತಂದೆ ಮಗನ ನಡುವೆಯಾಗಿರಬಹುದು ಅಪ್ಪ ಮಗಳ ನಡುವೆ. ತಂದೆಯ ಇತಿಹಾಸವನ್ನ ಯಾವ ಮಕ್ಕಳುಕೇಳಲು ಇಚ್ಛಿಸುವುದಿಲ್ಲ, ಅವರಿಗೆ ಬೇಕಾಗಿರುವುದು ಅವನ ಈಗಿನ Position, Power ಗಳಿಸುವ ಹಣ. ಯಾರು ಅವನ ಪೂರ್ವ ಇತಿಹಾಸವನ್ನ ಕೇಳಿ ಪಾಠ ಕಲಿಯಲು ಇಚ್ಛಿಸುತ್ತಾನೊ ಅವನು ಬದುಕನ್ನು ಕಟ್ಟಿಕೊಳ್ಳುತ್ತಾನೆ. ಈ ಬದುಕನ್ನ ಕಟ್ಟುವ ಪ್ರಕ್ರಿಯೆ ಕಾವ್ಯದಲ್ಲಿ ಅಭಿವ್ಯಕ್ತಿಗೊಂಡಿದ್ದು ಓದುಗ ಇದನ್ನ ಅರ್ಥ ಮಾಡಿಕೊಳ್ಳಬಲ್ಲ ಎನ್ನುವ ಭರವಸೆ ಇದೆ. ಕಾವ್ಯ ಬಿಟ್ಟ ಬಾಣದಂತೆ ಬಿಡುವವರಿಗೆ ನಮ್ಮ ಕೈಯಲ್ಲಿರುತ್ತದೆ ಬಿಟ್ಟ ಮೇಲೆ ಪರಿಣಾಮವನ್ನ ಎದುರಿಸಲೆ ಬೇಕು ಎನ್ನುವ ಮಾತಿನಂತೆ ಕಾವ್ಯದ ತೀವ್ರತೆ ಇರುತ್ತದೆ. ಇದು ಕ್ರಾಂತಿ ಕಿಡಿಯನ್ನಾದರು ಹಚ್ಚಬಹುದು ಸಮಾಜದಲ್ಲಿ ಬದುಕಿರುವ ಘಾತುಕ ಜನರ ತಲೆಯನ್ನ ಚೆಂಡಾಡಲೂ ಬಹುದು. ಕವಿಯ ಹೃದಯದಿಂದ ಹೊರಟ ಶಬ್ದದ ಬಾಣಗಳು ಯಾರ ಎದೆಯನ್ನ ಸೀಳುತ್ತವೆಯೋ ಅದು ಓದುಗ ಓದಿದ ನಂತರ ಅವನ ಮೇಲೆ ಉಂಟಾಗುವ ಪರಿಣಾಮವನ್ನ ನಿರ್ಧರಿಸುತ್ತದೆ. ಹೀಗಾಗಿ ಕಾವ್ಯ ಬಹಳ ಶಕ್ತಿಶಾಲಿ. ಮನುಷ್ಯ ಮನಸ್ಸನ್ನ ಆಹ್ಲಾದ ಗೊಳಿಸುವ ತಾಕತ್ತು ಇದೆ. ಮನುಷ್ಯ ಮನಸನ್ನ ಮುರಿಯುವ ಶಕ್ತಿಯೂ ಇದೆ. ಈ ಎಲ್ಲಾ ತಾಕಲಾಟವನ್ನುಂಟುಮಾಡುವ ಶಕ್ತಿ ಕಾವ್ಯಕ್ಕಿದೆ ಎಂದರೆ ಕಾವ್ಯದ ಪರಿಣಾಮವನ್ನ ಅರ್ಥಮಾಡಿಕೊಳ್ಳಬೇಕಾಗಿದೆ. ಈಗ ಕಾವ್ಯದ ಸಾಲುಗಳು ಬದಲಾಗಿವೆ ವಾಟ್ಸ್‌ಆಪ್‌ನಲ್ಲಿ, ಫೇಸ್‌ಪುಸ್ತಕದಲ್ಲಿ ಬರುತ್ತಿರುವ ಇನ್‌ಸ್ಟೆಂಟ್ ಕಾವ್ಯ ಓದಿದಾಗ ಕಾವ್ಯದ ರಚನೆ, ಭಾಷೆ, ಬದಲಾಗಿವೆ ಎಂಬುದು ತಿಳಿಯುತ್ತದೆ. ಆದರೆ ಆದರೆ ಭಾವ ಬದಲಾಗಿರುವುದು ಕಾವ್ಯಕ್ಕೆ

ಗಂಡಾಂತರವೆ ಸರಿ. ಏನೆ ಆದರೂ, ಕಾವ್ಯ ಉಳಿಯುವುದು ಅದು ಗಟ್ಟಿಯಾಗಿದ್ದರೆ ಮಾತ್ರ. ಹಾಗಾಗಿ ಗಟ್ಟಿಕಾವ್ಯಕ್ಕೆ ಎಂದೆಂದಿಗೂ ಸಾವಿಲ್ಲ. ಅದುಭಾಷೆ, ಭಾವ ಆಶಯ, ವಸ್ತುವಿಷಯ, ಸಾಮಾಜಿಕ ಕಳಕಳಿ, ವಾಸ್ತವಿಕತೆಯ ದತ್ತಾಂಶವನ್ನ ಹೊಂದಿದ್ದೆ ಆದರೆ ನೂರ್ಕಾಲ ಬುದುಕುವುದರಲ್ಲಿ ಅತಿಶಯವೇನು ಇಲ್ಲ. ಹಾಗಾಗಿಯೆ ವಾಸ್ತವಿಕ ವಸ್ತು ವಿಷಯವನ್ನ ಹೊಂದಿರುವ ಜನಪರ, ಬದುಕನ್ನ ಪ್ರೀತಿಸುವ, ಜನರ ಆಶಯಕ್ಕೆ ನಿಲ್ಲಬಹುದಾದ ಅನೇಕ ವಿಷಯಗಳನ್ನೊಳಗೊಂಡ ನನ್ನ ಐದನೇಯಕವನ ಸಂಕಲನ "ಆ ದಿನದ ಮಾತು ಈಗೇಕೆ?" ಪ್ರಕಟಗೊಳ್ಳುತ್ತಿದೆ. ಕನ್ನಡದ ಮನಸ್ಸುಗಳು ಸ್ವೀಕರಿಸಿದರೆ ಸಾಕು, ಕೆಲವರಿಗೆ ಅವಕಾಶಗಳು ತಾವಾಗೆ ಒದಗಿ ಬರುತ್ತವೆ ಇನ್ನೂ ಕೆಲವರಿಗೆ ಯಾರೊ ಒದಗಿಸಿಕೊಡುತ್ತಾರೆ, ನಮ್ಮಂತಹ ಬಡಪಾಯಿಗಳು ನಾವೆ ಸೃಷ್ಟಿಮಾಡಿಕೊಳ್ಳಬೇಕಾಗಿದೆ. ಏಕೆಂದರೆ ನಾವು ಯಾರಿಗಾಗಿ ಬರೆಯುತ್ತಿದ್ದೆವೆ ಅವರು ಓದುವುದಿಲ್ಲ. ಓದುವವರು ನಮ್ಮ ಕಡೆ ನೋಡುವುದಿಲ್ಲ. ಆದಾಗ್ಯೂ ಕಾಲ ಎಲ್ಲವನು ನಿರ್ಧರಿಸುತ್ತದೆ. ಅಲ್ಲಿಯವರೆಗೆ ನಾವು ನಾವಾಗಿಯೆ ಇದ್ದು ಕಂಡಷ್ಟನ್ನ ಬರೆಯುತ್ತ, ಸಿಕ್ಕಷ್ಟನ್ನ ಅನುಭವಿಸುವ ಹೊಸ ಹಾದಿಯೊಂದನ್ನು ಹುಡುಕಿಕೊಳ್ಳಬೇಕಾಗಿದೆ.

ಬಕೆಟ್ ಹಿಡಿದು ದೊಡ್ಡವನಾಗುವವನು ಎಂದು ಎತ್ತರಕ್ಕೆ ಬೆಳೆಯಲಾರ. ಹಾಗಾಗಿ, ದಿನಕರದೇಸಾಯಿ, ಈಶ್ವರ ಸಣಕಲ್ಲ ಮುಂತಾದ ಕವಿಗಳಿಗೆ ಮುದ್ದಣ್ಣ ನಂತಹವರಿಗೆ ಆ ಕಾಲದಲ್ಲಿ ಆದ್ಯತೆ ಸಿಗದೆ ಇದ್ದರು ಕಡೆಗೆ ಬದುಕಿರುವುದು ಅವರ ಕಾವ್ಯವೆ. ಕೆಲವರು ಏನೇ ಬರೆಯದಿದ್ದರು ಜೊಳ್ಳ ಬರೆದು ಮಹಾನ್ ಆಗಿ ಬಿಡುತ್ತಾರೆ, ಇನ್ನೂ ಕೆಲವರು ವ್ಯವಸ್ಥೆಯನ್ನ ಸೃಷ್ಟಿಸಿ ಪಾಯದೆ ಪಡೆದುಕೊಳ್ಳುತ್ತಾರೆ. ಅಂತಹ ಸಾಕಷ್ಟು ಕವಿಪುಂಗವರು ನಮ್ಮ ನಡುವೆ ಇನ್ನೂ ಬದುಕಿದ್ದಾನೆ. ನಾನು ಒಂದೆರಡು ಕಡೆಗೆ ಕಾವ್ಯವನ್ನ ಪ್ರಶಸ್ತಿಗೆ ಅಂತ ಕಳುಹಿಸಿದ್ದೆ. ನನ್ನ ಸಂಕಲನದ ಶಿರ್ಷಿಕೆ ನೋಡಿಯೆ ತಿರಸ್ಕರಿಸುವ ಸಾಧ್ಯತೆಗಳು ಹೆಚ್ಚಿವೆ, ಆ ದಿನಗಳ ಮಾತು ಈಗೇಕೆ? ನಮ್ಮವರಿಗೆ ದೇವರು ಬಂದರೆ ಅವು ತಮ್ಮ ಭಾಷೆಯಲ್ಲಿ ಮಾತನಾಡುತ್ತವೆ, ಅವ್ವನ ಏಳು ಪದರಗಳ ವಿಸ್ಮಯ ಲೋಕ. ಮುಂತಾದವುಗಳು ಶಿಷ್ಟ ಸಾಹಿತ್ಯದ ವಿಶಿಷ್ಟ ತಲೆಯ ಪಂಡಿತರಿಗೆ ಅರ್ಥವಾಗಿರಲಿಕ್ಕಿಲ್ಲ. ವಾಸ್ತವವಿಲ್ಲದ ಊಹಾತ್ಮಕ ಕೃತಕವಾಗಿ, ಬಣ್ಣದ ಭಾಷೆಯನ್ನ ಬಳಸಿ ಕಿವಿ ಮೇಲೆ ಹೂವಿಡುವ ಒಂದು ಕವಿಗಳ ಗುಂಪಿಗೆ ಅದು ಮೇಲ್ವರ್ಗದ ಪಂಡಿತ, ಪಂಡಿತೆಯರು ಗುಂಪು ಅವರು ಯಾವುದು ಸರಿ ಎನ್ನುತ್ತಾರೊ ಅದೇ ಕಾವ್ಯವಾಗಿ ಬಿಡುತ್ತದೆ. ಉಳಿದದ್ದು

ಏನು ಹಾಗಂದರೆ? ಜೀವಂತಿಕೆ ಇಲ್ಲದ ಭಾಷೆಯ ಅಸ್ಪಷ್ಟ ಸಾಲುಗಳು. ಕೃತಕ ಭಾವನೆಯ ಖಾಲಿ ಪದ ಜೋಡಣೆಗಳು ಪದ್ಯಗಳಾಗುತ್ತವೆ. ನಾನು ದಸರಾ ಕವಿಗೋಷ್ಠಿಯೊಂದರಲ್ಲಿ ಕವಿತೆ ವಾಚನ ಮಾಡಿದೆ ಯಾವನೊ ಕಿತ್ತೊಗಿರೊ ಪತ್ರಕರ್ತ ಅದ್ಯಾವುದೊ ಮತ್ತೊಬ್ಬನ್ನ ಕಾವ್ಯವನ್ನ ಹೊಗಳುವ ಭರದಲ್ಲಿ ವಾಸ್ತವವನೆ ತಿರುಚಿ ಹಾಕಿದ್ದ. ತಾನು ಆ ಪ್ರದೇಶದಲ್ಲಿರುವ ಬಹು ಜನರ ಪರಾಕ್ ಗಿಟ್ಟಿಸಿಕೊಳ್ಳಲು ಬಾಯಿಗೆ ಬಂದದ್ದನ್ನ ಗೀಚಿದ್ದ, ಇದು ನಮ್ಮ ಕಾವ್ಯ, ವಿಮರ್ಶೆ, ಮೀಡಿಯಾ ಹಿಡಿದಿರುವ ಜಾಡು. ಕುವೆಂಪು ಅವರ ಕಾಲದಲ್ಲಿ ನಡೆದದ್ದು ಇದೆ, ಬೇಂದ್ರಯವರ ಕಾಲದಲ್ಲೂ ನಡೆದದ್ದು ಇದೆ, ಆದರೆ ಬೇಂದ್ರೆಯವರಿಗೆ ಸಿಕ್ಕ ಗೌರವ ಕುವೆಂಪು ಅವರಿಗೆ ಸಿಗಲು ಎಷ್ಟು ದಶಕಗಳ ಕಾಲ ಅವರು ಕಾಯಬೇಕಾಯಿತು. ಅಂತ ಸಂದಿಗ್ಧತೆ ನಮಗೂ ಇದೆ. ಈ ಅನಿವಾರ್ಯತೆಯ ನಡುವೆ ನಾವು ಕಾವ್ಯವನ್ನ ಬರೆಯಬೇಕಾಗಿದೆ. ಕೆಲವರು ಪ್ರಾಸದ ಬಗ್ಗೆ ಮಾತಾಡುತ್ತಾರೆ ತಿಣಕಿ ಪ್ರಾಸ ಹಾಕುವ ಬದಲು ಸುಲಭವಾಗಿ ಪ್ರಾಸದ ತ್ರಾಸಿಲ್ಲದೆ ಕಾವ್ಯ ಬರೆಯುವುದೇ ಉತ್ತಮ. ಇನ್ನೂ ಒಂದಿಷ್ಟು ಪಂಡಿತವರ್ಗದವರು ಸೌಂದರ್ಯ ಮೀಮಾಂಸೆ ಬಗ್ಗೆ ಬಡಾಯಿ ಕೊಚ್ಚುತ್ತಾರೆ. ಬದುಕಿನ ದರ್ಶನವೆ ನಮ್ಮ ಸೌಂದರ್ಯ ಮೀಮಾಂಸೆ. ಇದನ್ನ ಜ್ಯೋತಿಬಾಫುಲೆ ಬರೆದಾಗಲೂ ಹೇಳಿದರು. ಇವತ್ತು ಫುಲೆ ಸಾಹಿತ್ಯದೊಂದಿಗೆ ಬದುಕಿದ್ದಾರೆ, ತಿಲಕ್, ಕಾನಡೆ, ಮುಂತಾದ ಪಂಡಿತರು ಪಲಾಯನಮಾಡಿದ್ದಾರೆ. ಹಾಗಾಗಿ ಪ್ರಕೃತಿಗೆ ಗೊತ್ತಿದೆ ಯಾವುದು ನಿಜವಾದದ್ದು, ಯಾವುದು ಕೃತಕ ಎನ್ನುವ ವ್ಯತ್ಯಾಸ. ನನ್ನ ಕಾವ್ಯದಲ್ಲಿ ಒಂದಿಷ್ಟು ವಾಚ್ಯ ಇರಬಹುದು ಆದರೆ ಅದು ಅನಿವಾರ್ಯವಾಗಿದೆ.

ಈ ಕವನ ಸಂಕಲನವನ್ನ ಹೊರತರಲು ಸಹಕರಿಸಿದ ಪ್ರಕಾಶಕರಾದ ಗೆಳೆಯ ಚೇತನ್ ಕಣಬೂರು ಮತ್ತು ಅಚ್ಚುಕಟ್ಟಾಗಿ ಮುದ್ರಿಸಿದ ಎ.ಎಂ. ಪ್ರಿಂಟ್ಸ್ ಇವರಿಗೆ ಕೃತಜ್ಞತೆಗಳು.

ಪರಿವಿಡಿ

ಆ ದಿನಗಳ ಮಾತು ಈಗೇಕೆ ?

ಅಪ್ಪನೆಂಬ ಹಳೆ ಹುತ್ತದ ಸುತ್ತ

ಅಪ್ಪ ನಿಸ್ವಾರ್ಥ ಜೀವಿ
ಅಮ್ಮನ ಮಮತೆಯ ಪರದೆ
ಅಪ್ಪನ ಒಳ್ಳೆತನವ ಮರೆಮಾಚಿತ್ತು
ಅಪ್ಪ ಗಡಸು ಒರಟು, ಮುಂಗೋಪಿ, ಎನ್ನುವುದನ್ನ ಮಾತ್ರ ಬಿಂಬಿಸಿತ್ತು

ಅಪ್ಪ ಹೀಗೇಕೆ? ನಾನು ಅಪ್ಪನಾದಾಗಲೇ ಗೊತ್ತಾಗಿದ್ದು,
ತಲೆ ತುಂಬಾ ಸಂಸಾರದ ತಾಪತ್ರೆಯ
ಸಾಲ ಸೋಲದ ಹಲಾಹಲ
ಅಮ್ಮನ ತಾಳ್ಮೆ ಅಪ್ಪಗೆ ಬಂದೀತು ಹೇಗೆ?

ಅಪ್ಪನ ಮುಖದಲ್ಲಿ ಎಷ್ಟೊಂದು ಚಿಂತೆಗಳು
ಅಕ್ಕನ ಮದುವೆ, ಅಣ್ಣನ ನೌಕರಿ,
ಬಾರದ ಮಳೆ, ಲಾಭ ಕೊಡದ ಇಳೆ,
ಒದ್ದಾಡುತ್ತಿದ್ದ ಹೊಂದಿಸಲು, ಹೊಂದಿಕೊಳ್ಳಲು

ಕಾಸಿದ್ದರೂ ಕಾಸು ಸೇರಿಸಲು ಊರಿಂದ ಅಣಬೆ ಚೀಲ ಹೊತ್ತು,
ಆರ್ಯರ ಕೇರಿಯಲ್ಲಿ ಕೂಗಿ ಕೂಗಿ ಮಾರುತ್ತಿದ್ದ.
ನನ್ನ ತರಗತಿಯ ಹುಡುಗಿ ಹೊರ ಇಣುಕಿದಾಗ
ಅಪ್ಪನ ಬಿಟ್ಟು ನಾನು ದೂರ ಓಡಿದ್ದೆ.

ಮೆಟ್ರಿಕ್ ಮುಗಿದರೂ ಚಪ್ಪಲಿ ಕೊಡಿಸದಕ್ಕೆ
ಅಪ್ಪನ ಮೇಲೆ ಕೋಪ ಬಂದಿತ್ತು.
ಸೈಕಲ್ ಕೊಡಿಸಲಿಲ್ಲ ಅಂತ ಅಪ್ಪನೊಂದಿಗೆ ಮಾತನ್ನು ಬಿಟ್ಟಿದ್ದೆ
ಅಪ್ಪ ಯಾಕೆ ಹೀಗೆ? ಉಗುಳು ಹಚ್ಚಿ ನೋಟು ಎಣಿಸುತ್ತಾನೆ.

ಈಗ ನನ್ನ ಮಗನ ಕೈಲಿ ಅಂಡ್ರಾಯಿಡ್ ಮೊಬೈಲ್
ಅವನು ಓಡಿಸುವ ಬೈಕು
ನನ್ನ ಅವನ ನಡುವಿನ ಸಂಬಂಧ
ಮತ್ತೆ ಮತ್ತೆ ಅಪ್ಪನ ನೆನಪು ತರುತ್ತಿದೆ:

ನನ್ನ ತಪ್ಪನ್ನು ಹೇಳಿಕೊಂಡು
ಅಪ್ಪನ ಹೆಗಲು ತೋಯಿಸಬೇಕೆಂದರೆ
ಅಪ್ಪ ಈಗ ಇಲ್ಲ
ಅಳಬೇಕೆಂದರೆ ಕಣ್ಣೀರು ಇಲ್ಲ

ಅಂತರ್ಮುಖಿಯಾಗಿ ಗಾಢ ಮೌನಕ್ಕೆ ಜಾರುತ್ತೇನೆ
ಜ್ವಾಲಾ ಮುಖಿಯಾಗಿ ಸ್ಫೋಟಗೊಳ್ಳುತ್ತೇನೆ
ಅಪ್ಪನ ಮಂದಸ್ಮಿತ ಬುದ್ಧನ ನಗೆ
ಅಣಕಿಸಿದಂತಾಗಿ ನಿರುಮ್ಮಳನಾಗಿ ಬಿಡುತ್ತೇನೆ.

ಹನ್ನೆರಡೋ, ಹದಿಮೂರು ಮಕ್ಕಳ ಸಂಭಾಳಿಸಿದ್ದೆ ಅಪ್ಪ?
ಇಬ್ಬರನ್ನು ಸುಧಾರಿಸಲು ಹೆಣಗಾಡುತ್ತಿದ್ದೇನೆ,
ನಿನ್ನ ಸೂತ್ರಗಳ ವರಸೆ ಗೊತ್ತಿದ್ದರು ಕೆಲಸವಾಗುತ್ತಿಲ್ಲ
ಏಕೆಂದರೆ ಅಪ್ಪ ಇದು ನಿನ್ನ ಕಾಲವಲ್ಲ

❖

ನಾನಲ್ಲದ ನಾನು

ಪ್ರತಿದಿನ ನಾನು ನೋಡುವ ಕನ್ನಡಿಯಿಂದ
ನನ್ನ ಹಳೆಯ ಭಾವಚಿತ್ರ ಪ್ರತಿಫಲಿಸುತ್ತದೆ
ಅದು ಏನನ್ನೊ ಹುಡುಕುತ್ತಿರುವಂತೆ ಭಾಸವಾಗುತ್ತದೆ.
ಏಕೆಂದರೆ, ಈಗಿರುವ ನಾನು ನಾನೋ.. ಇಲ್ಲ.. ..?

ನಮ್ಮಿಬ್ಬರ ಜಿದ್ದಾ ಜಿದ್ದಿ ಈಗಿನದ್ದಲ್ಲ ಬಿಡಿ
ಕರಿ ಕೂದಲೊಳಗೆ ಬೆಳೆದ ನೆರೆಯೊಂದು
ಕಿಸಕ್ಕೆಂದು ನಕ್ಕಿತು
ಸುತ್ತಲೂ ನೋಡಿ ವಯಸ್ಸಾಯ್ತೆ? ಗೊಣಗಿಕೊಂಡಿದ್ದೆ.

ಅಂದೇ ಅದರ ಮೇಲೆ ಕೋಪಿಸಿಕೊಂಡು ಕೀಳಲು ಹೋದಾಗ
ಕೈತಾಗಿ ಕನ್ನಡಿ ಚೂರಾಗಿತ್ತು.
ಕನ್ನಡಿ ಬದಲಿಸಿದೆ, ಆದರೆ ವಯಸ್ಸು?
ಅಂದೇ ಸಿಟ್ಟಿನಿಂದ ನೆರೆಕೂದಲಿಗೆ ಕರಿ ಬಣ್ಣ
ಹೊಡೆದು ಯುವಕನಂತೆ ಬೀಗಿದೆ.

ಬಣ್ಣ ಹೋದ ಮೇಲೆ ಅಳಿದುಳಿದ ಕರಿ ಕೂದಲು
ಬೆಳ್ಳಗೆ ನಾರಿನಂತಾದದ್ದು ಕಂಡು
ಕನ್ನಡಿ ಗಹಿಗಹಿಸಿ ನಗುವುದೆ!

ಔಡುಗುಚ್ಚಿ ಸಿಟ್ಟುನುಂಗಿ ಇರುವ ಬಿಳಿಗೆ
ಕೆಂಪು ಬಣ್ಣದ ಪೋಷಾಕು ತೊಡಿಸಿ ಖುಷಿ ಪಟ್ಟಿದ್ದೆ.
ಆ ಖುಷಿಯೂ ಬಹಳದಿನ ಉಳಿಯಲಿಲ್ಲಾ.

ನನ್ನ ಪ್ರತಿಬಿಂಬ ಪ್ರತ್ಯಕ್ಷಗೊಂಡು
ಲೇ ಮೂರ್ಖ ಯಾವ ಪುರುಷಾರ್ಥಕ್ಕಿದು?
ವಿಷಣ್ಣನಾಗಿ, ನನ್ನ ಹಿಂದಿನ ನನ್ನದಲ್ಲದ ನನ್ನ ಬಿಂಬವನ್ನೇ ದಿಟ್ಟಿಸತೊಡಗಿದೆ
ಇದ್ದಕ್ಕಿದ್ದಂತೆ ನನ್ನ ಹಿಂದಿನ ನೆನೆಪಿಗೆ ಜಾರಿದೆ.

ಸಿನಿಮಾ ಮಂದಿರಗಳಲ್ಲಿ ಪರದೆ ಮೇಲಿನ ನಾಯಕನಂತೆ ಹಲುಬುತ್ತ
ಕಳೆದ ಆ ಕ್ಷಣ
ಹಂಗಿಲ್ಲದೆ ಹಗಲು ಗನಸು ಕಂಡು
ಸಿಗದ ಕನಸುಗಳಿಗೆ ಕೈಚಾಚಿ ಕಾಸಿಲ್ಲದೆ ಚೈನಿ ಮಾಡಿದ್ದು.

ಕಾಸಿಲ್ಲದಕ್ಕೆ ನಡೆದೆ ಲೈನ್ ಬಜಾರ್ಗೆ ಬಂದದ್ದು
ಕವಡಿ ಕಾಸಿಲ್ಲದಿದ್ದರೂ ಕೋಟಿ ರೂಪಾಯಿಗಳ ಖಾಲಿಮಾತು
ಶ್ರೀಮಂತ ಹುಡುಗಿಯರ ಹಂಬಲಿಸಿ ಕನಸ್ಸಿನಲ್ಲೆ ಬರೆದ ಪತ್ರಗಳೆಷ್ಟೊ?
ಫಲಸಿಗದೆ ನರಿಯಂತೆ ದ್ರಾಕ್ಷಿ ಹಣ್ಣಿಗೆ ಅಪಚಾರ ಮಾಡಿದಂತೆ

ಈಗ, ಕೈಯಲೊಂದಿಷ್ಟು ಕಾಸಿದೆ ಸಮಯ ಸರಿದು ದೂರ ಹೋಗಿದೆ.
ಸುಕ್ಕುಗಟ್ಟಿದ ಮುಖದ ಮೇಲಿನ ನೆರೆಗಳು
ಕೇವಲ ನೆನಪು ಕಲೆ ಹಾಕುತ್ತಿದ್ದೇನೆ.
ನನ್ನ ಹಳೇ ಹಳವಂಡಗಳ ಮೆಲುಕು ಹಾಕುತ್ತೇನೆ.

ಹಳೆ ಘೋಟೋದ ಜಾಗವನ್ನ ಬದಲಿಸಬೇಕೆಂದು
ಎಷ್ಟೋ ಸಲ ಅಂದುಕೊಳ್ಳುತ್ತೇನೆ.

ಒಮ್ಮೆಯಂತೂ ಪಕ್ಕದ ಕೋಣೆಯ
ಗೋಡೆಗೆ ಮೊಳೆಯನ್ನೂ ಹೊಡೆದಿದ್ದೆ
ಫೋಟೋ ತೆಗೆಯಲು ಹೋದಾಗ
ನೆನಪ ಸುರುಳಿ ತಲೆ ತುಂಬಾ ಸುತ್ತಿ
ಇಲ್ಲದಿರುವ ಬದುಕು ಮತ್ತೆ ಮತ್ತೆ ನೆನಪಾಗಿ
ನಾನಲ್ಲದ ನಾನು ನಾನಾಗಲು ಹವಣಿಸಿದೆ.

❖

ಬದುಕ ಕಳೆದುಕೊಂಡವರು

ಕಾಡಡವಿಯಲ್ಲಿದ್ದವರು
ಕೆಂಪುಮಂದಿ ಕೋಪಕ್ಕೆ ಗುರಿಯಾಗಿ
ಕಾಡುಬಿಟ್ಟು
ಈಡೇರದ ಹುಸಿ ಕನಸುಗಳ ಹೊತ್ತು
ತಾಂಡಸೇರಿ ಬದುಕ ಹುಡುಕಲು ಹೊರಟರು.

ಕಾಡು ಹೋದದ್ದೆ
ಗೋವುಗಳು ಮಾಯ
ವ್ಯಾಪಾರ ಬಿಟ್ಟಮೇಲೆ
ಭಟ್ಟಿಸರಾಯಿ ದರ್ಬಾರು.

ಊರಗೌಡನಿಗೆ
ಕೆಂಪು ಫೇಟೆಯ ಕಾಂಚಾಳಿ ತೊಟ್ಟ
ದುಂಡುಗಲ್ಲದ ಲಮಾಣಿ ಹುಡುಗಿಯರೇ ಬೇಕು
ಆಗ ಎಲ್ಲಿಗೋಯಿತು ಜಾತಿ?

ಮುಖಗಳೆ ಇಲ್ಲದ ಮಂದಿ
ಕಟ್ಟಿಗೆ ಮಾರಿ ಬದುಕು ಕಟ್ಟಿಕೊಳ್ಳಲು ಹೋದರೆ
ಬ್ರಿಟೀಷರು ಕಳ್ಳರೆಂದು

ಜೈಲಿಗೆ ಹಾಕಿ ಜಮಾನತ್ತು ಜಪ್ತುಮಾಡಿದರೆ?
ಉತ್ತರವಿಲ್ಲದ ಪ್ರಶ್ನೆಗಳು ಸಾವಿರ
ಕಾಡುಹಣ್ಣು ಹೊತ್ತು ಮಾರುತ್ತಿದ್ದವಳು
ಕಾಡು ಮೆಡಲೆಯುವಾಗ, ಶೀಲ ಕೆಡಿಸಿದವನ
ಸಂತತಿ ರಾಜಕಾರಣ ಮಾಡುತ್ತಿದೆ ಈಗ

ಅವರು ಹುಡುಕುತ್ತಿದ್ದಾರೆ
ತಮ್ಮ ಮೂಲವನ್ನ
ಕ್ರಮಿಸಿದ ದೂರವನ್ನ
ಕಳೆದುಹೋದ ದಟ್ಟ ಕಾಡಡವಿಯನ್ನ

❖

ನಿಲ್ಲುವವರೆಗೆ

ಗಡಿಯಲ್ಲಿ ಗುಂಡಿನ ಸುರಿಮಳೆ ನಿಲ್ಲುವವರೆಗೆ
ಪಾಕಿಸ್ತಾನದಲ್ಲಿ ಮುಗ್ದಮುಲಾಲ
ಮಹಿಳೆಯರ ಬದುಕಿನ ಚಿತ್ರಣ ಜಗತ್ತಿಗೆ ತೆರೆದಿಡುವವರೆಗೆ
ಜಗತ್ತು ಮೌನವಾಗಿತ್ತು, ಬೂರ್ಕದಲ್ಲಿ ಕಣ್ಣೀರು ಝರಿಯುತಲೇ ಇತ್ತು.

ಶ್ವೇತಾ ಕಟ್ಟಿ ಎಂಬ ಕಾಮಾಟಿಪುರದ ಹುಡುಗಿ
ಕೆಟ್ಟ ಕನಸುಗಳ ಮರೆತು, ದಿಟ್ಟತನದಿಂದ
ಹೊಸ ಬದುಕು ಕಟ್ಟಿಕೊಳ್ಳುವವರೆಗೆ
ಹೆಣ್ಣಿನ ಬದುಕು ನಿರ್ಭೀತವಾಗಿರುವುದಿಲ್ಲ ಈ ಇಳೆಯೊಳಗೆ

ಬರಿ ಲಾಭಕ್ಕೆ ಭೂ ಒಡಲು ಬಗೆಯುವುದು ನಿಲುವವರೆಗೆ
ಮುಗ್ದರ ಮೋಸ ವಂಚನೆಯ ಸೊಲ್ಲಡಗುವವರೆಗೆ
ಲಂಚವಿಲ್ಲದೆ ಬದುಕು ಕಟ್ಟಿಕೊಳ್ಳುವವರೆಗೆ
ನಿದ್ಧೆಯಲಿ ಮಗು ನಗುವುದು ನಿಲ್ಲುವುದಿಲ್ಲಾ ಜಗತ್ತಿನೊಳಗೆ

ನಾನು ಬರೆದಿದ್ದೆ ಶ್ರೇಷ್ಠವೆನುತ ಪಂಡಿತ ಬೀಗುವವರೆಗೆ
ನಮ್ಮೊಳಗಿನ ಕವಿಗಳು ಬಕೆಟ್ ಹಿಡಿಯುವುದೆ ಕಾವ್ಯವೆಂದು ತಿಳಿದಿರುವವರೆಗೆ
ಪ್ರಶಸ್ತಿಗಾಗಿ ತಮ್ಮನ್ನು ತಾವು ಅಡವಿಡುವುದು ನಿಲ್ಲುವವರೆಗೆ
ಪ್ರತಿಭೆಗೆ ಪುರಸ್ಕಾರ ಸಿಗುವುದಿಲ್ಲ ಜಗತ್ತಿನೊಳಗೆ

❖

ಅಪ್ಪನಲ್ಲದ ಅಪ್ಪ

ಮೈಮಾರಿಕೊಂಡರು ಹೊಟ್ಟೆಯಲ್ಲಿನ ಭ್ರೂಣ ಕಾಪಾಡುವ ಅಮ್ಮ
ಕಾಮಾಟಿಪುರದ ನರಕದಲ್ಲಿ
ಮನಸ್ಸು ಅರಳುವುದಾದರೂ ಹೇಗೆ?
ಹೂವು ಬಿರಿಯುವುದಾದರೂ ಹೇಗೆ?

ಆ ಹುಡುಗಿ ಓದಿಯೆ ಬಿಟ್ಟಳೆ
ಜೀವನದ ಪಾಠವೆ ಕಷ್ಟವಾಗಿರುವಾಗ
ಪೋಲಿಸರ ಬೂಟು ಸದ್ದುಗಳ ನಡುವೆ
ಗಂಡಸಿನ ಅಸಹ್ಯ ವಾಸನೆಯ, ಹೆಣ್ಣಿನ ಚೀತ್ಕಾರದ ನಡುವೆ

ಇಲ್ಲಿ ಹೆಣ್ಣಿನ ಹಸಿ ಮಾಂಸ ಮಾರಾಟಕ್ಕಿದೆ
ಹೊರಗೆ ಅಣತಿ ದೂರದ ಕೆಂಪು ದೀಪದ ಕೆಳಗೆ ಕಪ್ಪು ಫಲಕ
ಕುಡುಕರು, ಕಾಮಾಂಧರು, ವ್ಯಸನಿಗಳು, ರಾಜಕಾರಣಿಗಳು
ಇನ್ಯಾರು ನೆನಪಿಲ್ಲ ಬಿಡಿ

ಹೇಳು ಶ್ವೇತಾ ನೀನು
ಬದುಕ ಬರ್ಬರತೆ ಸಹಿಸಿಕೊಂಡದ್ದು ಹೇಗೆ?
ನಿರ್ವಿಕಾರ, ನಿರ್ಮಲ, ನಿರ್ಮೋಹಿತ ಮನಸ್ಸು ಗಟ್ಟಿಯಾಗಿಸಿ
ದುಃಖ ನಿನ್ನೊಳಗೆ ನುಂಗಿಕೊಂಡೆ ನಂಜುಂಡನಂತೆ

❖

ಕೋಮು ಗಲಭೆಯಲ್ಲಿ ಮಡಿದ ಕಟ್ಟಡ ಕಾರ್ಮಿಕನಿಗೆ

ದೇವರು ಧರ್ಮದ ಹೆಸರಿನಲ್ಲಿ
ಮನುಷ್ಯನ ರಕ್ತದೋಕಳಿಯ ಬಯಸುವುದಿಲ್ಲ
ಮಸೀದಿ-ಮಂದಿರ ಚರ್ಚುಗಳಾಚೆ
ಧರ್ಮದ ಹೆಸರಿನಲ್ಲಿ ತನ್ನ ಸಹಜೀವಿಯ ಬರ್ಬರ ಕೊಲೆಯಾಗುವುದಿಲ್ಲ

ಮನೆ ಹೊಕ್ಕು ಅಸಹಾಯಕ ಹೆಂಗಸರ ಒಡಲಿಗೆ ಚಾಕು ಹಾಕಿ
ಗರ್ಭಸೀಳಿ ಜಗವನ್ನೆ ಕಾಣದ ಶಿಶುವ ಕೊಂದು
ಸೇಡು ತೀರಿಸಿಕೊಳ್ಳಲು
ಯಾವ ಧರ್ಮವೂ ಹೇಳುವುದಿಲ್ಲ

ಅಲ್ಲೆಲ್ಲೋ ಖಳನಾಯಕನೊಬ್ಬ
ತೆರೆಮರೆಯಲಿ ಕುಳಿತು
ತನ್ನ ಕರಾಳ ಕೈಗಳ ಚಾಚಿ
ಕಬಂಧ ಬಾಹುಗಳಿಂದ ಬಿಗಿದಪ್ಪುವ ನಾಟಕವಾಡಿ

ಹಿಂದೂ-ಮುಸ್ಲಿಂ ಭಾಯಿ ಭಾಯಿ
ಎನ್ನುತಲೆ-ಜೀವಂತನರ ಮನುಜನೆದೆಗೆ
ಚಾಕು ಹಾಕಿಬಿಡುತ್ತಾನೆ.
ಹೇಳು ಗೆಳೆಯ,

ಬಾನಿಗಿಲ್ಲದ ಜಾತಿ.
ಹಕ್ಕಿಗಿಲ್ಲದ ಧರ್ಮ
ಗಾಳಿಗಿಲ್ಲದ ಗಡಿ
ದೇವ ಬಯಸದ ಗುಡಿ
ಯಾವ ಪುರುಷಾರ್ಥಕೆ?

ಕೋಮುದಳ್ಳುರಿಯೊಳಗೆ ಮಹಡಿಮನೆ ಅಲುಗಾಡುವುದಿಲ್ಲ
ಉಳ್ಳವರ ಗಲ್ಲಿಯಲಿ ಹೆಣಗಳುರುಳುವುದಿಲ್ಲ
ಗಡಿಯೇ ಇಲ್ಲದ
ಬಡವನಿಗದಾವ ಧರ್ಮದಗೀಳು

❖

ಕೊನೆ ಕಾಣದ ನಾಲ್ಕು ಅಸ್ಪಷ್ಟ ಸಾಲುಗಳು

ಕಳಚಿಕೊಂಡಿದೆ ಸಂಬಂಧದ ಕೊಂಡಿ
ಭೂಮಂಡಲವನ್ನ ಗೆದ್ದು ನಭೋಮಂಡಲಕ್ಕೆ ಲಗ್ಗೆ ಇಟ್ಟು
ಮತಿವಂತರೆಂದುಕೊಳ್ಳುವ ಮನುಜರ ನಡುವೆ.
ಮಂದಿರಗಳಲ್ಲಿಲ್ಲದೆ ಮರೆಯಾದ ದೇವರು

ಮಸೀದಿಗಳಲ್ಲಿಲ್ಲದ ಅಲ್ಲಾ
ಚರ್ಚುಗಳಲ್ಲಿಲ್ಲದ ಜೀಸಸ್
ಮನಸ್ಸುಗಳ ನಡುವೆ ಗೋಡೆಗಳ ನಿರ್ಮಿಸಿ
ರಕ್ತದೋಕುಳಿಯಾಡುತ್ತಿದ್ದಾರೆ ಎಲ್ಲೆಲ್ಲೂ.

ಅಗೋ ಅವರಾಡಿಸಿದಾಟದಲಿ
ಸತ್ತ ಬಡವರ ಹೆಣಗಳ ಮೇಲೆ
ಮುಗಿಲು ಮುಟ್ಟುತ್ತಿರುವ
ಬಲ್ಲಿದ ರ ಸೌಧಗಳು

ಖಾದಿ ಕಾವಿಗಳದ್ದೇ.. ದರಬಾರು
ಜನತಂತ್ರಕ್ಕೆ ಕಟ್ಟುಬಿದ್ದವರಿಲ್ಲ

ಕಾಸಿಗೆ ಓಟುಮಾರಿಕೊಂಡು
ಹಣೆಹಣೆ ಬಡಿದುಕೊಳ್ಳುತ್ತಿರಲು

ಮೊನ್ನೆ ಮಂಗಳನಂಗಳದಲ್ಲಿ ಚಿಮ್ಮಿದ ನೀರು
ರಕ್ತ ರಂಜನೀಯವಾಗಿರಲು
ಬಡದೇಶಗಳ ಜನರೆದೆಯಲಿ
ಆತಂಕದ ಸಂಚಲನ

ಮತ್ತೆ ಬುದ್ಧನಿಗಾಗಿ ಹುಡುಕಾಟ
ಹುಡುಕಲು ಹೋದವರೆಲ್ಲ
ಸಿಗದ ಬುದ್ಧನ
ಸಲುವಾಗಿ ಉಪವಾಸ ಹರತಾಳ ಮಾಡುತಿರಲು

ನನ್ನೊಳಗೆ ಕೊಳೆತಿದ್ದ
ಕೊನೆಗಾಣದ ನಾಲ್ಕು ಅಸ್ಪಷ್ಟ ಸಾಲುಗಳ ಗೀಚಿ
ಮಲಗಲು ಮುಂದಾದರೆ
ಕೋಮು ಗಲಭೆಗಳಲ್ಲಿ ಸತ್ತವರ ಜೀವಗಳು

ಮುಲಕಿದಂತಾಗಿ
ಮಕ್ಕಳು ಹೆಂಡತಿಯನೊಮ್ಮೆ ನೋಡಿ
ನನ್ನ ಸ್ಪರ್ಶಿಸಿಕೊಂಡು
ಖಾತ್ರಿ ಪಡಿಸಿಕೊಂಡೆ ನಾನಿನ್ನು ಬದುಕಿದ್ದೇನೆಂದು

❖

ಆ ದಿನಗಳ ಮಾತು ಈಗೇಕೆ?

1971 ರ ಭೀಕರ ಬರಗಾಲದಲ್ಲಿ
ಉಪ್ಪಿಲ್ಲದೆ ಸೌಳುಮಣ್ಣ ಹಾಕಿ
ಬೇಯಿಸಿದ ಹುರುಳಿ ತಿಂದ ಜನರು
ಊರ ಕುರಿ, ಮೇಕೆಗಳೊಂದಿಗೆ ಸ್ಪರ್ಧೆಗಿಳಿದದ್ದು

ಉಗಣಿ ಬಳ್ಳಿಯ ಕುಡಿಗಳ ಚಿವುಟಿ ತಿಂದದ್ದು
ಪಾಪಾಸುಕಳ್ಳಿಯ ಕೆಂಪು ಹಣ್ಣ ಮೇಲಿನ ಮುಳ್ಳ
ತಾವರಿಕೆ ಸೊಪ್ಪಲ್ಲಿ ಬಡಿದು ತಿಂದು
ಆರ್ದರಾಗಿ, ಅರ್ಧಮಣ್ಣನ್ನು ಹಿಟ್ಟುಮಾಡಿ
ಉಂಡ ದಿನ ಕುರಿತು ಮಾತನಾಡಿದರೆ
ನನ್ನ ಮಗ ಹೇಳುತ್ತಾನೆ ಅಯ್ಯೋ ಹೋಗಲಿ ಬಿಡಪ್ಪ
ಈಗ ಆ ದಿನದ ಮಾತೇಕೆ?

ಸೂರಿಲ್ಲದ ಸೇವಾಭಾಯನ ಗುಡಿಯೆ ಸಾಲಿ
ಒಬ್ಬನೇ ಶಿಷ್ಯ ನಾನು ಬುದ್ದಿವಂತ ಮೇಷ್ಟ್ರ ಹತ್ತಿರ ಪಾಠ ಕಲಿಯಲು
ರವಿಯು ತೋಟಕ್ಕೆ ಹೋದ, ಪಾಠದೊಳಗಣ 'ರವಿ'
ವರ್ಷ ಮುಗಿದರೂ ತಂದೆಯ ತೋಟಕ್ಕೆ ಹೋಗಲೆ ಇಲ್ಲಾ

ನಮ್ಮೇಷ್ಟ್ರು 'ರವಿಯು' ಅಂದೊಡನೆ
ಧ್ವನಿಯೊಂದು ಅತ್ತಿಂದ
ಮಾಸ್ತರ.. ಎನ್ನುತಿರಲು
ಊರತೀಟೆಯ ನಡುವೆ ನನಗೆ ಆಟದ ವಿರಾಮ
ಗದಿಯ, ನೂಳಿಯ, ಪೀಕ
ಗೋಲಿ–ಗಜ್ಜುಗದ ಜೊತೆಗೆ ಬುಗುರಿ ಆಡುತಿರಲು
ಕುತೂಹಲದಿಂದ ಕಾದಿರುವವನಂತೆ ಛಂಗನೇ ನೆಗೆಯುತ್ತಿದ್ದೆ
ಮೈದಾನಕ್ಕಿಳಿದು ಬಿಡುತ್ತಿದ್ದೆ

ಒಮ್ಮೊಮ್ಮೆ ಯಾರದೋ ಹಳೆ ಸೈಕಲ್ಲಿನ ಟೈಯರ್
ನಮ್ಮನ್ನ ಹೊತ್ತೋಡುವ ಮೋಟಾರು ಬೈಕ್ ಆಗಿ
ಹನ್ಮಂತದೇವರ ಗುಡಿಯಿಂದ
ತಾಳಿಮರದ ದುರ್ಗವ್ವನ ಗುಡಿವರೆಗೆ
ಬಾಯೊಳು ಬಂದ ಬುರುಗ ಲೆಕ್ಕಿಸದೆ ಬುರ್ ಎನುತ
ಓಡಿ ಬಂದು ಆಯಾಸವಾಗಿ
ಮೇಷ್ಟ್ರ ಮಾತುಗಳು ಮುಗದಿರಬಹುದೆಂದು ಊಹಿಸಿ
'ಸಾ'... ಎಂದಿಣಕಲು
ಊಟದ ಸಮಯದ ಘೋಷಣೆ.

ನಮೇಷ್ಟ್ರು
ಹತ್ತು ಡಬ್ಬಗಳ ದೊಡ್ಡದೊಂದು ಟಿಫನ್ ಕ್ಯಾರಿಯರ್ ಹೊತ್ತು
ಕೆರಿ ಏರಿಗೆ ಹೊರಟರೆ

ಶಾಲೆ ಮುಗಿದಂತೆಯೇ
ನಮ್ಮನೆ ಹಾಲು ಮೊಸರಿನೊಂದಿಗೆ
ಗಡದ್ದಾಗಿ ಉಂಡು
ಲೇ 'ನಾಯ್ಕ' ತಗೊಳಲೆ ತೊಳ್ಕಂಡಬಾ ಎಂದೊಡನೆ
ಅಳಿದುಳಿದ ಅನ್ನ ಸಾರಿಗೆ
ನಾಯಿಯಂತೆ ಬಾಲ ಆಡಿಸುತ್ತಾ
ಅವರ ಧ್ವನಿಯನ್ನೇ ಕೇಳಲು
ಕಾದಿದ್ದವನಂತೆ ಒಳಗೆ ಓಡಿ
ಖಾಲಿಗೊಂಡ ಡಬ್ಬಗಳನ್ನೆತ್ತಿಕೊಂಡು
ಕೆರೆಗೆ ಓಡಿದ್ದು ಬರಿ ನೆನಪು

ಬಕಾಸುರ
ಅಪ್ಪ ಹೇಳಿದ ಕತೆ ನೆನಪು ಮಾಡಿಕೊಂಡು
ಉಳಿಕೆಗೆ ತಡಕಾಡಿ
ಖಾಲಿ ಡಬ್ಬದ ಮೂಲೆಯಲಿ ಸಿಕ್ಕ
ಮಾವಿನ ಉಪ್ಪಿನ ಕಾಯಿ ವಾಟೆ
ದವಡೆಯಲ್ಲಿ ಅಗಿದಗಿದು
ಸಂಜೆ ಗಂಜಿಗೆ ಕಾಯುತ್ತಿದ್ದದ್ದು ಹೇಳಿದಾಗ
ನನ್ನ ಮಗ ಹೇಳುತ್ತಾನೆ.
ಈಗ ಆ ದಿನಗಳ ಮಾತೇಕೆ?

ಜಾತಿ-ಧರ್ಮದ ಹೆಸರಲ್ಲಿ
ಉಳ್ಳವರ ದಬ್ಬಾಳಿಕೆ

ಜಾತ್ಯಾತೀತರೆಂದು ಮುಖವಾಡ ಹಾಕಿಕೊಂಡು
ಒಳಗೊಳಗೆ ನಗುವವರು
ಜಾತಿ ಹೆಸರಲಿ ಅವಿದ್ಯಾವಂತರನೆಲ್ಲಾ
ಕೀಳಾಗಿ ಕಾಡುವ ಪರಿಯ ಹೇಳಲು
ಅವನು ಹೇಳುತ್ತಾನೆ
ಈಗ ಆ ದಿನಗಳ ಮಾತೇಕೆ?

ಗತಕಾಲದ ನೆನಪು ಬೆನ್ನು ಬಿಡದ ಭೂತದಂತೆ ಕಾಡುತ್ತಿರಲೆನ್ನ
ಹೊರಹಾಕಲಾಗದೆ ತೊಳಲಾಡುತ್ತಿದ್ದೆ.
ಅಪ್ಪ-ಅವ್ವ ಆಗ ಅವರ ಕಷ್ಟಗಳ ಹೇಳಲು ಬಂದಾಗ
ಕೇಳಲು ಈಗ ಸಮಯವಿಲ್ಲ ಎಂದ
ನನ್ನ ಮಾತು ನೆನಪು ಮಾಡಿಕೊಳ್ಳಲು ಯತ್ನಿಸುತ್ತೇನೆ
ಹಳೆಯದೆಲ್ಲವನು ಸುರಳಿಸುತ್ತಿ
ಟ್ರಂಕಿನಲ್ಲಿ ಗಂಟುಕಟ್ಟಿ ಎಸೆದು ಬಿಡುವ ಮನಸ್ಸು
ನನ್ನ ಮಗನ ಮಾತು
ಮತ್ತೆ ಪ್ರತಿಧ್ವನಿಸುತ್ತದೆ
ಈಗ ಆ ದಿನಗಳ ಮಾತೇಕೆ?

❖

ಯುಗಾಂತರ

ನಾನು ಎಂಬುವನಿಲ್ಲಿ ನಶ್ವರನಾದ
ಜಾತಿ ಸೃಷ್ಟಿಸಿ ಜನರಿಂದ ದೂರ ಸರಿದವರು
ಭೂಮಿಯಲ್ಲೂ ಕುಳಿತು ಪ್ರಚಾರ ಪಡೆಯುತ್ತಿದ್ದಾರೆ
ಯುಗಾಂತರವೀಗ ಸನ್ನದ್ಧವಾದಂತಿದೆ.

ಒಡೆದು ಹೋಗಲಿ ಭೂಮಿ ತುಂಡು ತುಂಡಾಗಿ
ಮತ್ತದೆ ಪ್ಯಾಂಜೀಯವಾಗಿ ಮುಳಗಲಿ ಸಾಗರದಲ್ಲಿ
ನಶಿಸಿಹೋಗಲಿ ನಶ್ವರ ಜಗತ್ತು ನುಚ್ಚು ನೂರಾಗಲಿ
ಸಂಸ್ಕೃತ ಕಲಿತು ದೇವರ ಜೊತೆ ಮಾತನಾಡುವವರು ಹೋದರೆಲ್ಲಿ?

ಯಾವ ಪ್ರಾಣಿಯನ್ನು ಬಿಡದೆ ತಿಂದವರು ತೋಪೆದ್ದರು
ಅಣುವಿನಿಂದ ವೈರಾಣುವರೆಗೆ ಮನುಷ್ಯ ವಿರೂಪ ಪ್ರಕ್ರಿಯೆಗಳು
ಪಾಪಿಯನ್ನು ಪಾತಳಕ್ಕೆ ತುಳಿದು
ಮತ್ತೆ ಹೊಸ ಚೈತನ್ಯ ಬರಬೇಕಿದೆ.

ಶಾಶ್ವತವಲ್ಲದ ಸುಖವನರಿಸಿ ಹೋದವರೆಲ್ಲಿ?
ಬಂಗಾರದ ಮನೆಯಲ್ಲಿ ಬದುಕಿದವಂಗಲ್ಲ ಈ ಬದುಕು
ನೆಲಬಿಟ್ಟು ಮುಗಿಲು ನೋಡಿದವರು
ನೆಲಕಚ್ಚಿ ಮಲಗಿಬಿಟ್ಟರೆ.

ಟಿವಿ ಪರದೆಯ ಮೇಲೆ ವಿಕೃತ ಮನಸ್ಸಿನ ಸ್ವಾಮಿ
ಹೆಂಗಳೆಯರ ಮೆದಳು ಆವರಿಸಿದ್ದಾನೆ ಚೂರು ಬಿಡದಂತೆ
ಭೂತ-ಭವಿಷ್ಯತ್ತುಗಳು ಭೇತಾಳದಂತೆ ಬೆನ್ನು ಹತ್ತಿವೆ
ಬರಲಿ ಬಿಡು ಸಾವು ಜಗದ ಉದ್ಧಾರಕ್ಕೆ

ಮರುಹುಟ್ಟು ಸಂಭವಾಮಿ ಯುಗೇ ಯುಗೇ ಎಂಬಂತೆ
ಸ್ವಾರ್ಥವಿಲ್ಲದ ನೋವಿಲ್ಲದ ಸಮ ಸಮಾಜದ ಉದಯ
ಜಾತಿ ಸತ್ತು ನರಕ ಸೇರಿ ಧರ್ಮ
ಒಂದೇ ಉಳಿಯಲಿ ಮನುಜನೆಂಬುದು
ಸಂಭವಿಸಲಿ ಯುಗಾಂತರ ತಿಳಿನೀರ
ಕೊಳದಂತೆ ಕಳೆ ತುಂಬಿ ಜಗಕೆ.

❖

ಹೆಜ್ಜೆ ಗುರುತುಗಳ ಹುಡುಕಾಟದಲ್ಲಿ

ಕಾಲ ಉರುಳಿ ಮತ್ತೆ ಬಾರದಂತೆ ಮರೆಯಾಗುತ್ತಿದ್ದಂತೆ
ಹಳ್ಳಿ ಹಳ್ಳಿಗೂ ಗ್ಯಾಸ್ ಒಲೆಗಳ ದಾಳಿ
ಹೊರೆ ಹೊತ್ತು ಕಟ್ಟಿಗೆ ಮಾರತುತಿದ್ದವರಾದರು ದಿವಾಳಿ
ಅಪ್ಪ ಅವ್ವನ ದುಡಿಮೆಗೆ ಕಿಮ್ಮತ್ತಿನ ಕಾಸಿಲ್ಲ

ಮಂದಿ ಹೇಳುತ್ತಾರೆ ಇವರು
ಎಲ್ಲಿಂದಲೋ ವಲಸೆ ಬಂದವರೆಂದು
ಅವರೊಂದಿಗೆ ಎತ್ತುಗಳ ಹಿಂಡಿತ್ತು ಎಂದು
ಕಾಡು ಅವರ ಹೊಟ್ಟೆ ಪಾಡಿನ ಜಾಡು ಎಂದು.

ಕಾಣೆಯಾದ ಕಾಡಿನ ಹುಡುಕಾಟದಲ್ಲಿ
ಒಮ್ಮೆ ನೆನಪು
ಕವಳಿ, ಕಂಚು, ಕಾರೆ, ಬಾರೆ ಹಣ್ಣುಗಳೇ ಗತಿ
ಕೆಂಪು ಮಂದಿ ಕಟ್ಟಿಗೆ ಆಯಲು ಬಿಡದ ವ್ಯಥೆ

ಹೊತ್ತ ಹೊರೆ ಯಡಿಯಲ್ಲಿ ನೆತ್ತಿ ಉರಿಕಿತ್ತರು ಅವ್ವಗೆ ಹಸಿ ಕನಸು
ತನ್ನ ಪಾಡು ತನಗಿದ್ದು ಮಕ್ಕಳು ಸಾಹೇಬರಾಗಲಿ ಎಂದು
ಕನಸು ಮುಗಿಯುವ ಮೊದಲು ಊರು ಸೇರಿದ್ದಳು
ಕಟಗಿ ಬೇಕೆನ್ರೆ ಯಪ್ಪಾ ತೊದಲು ಕನ್ನಡದಲ್ಲಿ ಕೂಗುತ್ತಿದ್ದಳು

ಅವ್ವಗೆ ಕನ್ನಡವೇ ತೊಡರು
ಇನ್ನೂ ಕೆಂಪು ಭಾಷೆ ಒಲಿದೀತೆ? ನಮ್ಮ ನಾಲಿಗೆಗೆ
ಸಂಘರ್ಷದ ಬದುಕಿಗೆ
ಅಕ್ಷರ ಅನಿವಾರ್ಯ ಅಪ್ಪನ ಸಿದ್ಧಾಂತ

ಅಕ್ಷರ ಅರಿತವರು ಜಗ ಕಂಡು ಅಚ್ಚರಿ ಗೊಂಡರು
ಅರಿಯದವರು ಇರುವ ಬದುಕೆನ್ನೆ ಹಾಸಿ ಹೊದ್ದು ಒದ್ದಾಡುತ್ತಿಹರು
ಉಳ್ಳವರ ಸಂಚಿಗೆ ಬಲಿಯಾಗಿ
ಬದುಕಲಾರದ ಬದುಕ ಹೆಗಲ ಮೇಲೆ ಹೊತ್ತು
ಅಡಿಯಾಳಂತೆ ನಡೆಯುತ್ತಿಹರು

ಬದಲಾದ ಬದಿಕಿನ ಲೀಲೆ ಬಲು ವಿಚಿತ್ರ
ಅವ್ವನ ಪೇಟಿಯಾ ಕಾಂಚಳಿ ಭಾಂಟಿಯಾಕ್ಕೆ
ದಾರ ಹೊಂದಿಸಲು ಕಾಡಿನ ಹಣ್ಣಿನ ಸಾಟೀ ಬದಲಿ
ನೇಕಾರರ ಮಗ್ಗದ ಸದ್ದು ಅಡಗಿ ಓಣಿಗೋಣಿಯೆ ಸ್ಮಶಾನ ಮೌನ

ಅವ್ವ ಪೇಟಿಯಾ ಬಿಟ್ಟು ಸೀರೆ ಉಡಲು
ಹೊಯ್ದಾಡುತ್ತಿದ್ದಳು
ಅನಿವಾರ್ಯತೆಯ ನಡುವೆ ನಲುಗಿದ್ದಳು
ಹೊಂದಿಕೊಳ್ಳಬೇಕಾದ ಬದುಕನ್ನ ಒಪ್ಪಿಕೊಳ್ಳಲು ಹೆಣಗಾಡುತ್ತಿದ್ದಳು

ಕಟ್ಟಿಗೆ, ಅವ್ವನ ಸಾಟೀ ಬದಲಿ
ಕಳೆದು ಹೋದ ಕಾಡು
ಅಳಿದುಹೋದ ರಾಸುಗಳು
ಈಗ ಬರೀ ಕಾಲ ಬಿಟ್ಟುಹೋದ ಸ್ವಾತಿ ಮಳೆಯ ಚಿತ್ತಾರಗಳು

ಬದುಕು ಬಟಾ ಬಯಲು
ಕಾಫೀ ತೋಟ ಕಬ್ಬಿನ ಗದ್ದೆಗಳ ನಡುವೆ ಎಡತಾಕುತ್ತಿದ್ದಾರೆ
ಚೀಲಬಿಗಿದ ಲಂಬಾಣಿ ಚೆಲುವೆಯ ಸೊಂಟದ ಸುತ್ತಾ
ರೈಟರ್‌ನ ಹದ್ದಿನ ಕಣ್ಣು
ಬಾಯಿ ಬಿಟ್ಟಳೋ ಸೊಲ್ಲಡಗುವ ತವಕ

ಈ ನಡುವೆ ಹೊತ್ತಿನಕೂಳಿಗೆ ಹೆತ್ತ ಕಂದಮ್ಮಗಳ ಹರಾಜು
ಹೇಡಿಗಳಿಗೂ ಹಿಂಡು ಹಿಂಡು ಮಕ್ಕಳು ದಕ್ಕಬೇಕೆ?
ಸಮೃದ್ಧ ಗರ್ಭದಲ್ಲಿ
ಜೆರಾಕ್ಸಿನಂತೆ ಬಂದ ಕಂದಮ್ಮಗಳು ಮಾಯಾವಾದವು ಎಲ್ಲಿ?

ಮನ್ನೆ ಜೀತಕ್ಕಿದ್ದ ಸೋಮ್ಲನ ನಿಗೂಢ ಸಾವು
ಅವನ ಬದಲಿಗೆ ಮಂಗ್ಲ್ಯಾ
ಮಂಗ್ಲ್ಯಾನೂ ಹೋದರೇನು? ಮಹಾ
ಸರಾಯಿ ಖರ್ಚಿಗೆ ಎಷ್ಟು ಬಲಿಯಾದರೇನು?

ವರ್ತಮಾನದ ವೈಪರಿತ್ಯಗಳ ನಡುವೆ
ನಾನು ಕರ್ನಾಟಕ ಕಾಲೇಜು ಸೇರಿದ್ದೆ
ಅಲ್ಲೂ ಬಿಡಲಿಲ್ಲ ಜಾತಿಯ ನಂಟು
ವಿಶ್ವವಿದ್ಯಾಲಯದಲ್ಲಿ ನಡೆದಿತ್ತು ಜಾತಿಯದ್ದೆ ದೊಡ್ಡ ಕಗ್ಗಂಟು

ಸೋಲಲ್ಲೂ ಗೆಲುವು ಹುಡುಕುತ್ತಿದ್ದೇನೆ
ಜಾತಿಗೆ ಜೋತು ಬಿದ್ದವರು ಜೊತೆಯಲ್ಲಿಲ್ಲ

ಅತ್ತ ಪುಲಿ ಇತ್ತ ಧರಿ ನಡುವೆ ಡೋಲಾಯಮಾನ ಬದುಕು
ನೆನಪ ಹಣತೆಯಲ್ಲಿ ಖಾಲಿಯಾದಂತೆ ನೆನಪು

ನೀ ಮಾಯೆಯೊಳಗೊ
ನಿನ್ನೊಳು ಮಾಯೆ ಅರ್ಥ ಹುಡುಕುತ್ತಾ
ಭವದ ಬದುಕಿನ ಹುಡುಕಾಟ ಭುವಿಯಲ್ಲಿ ನಡೆಸಿದ್ದೇನೆ
ಹೆಜ್ಜೆ ಗುರುತುಗಳ ಗುರುತಿಸುತ್ತಾ ಹೆಜ್ಜೆ ಇಡಲು
ಹವಣಿಸುತ್ತಿದ್ದೇನೆ ನಿತ್ಯ ನಿರಂತರ...........

ಒಮ್ಮೆ ಗಟ್ಟಿಯಾಗಿ ಕಣ್ಣು ಮುಚ್ಚಿ
ಸ್ಮೃತಿಯಲ್ಲಿರುವ ನೆನಪುಗಳ ಅಳಿಸಿಹಾಕಲು ಯತ್ನಿಸುತ್ತೇನೆ
ಆದರೆ ಎದೆಯೊಳಗೆ ಹದವಾಗಿ ನಾಟಿರುವ
ನನ್ನ ನೆನ್ನೆಗಳು ಇಂದಾಗಿ ನನ್ನ ಕೆಳನೂಕುತ್ತ
ಮುಗಿಲೆತ್ತರ ಬೆಳೆಬೆಳೆದು ನಳನಳಿಸುತ್ತಿವೆ.

❖

ನೋವನುಂಡ ನಂಜುಂಡ

ಬದುಕಿಗೆ ಅರ್ಥ ಹುಡುಕುತಿದ್ದೆ
ಸಂಸಾರಿಯ ಬದುಕು ಸಾರ್ಥಕವೊ
ಇಲ್ಲ ಬ್ರಹ್ಮಚಾರಿಯದ್ದು
ಮನಸ್ಸು ಜಿಜ್ಞಾಸೆಗೊಳಗಾಯಿತು

ಯಾರೊ ಹೇಳಿದರು ನರನಿಲ್ಲದೆ ನಾರಿ ಅಪೂರ್ಣ
ನಾರಿ ಇಲ್ಲದೆ ನರ ಅಪೂರ್ಣ
ಬಕವಾಸ್ ಅನಿಸಿತ್ತು
ಬರಿ ಕಿರಿಕಿರಿ ಪಿರಿ ಪಿರಿ ಬಿಟ್ಟರೇನಿದೆ?

ಸಂಸಾರಿಗೇನು ತಿಳಿದಿತು ಸನ್ಯಾಸಿಯ ಬದುಕು
ಸನ್ಯಾಸಿಗೇನು ತಿಳಿದಿತು ಸಂಸಾರಿಯ ನೋವು
ಅವನು ತಾನೆ ಸರಿ ಎಂದರೆ
ಇವನು ಅವನೆ ಸರಿ ಎಂದು ವಾದಿಸಿದ್ದು.

ಯಾರು ಹೇಗೆ ಸರಿ ಶಿವ
ಇಬ್ಬರ ಸಹಾವಾಸ ನೀನೆ ಹೇಳಬೇಕು
ಒಬ್ಬಳಿಗೆ ಸಮಯ ಕೊಡದೆ ಒದ್ದಾಡುವಾಗ
ಇಬ್ಬಿಬ್ಬರ ಜೊತೆ ಅದೇಗೆ ಇರುತ್ತಿಯೊ ತಂದೆ

ಹೆಂಡತಿ ಹೇಳುತ್ತಾಳೆ ತಾನೆ ಸರ್ವಸ್ವವೆಂದು
ಪ್ರಕೃತಿಯ ಆಗು–ಹೋಗುಗಳಿಗೆ ತಾನೆ ಕಾರಣ
ಗಂಡನೊ ದಂಡ ಪಿಂಡ
ವ್ಯವಹಾರ ಶೂನ್ಯ ದುಡಿವ ಕತ್ತೆ

ಪಾಪದ ಪ್ರಾಣಿ ಹೊರಗೂ ಹಿಂಸೆ
ಒಳಗೂ ಹಿಂಸೆ ಕುದಿವ ಲಾವಾರಸದಂತೆ
ಅವ್ಯಕ್ತ ನೋವನುಂಡ ನಂಜುಂಡ
ಯಾರಿಗೂ ಹೇಳದ ಕಲ್ಲುಬಂಡೆ

❖

ಕ್ಷಣಕಾಲದ ಸುಖವನ್ನರಸಿ....

ಒಮ್ಮೊಮ್ಮೆ ಹತಾಶೆ
ಒಮ್ಮೊಮ್ಮೆ ನಿರಾಶೆ
ಒಮ್ಮೆ ಬೇಸರ
ಮತ್ತೊಮ್ಮೆ ಖುಷಿ

ಬದುಕೆ ನಿನಗೆ ಕೋಟಿ ಸಲಾಂ
ಕೆಲವು ವಸ್ತುಗಳು ಸಿಕ್ಕಾಗ ಮನಸ್ಸಿಗೆ ಖುಷಿ
ಕೆಲವು ಪ್ರಸಂಗಗಳು ನೆನಪಾದಾಗ ಸಂತೋಷ
ಕೆಲಗೆಳೆಯರು ಮಾತಾಡಿದಾಗ ಹರ್ಷ

ದುಡ್ಡು, ಅಧಿಕಾರ ಮನಸ್ಸಿಗೆ ಮುಟ್ಟುತ್ತದೆ
ಅಗಲಿಕೆ ಮನಸ್ಸು ಮುರಿಯುತ್ತದೆ
ಕ್ಷಣಕಾಲದ ಖುಷಿ ಮನುಷ್ಯನನ್ನು ಬದುಕಿಸಿದರೆ
ದೀರ್ಘಕಾಲದ ದು:ಖ ಸೆರೆವಾಸದಂತೆ

ಆದರೂ ಬದುಕಬೇಕಿದೆ ಸಾಯುವವರೆಗೆ
ಎಲ್ಲವನ್ನು ಹೆಗಲ ಮೇಲೆ ಹೊತ್ತು
ಸಾವೆಂಬ ಸರದಾರ ಕದ ತಟ್ಟುವವರೆಗೆ
ಜಂಜಾಟದ ಬದುಕ ಬಂಡಿಯ ಕೊರಳು ಹರಿಯುವವರೆಗೆ

ಅಲ್ಲಿ ಕೂಡಿದ ಬಡ್ಡಿ
ಇಲ್ಲಿ ಕಳೆದ ಸಾಲ
ಮಣಗಟ್ಟಲೆ ಚಿನ್ನ
ಕೊರಳು ತುಂಬಿದ ಚಿನ್ನದ ಹಾರ

ಯಾರಿಗೊ
ಬಚ್ಚಿಟ್ಟ ಬದುಕನ್ನ
ಕದ್ದವರ್ಯಾರೊ?
ಹೊರಲಾಗದ ಹೊರೆ ಹೊತ್ತವರ್ಯಾರು

ನಾವಲ್ಲದ ನಮ್ಮ ಹುಡುಕಾಟ
ಕೆದುಕುತ್ತಿದ್ದೇವೆ ಈ ನಮ್ಮ ನಿನ್ನೆ ನಾಳೆಗಳನ್ನ
ಕಳೆದದ್ದನ್ನ ಕೂಡಿಸಿದರೆ
ಸಿಕ್ಕದ್ದು ಶೂನ್ಯಸಂಪಾದನೆ.

❖

ನಾಳೆ.......?

ಅಂದು ಎದೆ ಇರಿದ ಆ ನಗೆ
ಸಣ್ಣಗೆ ಬೆಳೆದು ಬೆಳೆದು ಅಗೋಚರ
ಹೃದಯ ತುಂಬ ಬರಿ ನಗುವೆ
ಸ್ಮೃತಿಯಲ್ಲಿ ನೆನಪಿನ ಅಸ್ಥಿಪಂಜರ

ನಕ್ಕ ನಗುವಿನ ಹಿಂದಿನ ರಹಸ್ಯದ ಬೇಧ
ಕುಹಕ
ಮೋಹಕ
ಸಲ್ಲಾಪದ ಉಲ್ಲಾಸ

ಅಗೋ ಅಲ್ಲಿ ಕುಳಿತು ತಾಳೆ ಹಾಕುತ್ತಿಹರು ಪಂಡಿತರು
ಪಾಮರಿಗೇನು ತಿಳಿದೀತು ನಗುವಿನೊಳಮರ್ಮ
ಅಭೇದಿತ ಚಕ್ರವ್ಯೂಹದಂತೆ
ಸಿಕ್ಕವನು ನುಚ್ಚುನೂರು ಹೆಣವಾದಂತೆ

ಛೇ! ಹೀಗಾಗಬಾರದಿತ್ತು ಸಂತಾಪ ಸೂಚಕ ಸಭೆ
ಯಾರಲ್ಲಿ?ರಾಜಾಜ್ಞೆ
ನಕ್ಕವರನ್ನೊಮ್ಮೆ ಹಾಜರು ಪಡಿಸಿ
ಆ ಅವಸ್ಥೆಗೆ ಕಾರಣ?

ಮೌನವೆ ಉತ್ತರ
ನಾನು ಸಾಮಾನ್ಯ ಮನುಷ್ಯ
ನಗುವುದು ಒಂದೇ ನನಗೆ ಗೊತ್ತಿರುವ ಕತೆ
ಅದು ಮತ್ತೊಬ್ಬರ ಘಾಸಿಗೊಳಿಸಿದರೆ ನಾ ಹೇಗೆ ಹೊಣೆ

ಹೇಳುವುದು ಸುಲಭ
ನಗೆ ಮನಸ್ಸಿನ ಅಲ್ಲೋಲ ಕಲ್ಲೋಲಕ್ಕೆ ಕಾರಣ
ಕದಡಿದ ತಿಳಿನೀರು
ಅತಿಯಾದರೆ ಸಾಗರವನ್ನೆ ಪ್ರಕ್ಷೋಭೆಗೆ ಇಡು ಮಾಡಿದಂತೆ

ನೀರೊಳಗಿರ್ದು ಬೆವರಿದ್ದ ದುರ್ಯೋಧನನಿಗೆ
ಅರ್ಥವಾಗದ ಗೊಲ್ಲನ ಕಿರುನಗೆ
ಕುರುವಂಶವನ್ನೆ ನಾಶಪಡಿಸಿತ್ತು
ಶಕುನಿಯ ಕಪಟನಗು ಅರ್ಥವಾಗದಾಯ್ತು ಕುರುಪತಿಗೆ

ನಕ್ಕವರೆ ಹಚ್ಚೆಯ ಕುರುಹು ಅಗದಿರಿ
ನನ್ನೆದೆಯನ್ನ ಕುರುಕ್ಷೇತ್ರ ಮಾಡಲು ನನಗೆ ಮನಸಿಲ್ಲ
ಮೌನವಾಗಿ ಬುದ್ಧನಂತೆ
ಪ್ರಕ್ಷುಬ್ದ ಕಿರು ನಗೆ ನಗ ಬೇಕೆಂದಿದ್ದೇನೆ.

ಹುಡುಕಾಡುತಿದ್ದನೆ ಸತ್ಯವನ್ನು
ನಾನು ಬದುಕಿರುವ ಬದುಕೆ ಸತ್ಯವೊ?
ಮಿಥ್ಯ ಬದುಕಿನ ಸಂಕೀರ್ಣ ಯಾತ್ರೆಯಲ್ಲಿ ನಾನು ಬದುಕಿದ್ದನೆ?
ಸೊಗಲಾಡಿ ಭಾವನೆಗಳು

ಭಾವದ ಪರದೆಯ ಸರಿಸಬೇಕು
ಭವದ ಸುಖವ ತೊಳೆಯಬೇಕು
ಕೃತಕ ನಾಟಕಕ್ಕೆ ತೆರೆಯ ನೆಳೆದು
ಮೌನಿಯಾಗಿ ಮನವ ಕಟ್ಟಿಕೊಳ್ಳಬೇಕು

ಮಮತೆ ಮಮಕಾರಕ್ಕಲ್ಲ ದರಕಾರು
ದುಡಿದು ಸಾಕಬೇಕು ಅಷ್ಟೆ
ಕೆಂಡ ಸಂಪಿಗೆ ಸಂಸಾರ
ದಾಟಬೇಕು ಸಾಗರ ಮನವ ಮಡಿಚಿ ಮುಷ್ಠಿಯಲ್ಲಿ ಹಿಡಿದು

ಬದುಕು ಎಲ್ಲಿದೆ?
ಬರಿ ಕನಸುಗಳ ಹೊತ್ತು ಕಳೆದಕಾಲ
ಕೈಗೆಟುಕದ ಆಸೆಗಳು ಸವಾರಿ ಮಾಡುತಿರಲು
ಮತ್ತೊಬ್ಬರ ಕಾಲು ಹಿಡಿದು ದುಡಿದ ದುಗ್ಗಾಣಿ

ಈ ಬದುಕೆ ಹೀಗೆ ದುಡಿಯಬೇಕು ಹೆಂಡತಿಗೆ
ಮಕ್ಕಳ ಆಸೆ ಈಡೇರುವುದಕ್ಕೆ
ಅವರ ಬೇಡಿಕೆಗಳಲ್ಲಿ
ನನ್ನ ಚಡ್ಡಿಯ ತೂತು ಮುಚ್ಚಿಹೋಗಿತ್ತು

ಮಗ ಬಿಟ್ಟ ಬೂಟುಗಳು
ಹಳೆಯ ಪ್ಯಾಂಟುಗಳೆ ಗತಿ
ಕೈ-ಕಾಲು ಗಟ್ಟಿ ಇರುವಾಗಲೆ ಈ ಸ್ಥಿತಿಯಾದರೆ
ನಾಳೆ.......

❖

ಮನುಷ್ಯನೊಬ್ಬನ ಅಕಾಲಿಕ ಮೃತ್ಯುವಿನ ನಂತರ..

ದೇಹಕ್ಕಂಟಿದ ಜೀವ ಆಕಸ್ಮಿಕವೆಂಬತೆ ಬಿಟ್ಟು ಹೊರಡಲು
ದೇಹದೊಳಗಿನ ಕೀಟಗಳು ಜಡ ದೇಹವನ್ನೇ ಕಿತ್ತು ತಿನ್ನತೊಡಗಲು
ಯಾರೊ ಒಬ್ಬ ಏನಿದು ನಾತ ಗೊಣಗಿದ
ಮತ್ತೊಬ್ಬನೆಂದ ಮಾಡಿದ ಮಹಾಪಾಪ...

ಹೋದ ಜೀವಕ್ಕೆಲ್ಲಾ ಕೇಳಿಸುತ್ತಿತ್ತು
ಪಾಪ ಒಳ್ಳೆಯವನಿದ್ದ ಎಂದರು ಯಾರೊ
ಮೆರೆದವನು ಉರಿಯಲೇ ಬೇಕು ಅಂದ ಇನ್ನ್ಯಾರೊ
ಪರವಾಗಿಲ್ಲ ಅವನ ಪಾಡಿಗೆ ಅವನಿದ್ದ ಇಲ್ಲಿಲ್ಲಾ
ಮಹಾನ್ ದುಷ್ಟನಿದ್ದ ಕಣ್ರಿ

ಚರ್ಚೆ ಮೇಲೆ ಚರ್ಚೆಗಳು ಒಂದಡೆಯಾದರೆ
ಬದುಕಿದ್ದಾಗ ಕೈಮೇಲೆ ನೀರು ಬಿಡಲಿಲ್ಲ
ಅಣ್ಣ ತಮ್ಮಂದಿರಿಗೆ ಏನು ನೋಡಿದ?
ಎಲ್ಲಾ ಹೆಂಡತಿ ಮಕ್ಕಳು ಅವರಿವರಿಗೆ!

ಮಹಾ ಲಂಚಕೋರ ಕಣ್ರಿ ಹೆಂಗೆಂಗೊ ದುಡ್ಡು ಮಾಡಿದ್ದನಂತೆ
ಯಾಕೆ ಅಂವ ಮಾಸ್ತರ್ಕಿ ಅಲ್ವೆ ಮಾಡ್ತಿದ್ದದ್ದು ಇನ್ನೆಂಗೆ ಲಂಚ?
ಮಾಸ್ತರ ತರಕಾರಿ, ಟೊಮಟೊ, ಅಕ್ಕಡಿ ಕಾಳು ಕೇಳಲ್ಲವೆ?
ಹಂಗೆರೀಪ.

ಚಟ್ಟ ತಯಾರಾಗುತ್ತಿದ್ದಂತೆ
ಯಾರೊ ಚಿಟಾರ್ ಅಂತ ಚೀರಿದಂತಾಯಿತು
ಬಹುಶ: ಇಪ್ಪತ್ತು ಮೂವತ್ತು ವರ್ಷ
ಅವನ ಕಾಟ ಸಹಿಸಿದ ಹೆಂಡತಿ ಇದ್ದಿರಬೇಕು
ಅಪ್ಪಾ ಎಂದು ಅಳಲು ಬಾರದ ಮಕ್ಕಳು ಡ್ಯಾಡಿ ಎಂದು ಕೂಗಿದಂತೆ

ಒಡಹುಟ್ಟಿದವರು
ಜೊತೆಯಲ್ಲಿ ಬೆಳೆದವರು
ಸಂಬಂಧ ಬೆಸೆದುಕೊಂಡವರು
ಸ್ನೇಹಗಳಿಸಿಕೊಂಡವರ ಜಾತ್ರೆಯ ಯಾತ್ರೆ

ಅಗೋ ಕೆಲವರು ಚಿತೆಯ ತಯಾರಿಯಲ್ಲಿದ್ದರೆ
ದಡೂತಿ ಮನುಷ್ಯ ನಾಕು ಕಟ್ಟಿಗೆ ಹೆಚ್ಚೆ ಹಾಕಿ- ಹಿರಿಕನಾದೇಶ
ಸಾಕು ಚಿತೆ ಜಾರದಂತೆ ಇಕ್ಕಲು ಹಾಕು ಅನುಭವಸ್ಥ ಉಲಿದ
ಕೊನೆ ಯಾತ್ರೆಯ ಕತೆ ಆರಂಭವಾಗಿತ್ತು

ಇನ್ನೂ ವಯಸ್ಸಿತ್ತು
ಗಟ್ಟಿ ಮುಟ್ಟಾಗೆ ಇದ್ದ
ಯಾರು ಅರಿಯದ ರಹಸ್ಯ ಬೇಧ
ನೆನ್ನೆ ಇದ್ದ ಇವತ್ತಿಲ್ಲಾ ನಾಂದಿ ಹಾಡಿದನೊಬ್ಬ

ಹಾರ ತುರಾಯಿ ತೆಗೆದಿಟ್ಟು
ಉಡುದಾರ ಹರಿದು ಬಿಟ್ಟು
ಮಕಾಡ ಮಲಗಿಸಿ ದೇಹ
ಬೆಂಕಿ ಇಟ್ಟೇ ಬಿಟ್ಟರು ಇಬ್ಬರೂ ಮಕ್ಕಳು

ಹಿರಿ ಮಗನೆದೆಯಲ್ಲಿ ನೋವು ಒಂಟಿತನ
ಕಿರಿ ಮಗನೆದೆಯಲ್ಲಿ ಹೇಳತೀರದ ಅಭದ್ರತೆ
ಇಲ್ಲ ಎನ್ನುವ ಕೊರತೆಯಲ್ಲಿ ಅವಳು
ಎಲ್ಲಾ ಜಂಜಡಗಳಿಂದ ಸ್ವತಂತ್ರನಾಗಿದ್ದ ಅವನು

ಯಾರಿಗೆ ಒಳ್ಳೆಯವನೊ
ಇನ್ಯಾರಿಗೊ ಕೆಟ್ಟವನು
ಯಾರೊ ಪ್ರೀತಿಸಿದರು
ಮತ್ಯಾರೊ ದ್ವೇಷಿಸಿದರು ಅವರವರ ಭಾವಕ್ಕೆ

ಮರುದಿನವೆ ಅವನ ವಾಟ್ಸಾಪ್
ಫೇಸ್‌ಬುಕ್
ಮೊಬೈಲ್‌ನ ರಿಂಗಣ
ಇ–ಮೇಲ್ ನಿಂತು ಹೋಗಿದ್ದವು

ಗೂಗಲ್ ಸರ್ಚ್‌ನಲ್ಲಿ ಯಾವುದೊ ಹಳೆಯ ಮಾಹಿತಿ
ಅಪ್‌ಡೇಟ್ ಆಗದ ಒಂದಿಷ್ಟು ಸುದ್ದಿ
ಅಲ್ಲಲ್ಲಿ ಆಗಾಗ ಅವನು ಒಳ್ಳೆಯ ಕವಿ ಎಂದು ಹೊಗಳಿದ ಸುದ್ದಿ
ಒಳ್ಳೆಯ ಕಥೆಗಾರನೆಂದರು

ಕ್ರಮೇಣ ಎಲ್ಲಾರ ಮನಸ್ಸಿನಿಂದ
ಮೆದುಳಿನಿಂದ ನೆನಪಿನಿಂದ ಡಿಲೀಟ್ ಆಗಿದ್ದ
ತಿಥಿಗೊ ಇಲ್ಲಾ ದೀಪಾವಳಿಯ ಹಿರಿಯರೆಡೆಗೆ ಒಮ್ಮೆ
ವರ್ಷದಾಡೇರ ಪೂಜಾನ ಥಾರ್ಕರನ್ ಲೇಜೊ
(ವರ್ಷದೆಡೆಯನ್ನು ಸ್ವೀಕರಿಸು) ಎಂದಿದ್ದ ಮಗ

ಮರೆತು ಹೋದ ಜಗದ ಜೊತೆಗೆ ಅವನು ಗುದ್ದಾಡುತ್ತಿದ್ದ
ಏನೆಲ್ಲಾ ಮಾಡಿದ್ದ ಹಣ, ಆಸ್ತಿ, ಪುಸ್ತಕ, ಪ್ರಶಸ್ತಿ
ಅವರಿಗೆ ನೌಕರಿ ಕೊಡಿಸಿದ್ದ
ಮತ್ತ್ಯಾರಿಗೊ ಮದುವೆ ಮಾಡಿಸಿದ್ದ ಅವರ್‍ಯಾರಿಗೂ ಈಗ ಅವ ನೆನಪಿಲ್ಲಾ

❖

ನಮ್ಮವರಿಗೆ ದೇವರು ಬಂದಾಗ

ನಮ್ಮವರಿಗೆ ದೇವರು ಬಂದಾಗ ನಮ್ಮ ಭಾಷೆಯಲ್ಲೆ ಮಾತಾಡುತ್ತವೆ !
ಎಯ್ ನನ್ನ ಮರೆತು ಬಿಟ್ಟೇನೋ ಮಗನೆ... ಹೂಂ... ಹೂಂ...
ಎಗ್ಗಿಲ್ಲದೆ ಮುಖದ ಮೇಲೆ ಬೋಯ್ಯುತ್ತವೆ...
ಮನದೊಳಗೆ ಕಲ್ಮಷವಿಲ್ಲದೆ ಬೇಡಿಕೆ ಸಲ್ಲಿಸುತ್ತವೆ.

ನಶೆ ತುಂಬಿದ ಮೆದುಳು, ಅರೆ ಪ್ರಜ್ಞೆಯಲ್ಲಿ ಇವರು ಉಲಿಯುತ್ತಾರೆ.
ಶಾಂತಳಾಗು ತಾಯೇ,
ಏನು ಕಮ್ಮಿ ಮಾಡೀವಿ ಹೇಳು?
ಹೋದ ವರುಷ ಕೊಡಲಿಲ್ಲವೆ ಕೋಣ, ಕುರಿ, ಕೊಳಿ ಬಲಿಯನ್ನ?

ಅದು ಆಗ, ಈಗಿನದು ಹೇಳು?
ಅಯ್ಯೋ ಸುಧಾರಿಸಿ ಕೊಳ್ಳವ್ವ ಕರೆತಲಿ ನರ ಮನುಷ್ಯರು ನಾವು
ಕುಡಿತದ ಪಾಪಪ್ರಜ್ಞೆಯೂ ಇಲ್ಲದೆ ದೇವರೊಂದಿಗೆ ಜಿದ್ದಾ ಜಿದ್ದಿಗಿಳಿದು
ದೇವರು ತಮ್ಮ ಸಮನೆರಿದು ಬಗೆಯುತ್ತಾರೆ.

ನಮ್ಮ ದೇವರುಗಳಾದರೂ ಯಾರು?
ಗುದ್ದಮ್ಮ, ಚೌಡಿ, ಮಾರಿ, ಗಾಳಿದುರ್ಗಮ್ಮ, ಹುಲಿಗೆಮ್ಮ,
ಏಳುಮಕ್ಕಳ ತಾಯಮ್ಮ, ಗಾಳೆಮ್ಮ, ಧೂಳೆಮ್ಮ,
ಅಜ್ಜಮ್ಮ, ಕಾಲುಬಾಯಿಜ್ವರದಮ್ಮ, ಸಾತುಭವಾನಿ, ಮಂಕಾಳಿ,

ಗುಜಾಸತಿ, ಗಡಿದುರಗಮ್ಮ ನೂರ್ಕೋಟಿ ಜನಕ್ಕೆ
ಮೂರ್ಕೋಟಿ ಹೆಣ್ಣು ದೇವರಾದರೂ ಬೇಡವೆ?

ದೇವರು ನಮ್ಮವರ ಮೈಯೊಳಗೆ ಗೊತ್ತಿಲ್ಲದೆ ಪರಕಾಯ ಪ್ರವೇಶ ಮಾಡಿ
ಹೆಚ್ಚೆಂದರೆ ಕುರಿ, ಕೋಳಿ ಬಲಿ ಕೇಳುತ್ತವೆ.
ಕೊಡದಿದ್ದರೆ ಕೊಸರಾಡುತ್ತವೆ.
ಬೇಸರದಿಂದ ಮುನಿಸಿಕೊಂಡು ಮಾಯವಾಗುತ್ತವೆ.

ನಮ್ಮ ದೇವರು ಮೈಮೇಲೆ ಬಂದಾಗ
ತಲೆ ಅಲ್ಲಾಡಿಸಿ, ಉಸ್ಸೆಂದು ಸದ್ದುಮಾಡಿ, ಒಮ್ಮೆ ಹೂಂಕರಿಸಿ
ಬೇವಿನ ಸೊಪ್ಪಿನಿಂದ ಹೊಡೆಸಿಕೊಂಡು,
ಸುಳ್ಳೆಂಬ ಸತ್ಯವನ್ನೋ, ಸತ್ಯವೆಂಬ ಸುಳ್ಳನ್ನೋ, ನುಡಿಸಿ ಪಾರಾಗಿಬಿಡುತ್ತವೆ.

ಆದಿಮ ದೇವರಿಗೆ ಮಡಿ ಮೈಲಿಗೆ ಇಲ್ಲ
ಮುಟ್ಟಾದ ಮಹಿಳೆ ಕೈಯ ನೈವೇದ್ಯವನ್ನು ಸ್ವೀಕರಿಸುತ್ತವೆ
ತಿಂಗಳಾದರೂ ಮೈತೊಳೆಯದ ಪೂಜಾರಿಯ ಮೈಯಲ್ಲೂ ನುಡಿಸುತ್ತವೆ.
ಬಂಡದೇವರು.

ಉಳ್ಳವರ ಮರ್ಜಿಗಿರಬೇಕು ಜಾತ್ರೆಗಳು
ವರ್ಷಕೊಮ್ಮೆ ಮಾರಮ್ಮನ ಹಬ್ಬ
ಬಲಿಕೊಟ್ಟ ಕುರಿಗಳು ಮಾತ್ರ
ಬೀಗರಿಗರ್ದ ಬಂದವರಿಗರ್ದ ಕಡೆಗುಳಿಯುವುದು ಸಾಲದ ಶೂಲ

ನಮ್ಮ ದೇವರು ನರಬಲಿ ಕೇಳುವುದಿಲ್ಲ
ಮಂದಿರ ಕಟ್ಟಿಸು ಎಂದು ಹೇಳುವುದಿಲ್ಲ.

ಕಾಯಿ ಹೊಡೆದರು ಸೈ - ಕೈ ಮುಗಿದರೂ ಸೈ
ಕೋಮುವಾದವನೆಂದು ಬಿತ್ತುವುದಿಲ್ಲ.

ತಿಳಿದಿಲ್ಲ ಇವಕ್ಕೆ ಅಮವಾಸ್ಯೆಯ ಗಮ್ಮತ್ತು
ಚರಂಡಿಯೊಳಗೆ ಕೂತ ತಲಪಟರಾಯನ ಪಡಿಪಾಟಲು
ಪರರ ಸ್ವತ್ತು ಬೇಡದ ಕರುಣಾಳು
ಕೊಟ್ಟರಷ್ಟೇ ಪಡೆಯುವ ದಯಾಳು

ನಮ್ಮವರಿಗೆ ದೇವರು ಬಂದಾಗ ನಮ್ಮಂತೆ ಮಾತನಾಡುತ್ತವೆ,
ಸಿಟ್ಟಾಗುತ್ತವೆ, ಬೈದರೂ ಬೈಯಿಸಿಕೊಳ್ಳುತ್ತವೆ, ಹಿಂತಿರುಗಿ ಬೊಯ್ಯುತ್ತವೆ.
ಎಂದೂ ಮನುಷ್ಯನ ಮನಸ್ಸು ನೋಯಿಸದ
ಮನುಜ ಪ್ರೇಮದ ದೇವರು ನಮ್ಮೊಂದಿಗೆ ಮಾತನಾಡುತ್ತವೆ.

❖

ಮಾಯಾಂಗನೆ

ನನ್ನ ಕನಸ ತುಂಬಾ ಅವಳದ್ದೆ ಕರಾಮತ್ತು
ಮೆಲ್ಲಗೆ ಅಪ್ಪಿಮುದ್ದಾಡುತ್ತಿದ್ದಾಳೆ
ಬೆಚ್ಚನೆಯ ಆಲಿಂಗನದಲ್ಲಿ ಮೈ ಮರೆಸಿ
ನನ್ನಾಳಕ್ಕೆ ಇಳಿದಿಳಿದು ಆಕ್ರಮಿಸುತ್ತಿದ್ದಾಳೆ.

ಅವಳು ಚಂದ್ರ ಚಕೋರಿಯೊ
ಜಗತ್ತಿನಲ್ಲಿಲ್ಲದ ಸುರಸುಂದರಿ
ನಿದ್ದೆಯಲ್ಲೂ ಹೌಹಾರಿ ಮೇಲೆದ್ದು,
ಗಂಟಲು ಒಣಗಿದಂತಾಗಿ ನೂರು ಡಿಗ್ರಿಯಷ್ಟು ಬೆಚ್ಚಗಿನ
ನೀರು ಕುಡಿದು ಅಡ್ಡಾದೆ.

ಓಡುತ್ತಿದ್ದ ಜಗತ್ತು ಗಕ್ಕನೆ ನಿಂತಂತಾಗಿ
ಜಗದ ನಿಯಮವೆ ಬದಲಾಗಿದೆ
ಬರೆದ ಇತಿಹಾಸದ ಹಾಳೆಯ ಮೇಲೆ
ತೆರೆ ಬಂದು ಅಳಿಸಿ ಹಾಕಿದಂತೆ

ನಾನೆ ಎಂಬ ಮಗನ ಅಹಂಕಾರವ ಇಳಿಸಿ
ಗ್ವಾಮಳಕ್ಕೆ ಕೈ ಹಾಕಿ ಉಸಿರುಗಟ್ಟಿಸಿ
ನೂರು, ಸಾವಿರ ಅಲಕ್ಷಿಸಿದರೆ ಲಕ್ಷವಾಗಿ
ಹೆಗಲ ಮೇಲೆ ಅಂತಿಮ ಪಯಣ.

ರಕ್ತ ಬಿಜಾಸುರನ ಮಗಳೊ?
ನಾಗಕನ್ಯೆಯೊ?
ವಿಷಕನ್ಯೆಯೊ?
ಇಲ್ಲ ಕನ್ನಡಿಯೊಳಗೆ ಅವಿತು ಕುಂತ ಬ್ರಹ್ಮರಕ್ಕಸ ?

ಕಣ್ಣು ಬಿಟ್ಟರೆ
ಮಾಧ್ಯಮಗಳ ತುಂಬ ಅವಳದ್ದೇ ಚರ್ಚೆ
ಚೀನಾ, ಇಟಲಿ, ದಕ್ಷಿಣಾ ಕೋರಿಯಾ ದಾಟಿ
ಜಗದ ತುಂಬೆಲ್ಲಾ ಅವಳ ರುದ್ರನರ್ತನ.

ಎಷ್ಟೋ ಮಾರಿ ಹೆಮ್ಮಾರಿಗಳು ಅಳಿದುಳಿದು ಹೋದರೂ
ಬೆಚ್ಚಿ ಬೀಳದ ಜಗ
ಇವಳಿಗೇಕೆ ಇಷ್ಟೊಂದು ಆದರಿಸುತ್ತಿದೆ?
ಪ್ರಶ್ನೆಯಾಗಿ ನನ್ನೊಳಗೆ ಉಳಿದಿತ್ತು.

ಕಾಲ ಸರಿದಂತೆ ಹೆಮ್ಮಾರಿಯೂ ದೇವರಾಗಿ
ಯಾವುದೊ ಒಂದು ರೂಪ ಧರಿಸಿ
ಕರೋನಮ್ಮ ತಾಯೆ ಉಧೋ- ಉಧೋ
ಅನ್ನೋ ಕಾಲದೂರವಿಲ್ಲ.

ಕನಸೊ ಭ್ರಮೆಯೊ ಯಾವುದು ನಿಜ
ಸ್ಪಷ್ಟತೆಯನ್ನ ಹುಡುಕಾಡುತಿದ್ದೇನೆ
ಕರೋನಾ ಜನಿಸಿದ್ದಾದರೂ ಹೇಗೆ?
ಜಿಜ್ಞಾಸೆಯಲ್ಲಿ ಜಗತ್ತಿನ ಜೊತೆ ನಡೆಯುತ್ತಿದ್ದೇವೆ.

❖

ರುದ್ರನರ್ತನ

ಮುಟ್ಟಿದ್ದೆ ತಡ ಅವಳು ಮೆಲ್ಲಗೆ ಮೆಲ್ಲಗೆ
ನನ್ನೆಡೆಗೆ ಬಂದು ಒಂದಾಗ ತೊಡಗಿದಳು
ನನ್ನ ಮೈಯೊಳಗೆ ಆರ್ವಿಭವಿಸಿ
ಒಂದೇ ಸ್ಪರ್ಶದಲ್ಲಿ ಇಷ್ಟೊಂದು ಗಾಢ ಸಂಬಂಧವೆ?

ಗಂಟಲಿನಿಂದ ಹೃದಯಕ್ಕೆ ಪ್ರವೇಶಿಸಿ
ಪ್ರೀತಿಯ ಕಚಗುಳಿಯಿಟ್ಟು ನೂರ್ಮಡಿಸಿದಳು
ನೆನಪುಗಳ ಸರಮಾಲೆಯಂತೆ ನಲಿನಲಿದು
ಅಸಹಾಯಕನಾಗಿದ್ದೆ ಅವಳ ಪ್ರೀತಿ ಸ್ಪರ್ಶದೆದುರಿಗೆ

ದೇಹದ ತುಂಬೆಲ್ಲ ಅವಳ ಪ್ರೀತಿಯ ರುದ್ರ ನರ್ತನ
ಸೋತು ಸುಣ್ಣವಾಗಿದ್ದೆ ಅವಳ ಪ್ರೀತಿಯೆದುರಿಗೆ
ಪಾತ್ರಧಾರಿಯಂತೆ ಸರದಿಗಾಗಿ ಕಾದಿದ್ದೆ
ತಣ್ಣಗೆ ನನ್ನ ಸಾವಿನ ಚೀಟಿ ಹರಿದಿದ್ದಳು

ಹೌಹಾರಿ ಎಚ್ಚರಗೊಂಡಾಗ
ಜಗದ ತುಂಬ ಅವಳದ್ದೆ ಮಾತು
ಮೈಮರಿತೀರಿ ಎಚ್ಚರ
ಜಾಹಿರಾತುಗಳ ಮೇಲೆ ಜಾಹಿರಾತು

ನಿಸ್ತೂಕ ದೇಹ ಕೆಮ್ಮಲಾಗದಷ್ಟು ಕ್ಷೀಣಿಸಿದ ಶಕ್ತಿ
ಸಂಪರ್ಕ ಕಡಿದ ನೆಟ್‌ವರ್ಕ್‌ನಂತೆ
ಅನಾಥ ಹೆಣವಾಗಿದ್ದೆ
ನನ್ನಬಿಟ್ಟು ಬೇರೆಯವರ ದಾರಿ ಕಾಯುತ್ತಿದ್ದಳು ಕರೋನಾ

ನನ್ನ ಜೊತೆಯಾಡಿದ ಹುಡುಗಾಟವ ಮರೆತು
ನನ್ನಂತೆ ನೂರಾರು ಸಾವಿರಾರು ಜನರ ಎದೆಗೆ ಲಗ್ಗೆ ಹಾಕಿ
ಮನುಜ ಕುಲದ ನಿರ್ನಾಮಕ್ಕೆ
ಪಣ ತೊಟ್ಟ ಪ್ರಕೃತಿ ನಿಯಮದಂತೆ

❖

ಕಾಯುತ್ತಿದ್ದಾರೆ

•

ಕರೋನಾ ನನ್ನ ಅಸ್ತಿತ್ವದ ಬೇರನ್ನೆ ಅಲುಗಾಡಿಸಿದೆ
ಬಂಗಲೆಯ ಅಡಿಪಾಯ ಕುಸಿದಂತೆ
ನನಗೆ ನಾನೆ ನಿರ್ಬಂಧ ಹೇರಿಕೊಂಡತೆ
ಟಿವಿ ಯಲ್ಲಿ ಸ್ವಾಮೀಜಿಯೊಬ್ಬ ಕಲಿಯುಗದ ಅಂತ್ಯ ಹಾಡುತ್ತಿದ್ದಾನೆ.

ಒಟ್ಟಿಕೊಂಡಿರುವ ಕಂತೆಗಳು
ನೂರಾರು ಎಕರೆ ನೀರಾವರಿ ತೋಟ
ಕೊಳೆಯುತ್ತಿರುವ ಚಿನ್ನ
ಯಾರೊ ಕೂಗುತ್ತಿದ್ದಾರೆ ಎಲ್ಲಾವೂ ನಶ್ವರ

ಒಮ್ಮೆ ಭಯದಿಂದ ಕಂಪಿಸಿದ್ದೆ
ಕರೋನಾ ಬಂದರೆ ಸಂಬಂಧಗಳೆ ತುಂಡಾಗಿ
ಯಾರೂ ಹತ್ತಿರ ಸುಳಿಯದ ಒಂಟಿ ಬದುಕು
ನಾಕು ಹೆಗಲು ಸಿಗದ ಕೊನೆಯ ಪಯಣ

ಅಲ್ಲಿ ಬಂತು, ಇಲ್ಲಿ ಬಂತು
ಜನರು ಗುಲ್ಲೋ ಗುಲ್ಲು
ನಗರದ ದಾರಿಗಳಲ್ಲಿ ನೀರವತೆ
ಬೀದಿಗಳಲ್ಲಿ ಸ್ಮಶಾನ ಮೌನ

ಯಾರೋ ಹೇಳಿದ ಮಾತು ಎದೆಗೆ ಬಡಿಯಿತು
ಲಕ್ಷಗಟ್ಟಲೆ ದುಡಿಯುವವರಿಗೆ ಇರಬಹುದು ಕರೋನಾಳಾ ಭೀತಿ
ಪ್ರತಿಕ್ಷಣ ಸಾಯುತ್ತಿರುವ ರೈತ ಕರೋನಾಳ ನಡುವೆ ಬದುಕಿದ್ದಾನೆ.
ಬರಬಾರದೆ ಮಾಹಾಮಾರಿ, ಸಾಲದ ಶೂಲಕ್ಕೇರಿದ
ಬಡವರಿಗೆ ನಿಶ್ಚಿಂತೆಯ ಉತ್ತರ

ಒಳ ಭೀತಿಯಿಂದಲೆ ಸಾಯುತ್ತಿರುವ ನನ್ನಂತವರಿಗೆ
ಮಾದ್ಯಮಗಳು ಮದ ಏರಿಸುತ್ತಿವೆ.
ಸುದ್ದಿಗಳಿಗೆ ಹೆದರಿ ಸಾಯುತ್ತಿದ್ದಾರೆ ಇಲ್ಲಿ ದಿನನಿತ್ಯ
ಹಳ್ಳಿಗಳಲ್ಲಿ ಮಾಲೆ ಹಿಡಿದು ಕಾಯುತ್ತಿದ್ದಾರೆ
ಕರೋನಾಳ ಆಗಮನಕ್ಕೆ.

❖

ಅರಿತು ನಡೆದಷ್ಟು

ಸಂಸಾರವೆಂಬ ಭವಸಾಗರ
ಅರ್ಥವಿಹೀನ ಹೊತ್ತ ಹೊರೆ ಕಾಣ
ಭವದ ಬಂಧವಿಲ್ಲದ ಸಂಬಂಧ
ಬದುಕಿನ ಅನಿವಾರ್ಯ ಕಾರಣ

ಕೊರತೆಯ ಕೂಪ
ಗಂಡ ದಂಡಪಿಂಡ ವೆಂಬ ಪ್ರತಾಪ
ದುಡಿದು ದಡ್ಡನಾದನೆ ಅಯ್ಯೋ ಪಾಪ
ಕೆಲಸಕ್ಕಿಲ್ಲದ ಮಕ್ಕಳದ್ದೇ ಪ್ರತಾಪ

ಬಂಡಿ ಎಳಿಯಬೇಕು
ಬದುಕಿದಷ್ಟು ದಿನ
ಸಮಾಜದ ಕಟ್ಟಪ್ಪಣೆ ಮೀರಿ
ನೂರು ಚಿಂತೆಗಳ ನೂಕಿ ಮೆರಿಯಬೇಡ

ಅರಿತು ನಡೆದಷ್ಟು ದಾರಿ ದೂರ
ಸಿಂಬಳದೊಳು ಸಿಕ್ಕ ನೊಣದಂತೆ
ಬಿಟ್ಟೆನೆಂದರೂ ಬಿಡದಿ ಮಾಯೆ
ಜಗದ ಎಲ್ಲಾ ವ್ಯವಹಾರಗಳಿಗೆ ನಾಂದಿ

ಹೀಗೆ ಎನ್ನುತ ನನ್ನಪ್ಪ ನಶಿಸಿಹೋದ
ಅವರು ಹೇಳುತ್ತಾರೆ
ಈಜಬೇಕು ಇದ್ದು ಜೈಸಬೇಕು ಎಂದು
ನೆಲೆ ಇಲ್ಲದ ಸಂಸಾರ ಸಾಗರದಲ್ಲಿ ಈಜವುದೊಂದೆ

ಜಯ ಯಾರಿಗೆ?
ಕುಹಕಿ, ದುಷ್ಕೃತ್ಯ ಮಾಡುವ ಪಾಪಿಗೆ
ಪಾಪಿಗಳದೇ ಕಾರುಬಾರು
ಸವಲತ್ತು ಅವರಿಗೆ ಏನೂ ಇಲ್ಲದ ಪಂಡಿತರಿಗೆ

❖

ಸಾವಿನ ನಂತರ

ಮನ್ನೆ ಎಲ್ಲರಂತೆ ಭೂಲೋಕಕ್ಕೆ ವಿದಾಯ ಹೇಳಿದೆ
ಆದರೆ
ನನ್ನ ಫೇಸ್‌ಬುಕ್, ವ್ಯಾಟ್ಸ್ ಅಪ್, ಇನ್ಸ್ಟಾಗ್ರಾಂ,
ಟೆಲಿಗ್ರಾಂಗಳು ಚಾಲನೆಯಲ್ಲಿವೆ
ನೀವು ನೇರವಾಗಿ ವಿಷಯ ಕಳಿಸಬಹುದು

ಒಂದು ಮನವಿ
ಕಳಿಸುವುದಾದರೆ ಸ್ವಚ್ಛ ಸಮಾಜದ ವಿಷಯವಿರಲಿ
ಕೊಳಕು ರಾಜಕಾರಣದ ದುರ್ಗಂಧ
ಲೂಟಿ ಅಧಿಕಾರಿಯ ದರ್ಪದ ದುರ್ನಾತ ಬೇಡ

ಸಾಕಾಗಿದೆ ಭೂಲೋಕದಲ್ಲಿ
ಸಮಯ ಸಾಧಕರ ಪಿತೂರಿ
ಬರಿ ಬಕೇಟು ಹಿಡಿಯುವ ನಪುಂಸಕರ ನರ ಸತ್ತ ವರ್ತನೆ
ನಾಚಿಗೆ ಗೇಡು ಬದುಕ ಬದುಕಿದವರ ಭದ್ಮಾಷ್‌ಗಿರಿ

ನಾನೀಗ ಕೇಳಬಲ್ಲೆ
ಕಿವಿಯಲ್ಲಿ ಉಲಿಯುವ ಪಕ್ಕದವನ ಮೇಲಿನ ಪಿತೂರಿ ಮಾತ
ಎಷ್ಟು ದಿನ ಮರ್ಯಾದೆ ಗೇಡು ಬದುಕು
ಆತ್ಮ ಕೊಂದು ಬದುಕಿರುವ ಪಾಪಿಗಳ ದಂಡು

ನನ್ನ ಫೇಸ್‌ಬುಕ್ ಯಾರೋ ಹ್ಯಾಕ್ ಮಾಡಿದ್ದಾರೆ
ನನ್ನವಲ್ಲದ ಕೋರಿಕೆಗಳ ಸಲ್ಲಿಸಿ ನೀಲಿ ಚಿತ್ರಗಳ ಜೊತೆ ಚೆಲ್ಲಾಟವಾಡುತ್ತಿದ್ದಾರೆ
ಬರಿ ಲಲನೆಯರ ಜೊತೆ ಚಾಟ್ ನಡೆಸಿದ್ದಾರೆ
ಜೀವವಿಲ್ಲದ ಆತ್ಮಕ್ಕೆ ಏನೂ ಮಾಡದ ಸ್ಥಿತಿ

ನನ್ನದೆ ಮುಖ ಪುಸ್ತಕದಲ್ಲಿ ನನ್ನ ಶ್ರದ್ಧಾಂಜಲಿಯ ಸುದ್ದಿ
ವಾಟ್ಸ್ ಆಪ್ ಗುಂಪುಗಳಲ್ಲೆಲ್ಲ ನನ್ನ ನಿಧನದ್ದೆ ಚರ್ಚೆ
ಕೆಲವರು ಮಹಾನ್, ಮತ್ತೆ ಕೆಲವರು ತುಂಬಲಾರದ ನಷ್ಟ
ಎಲ್ಲವು ಕೃತಕ

ವಾಸ್ತವವೇನು?
ಚಿಂತಿಸಲೀಗ ನನಗೆ ತಲೆ ಇಲ್ಲ
ಭೂಮಿ ಮೇಲೆ ನಡೆಯುತ್ತಿರುವುದಕ್ಕೆ ನಾನು
ಕೇವಲ ಮೂಕ ಪ್ರೇಕ್ಷಕ

❖

ಶವಗಳೆದ್ದು ಪ್ರಶ್ನೆ ಕೇಳುತ್ತಿವೆ

ಇವಳು ಹಾಗೆ ಬೆತ್ತಲಾಗುತ್ತಾಳೆ
ಮಂದ ಬೆಳಕಿನ ಲೈಟು ಉರಿಯುತ್ತಲೆಯಿದೆ
ಮಂಡಿಯೂರಿ ಕುಳಿತವರು
ರಾಜಕಾರಣಿಯೋ ಇಲ್ಲ ಅಧಿಕಾರಿಯೋ

ಆಕ್ಸಿಜನ್ ಸಿಗದ ಹೆಣಗಳು ಕೇಳುತ್ತಿವೆ
ಮೊದಲು ನೀವು ಸುಮ್ಮನಿರಿ
ನಾವೀಗ ಲಾಕ್‌ಡೌನ್ ನಲ್ಲಿದ್ದೇವೆ
ಅದು ಮುಗಿದ ಮೇಲೆ ಇನ್‌ಕ್ವೈರಿ ಕಮೀಟಿ ನೇಮಿಸೋಣ

ಪೋಲೀಸರು ಕಸು ಕಿತ್ತು ಲಾಟಿ ಬೀಸುತ್ತಿದ್ದಾರೆ
ಅಮಾಯಕರ ಮೇಲೆ
ರೆಮಿಡಿಸವರ್ ತುಂಬಿಕೊಂಡ ಶ್ರೀಮಂತರ ಕಾರುಗಳು ಅಡ್ಡಾಡುತ್ತಲೆ ಇವೆ
ಶವಗಳಿಗೆ ಮತ್ತದೆ ಮಾತು ನೀವು ಸುಮ್ಮನಿರಿ ಇನ್‌ಕ್ವೈರಿ ಕಮೀಟಿ ಮಾಡೋಣ

ಥೀ ಆಸ್ಪತ್ರೆಯಲ್ಲಿ ಸೀಟು ಬುಕಿಂಗ್ ಆಗುತ್ತಿವೆ
ಎಂದು ಬಾಂಬು ಹಾರಿಸಿದ
ಖೂಳನ ಹೆಸರಿನ ಮೇಲೆ ಎಷ್ಟೊ ಆಸ್ಪತ್ರೆಗಳಲ್ಲಿ ಬುಕಿಂಗ್ ಆಗಿವೆ
ಅಯ್ಯೊ ಸುಮ್ಮನಿರಿ ಶವಗಳೆ ಇನ್‌ಕ್ವೈರಿ........

ಕರೋನ ನಿನ್ನ ಬೆತ್ತಲೆ ದೇಹದ ಮುಂದೆ
ಬಡವರನ್ನು ಲೂಟಿ ಮಾಡಿದವರಿಗೆ ಏನು ಶಿಕ್ಷೆ
ಶವಗಳೆದ್ದು ಪ್ರಶ್ನೆ ಕೇಳುತ್ತಿವೆ
ಅವರ ದಾಸಿಯಾಗಿರುವ ಕರೋನ ಈಗ ಮಾತನಾಡದ ಸ್ಥಿತಿ

❖

ಹೀಗೊಂದು ಮದುವೆ ಫೋಟೊ ಫ್ರೇಮಿನಲ್ಲಿ

ಆ ಕಡೆಯಿಂದ ಅವರು ಬರುತ್ತಿದ್ದರು ಈ ಕಡೆಯಿಂದ ಇವರೂ ಬರುತ್ತಿದ್ದರು
ಯಾರೋ ವರನ ಕಡೆಯವರು ದಡೂತಿ ದೇಹವನ್ನ
ತನ್ನ ಸ್ವಯಾರ್ಜಿತ ಸೊತ್ತು ಎಂಬಂತೆ ನುಗ್ಗಿಸಿದ
ವಧುವಿನ ಕಡೆಯವರು ಹುಡುಗಿ ನಮ್ಮವಳು ಎಂದು ಒತ್ತುವರಿ ಮಾಡಿದ್ದರು.

ಜನರ ದೊಡ್ಡ ಗುಂಪು ಒಬ್ಬರ ಮೇಲೊಬ್ಬರು ಮುಗಿಬಿದ್ದು
ತಾನು ಕಾಣಬೇಕು, ನಾನು ಕಾಣಬೇಕು ಎನ್ನುವ ತರಾತುರಿ
ಹುಡುಗನಪ್ಪನ ದೇಶಾವರಿ ನಗೆ
ಹಿಂದಿಂದೆ ಮಗನ ಹೆತ್ತವಳು ನಾನೆಂದ ತಾಯಿ

ಇನ್ನೂ ಹುಡುಗಿಯ ಕಡೆಯವರು ಬಿಟ್ಟಾರೆ
ಜಬರದಸ್ತ್ ಎಂಟ್ರಿ ಕೊಟ್ಟಳು ತಾಯಿ
ಇಡಿ ಫ್ರೇಮಿನ ತುಂಬ ಅವರೆ
ನಾನು ಮತ್ತು ನನ್ನ ಗೆಳೆಯರು ಎಲ್ಲರ ನಡುವೆ ಸ್ಯಾಂಡ್ವಿಚ್ ಆಗಿದ್ದೆವು

ಯಾವತ್ತೊ ಒಂದು ದಿನ ಹುಡುಗ ನೀವು ಒಮ್ಮೆ ಆಲ್ಬಂ ನೋಡಬೇಕು
ಬೇಕು ಬೇಡಗಳ ಸಂದಿಗ್ದದಲ್ಲಿದ್ದೆ
ನೋಡಿ ನೀವಿಲ್ಲಿ ಯಾರೊ ಕೂಗಿದರು
ನಿಮ್ಮ ಕಣ್ಣುಗಳು ತುಂಬ ತೀಕ್ಷಣ – ನಾನು ಹುಡುಕಾಡುತ್ತಿದ್ದೆ

ಹೌದು ಫೋಟೊ ಫ್ರೇಮಿನಲ್ಲಿದ್ದೆ
ಗುರುತಿಸಲಾಗದಷ್ಟು ಖರಾಬು
ನನ್ನೊಳಗಿನ ಗೊಂದಲ ಹೇಳಲಾಗದೆ
ಹೇಳಿದ್ದಕ್ಕೆಲ್ಲಾ ಹೂಂ ಅಂದು ನಡೆದಿದ್ದೆ.

❖

ಏಳು ಪದರಗಳಲ್ಲಿ ಅವಿತ ವಿಸ್ಮಯಲೋಕ

ಅವ್ವನ ಏಳು ಪದರಿನ ಚೀಲ ಒಂದು ಕೌತುಕ
ಪದರಗಳೊಮ್ಮೆ ಸಮ್ಮಿಶ್ರ ಸರ್ಕಾರದಂತೆ ಕಂಡರೆ
ಒಮ್ಮೊಮ್ಮೆ ಘಟ್ ಬಂಧನ್‌ಗೊಂಡ ಪಾರ್ಟಿಗಳಂತೆ
ಹೌದು ಅದೊಂದು ಸಣ್ಣ ದಿನಸಿ ದುಖಾನ್.

ಏಳರಲ್ಲೇನಿದೆ ಎಂಬುದು ಯಕ್ಷ ಪ್ರಶ್ನೆ
ಒಂದರಲ್ಲಿ ಕವಳಗಿ ಎಲೆ
ಒಂದರಲ್ಲಿ ಕಾಚು
ಮತ್ತೊಂದರಲ್ಲಿ ಸಣ್ಣಗಾಳು

ಮುಂದಿನದೊಂದರಲ್ಲಿ ಸೊಂಪು
ಅದರ ಮುಂದಿನದರಲ್ಲಿರಬಹುದು ಬಜ್ಜಿ
ಹಾಗಾದರೆ ಕಾಸು?
ಅದೇ ಬಿಡಿಸಲಾಗದ ಕಗ್ಗಂಟು

ಅವ್ವ ಬುಡ್ಡಿಚೀಲವನ್ನು ಸೀರೆಗೆ ಸಿಗಿಸಿದ್ರೆ
ಮತ್ತೊಮ್ಮೆ ಕಾಂಚಳಿಯ ಒಳಗೆ
ಯಾಕಿಂಗೆ?
ತಲೆ ಕೆರ್‍ಕೊಂಡು ಕೇಳಬೇಕೆಂದಿದ್ದೆ.

ಒಮ್ಮೆ ರೊಕ್ಕದಾಟದಲ್ಲಿ ಸೋತ ದುಡ್ಡು ವಾಪಾಸು ಪಡೆಯಲು
ಚಂಚಿಯನ್ನು ಹುಡುಕಲು ಹೊಂಚು ಹಾಕಿದ್ದೆ
ಏಳು ಪದರಗಳಲ್ಲಿ ಕಾಸೆ ಸಿಗಲಿಲ್ಲ
ಸಂಜೆ ಹೆಂಡಕ್ಕೆ ಅದೆಲ್ಲಿಂದ ತಗದಳೊ ಹತ್ತರನೋಟು.

ಅದೊಂದು ವಿಸ್ಮಯ ಲೋಕ
ಒಂದು ಕೌಳಗಿ ಎಲೆ ಗೊಂದು, ಅಡಿಕೆಗೊಂದು
ಆದರೆ ಸುಣ್ಣದ ಡಬ್ಬಿಗೆ ಮಾತ್ರ
ಸಂಖ್ಯೆ ಕಡಿಮೆಯಿದ್ದರು ಸೇರಿಕೊಂಡು ಸರ್ಕಾರ ಮಾಡುವಂತೆ

ಧಿಡೀರ್ ಡಬ್ಬಿಗೊಂದು ದೊಡ್ಡಸ್ಥಾನ.
ಅಲ್ಲಾ ಯಾವ ಸಿಂಪಿಗ ಹೊಲೆದಿರಬಹುದು ಪುರುಸತ್ತಿಂದ
ಒಂದಾದ ಮೇಲೆ ಒಂದು ಕರಾರುವಕ್ಕಾಗಿ ಏಳು.
ಯಾಕೆ ಎಂಟಾಗಬಹುದಿತ್ತು

ಒಂದು ಬೆಸ ಏಕೆಂದು ಕೇಳಿದೆ
ಸಪ್ತಮಾತ್ರಿಕೆಯರು, ಸಪ್ತ ಸ್ವರಗಳು
ಇತ್ಯಾದಿ ಇತ್ಯಾದಿಗಳ ತೇದಿ ದೊಡ್ಡದಾಯ್ತು,
ಆಟದ ಚಟಕ್ಕೆ ಕಾಲು ನಿಲ್ಲದಾಗಿ ಓಡಿದ್ದೆ.

ಅವ್ವ ಸಂತೆಗೆ ಹೋದರೆ ಗನಿಸಾಬಿಗೆ ಭೋ ಖುಷಿ
ಅರೆ ಆಯಾ ದೇಕೊ ನಮ್ದುಕೆ ಅರ್ಧ ದುಖಾನ್
ಅಂತ ಅರೆಗನ್ನಡದಲ್ಲಿ ಮಾತಾನಾಡಿದ್ದ.
ರೂಪಾಯಿದಿದು, ನಾಕಾಣಿಯದ್ದು ಖರೀಧಿಯ ಸರದಿ.

ಅವ್ವನ ಬುಡ್ಡಿಚೀಲ ಗನಿಸಾಬಿಯ ಸಣ್ಣ ದುಖಾನಿನಂತಿತ್ತು
ಏಳು ಪದರಗಳ ಮಾಯಾಲೋಕ.
ಕೌಳಗಿ ಎಲೆಮಡಚಿ ಒಂದು ಪದರದಲ್ಲಿಟ್ಟು
ಆಗಾಗೆ ರಸಗವಳದ ರುಚಿ ನೋಡುತ್ತಿದ್ದಳು.

ಕೆಲವರು ಕಡ್ಡಿಪುಡಿಯ ಸಂಗಯ್ಯನಂತೆ
ಎಲೆಗೆ ಸುಣ್ಣ ಸವರಿ ಬಾಯಿಗಿಟ್ಟೊಡೆ ಕೈಗೆ ಮತ್ತೊಂದು ಕೆಲಸ
ಹಿಡಿ ಕಡ್ಡಿಪುಡಿಗೆ ಸುಣ್ಣವ ಬೆರೆಸಿ ತಿಕ್ಕಿದ್ದೇ ತಿಕ್ಕಿದ್ದು
ಬಾಯಿ ತಗದು ಸಿಕ್ಕ ಜಾಗದಲ್ಲಿ ಉಗಿಳಿದ್ದೆ ಉಗಿಳಿದ್ದು.

ಅವ್ವ ತಂಬಾಕು, ಕಡ್ಡಿಪುಡಿಯಿಂದ ದೂರ
ಏಕೆಂದರೆ ಕೈ ಹಾಕಿದರೆ ಇಡಿ ಮಸಾಲೆಯ ಡಬ್ಬಿನೆ ಸಿಗತಿತ್ತು
ಒಮ್ಮೊಮ್ಮೆ ನನಗೆ ದಿನಸಿ ಅಂಗಡಿಯ ನೆನಪು ತಂದಿತ್ತು
ಅದು ಕಾಲದ ಮನೋರಂಜನೆಯ ಭಾಗವೂ ಆಗಿತ್ತು.

ಟೀವಿ ಕಂಡವಳಲ್ಲ, ರೇಡಿಯೋ ಕೇಳಿದವಳಲ್ಲ
ಜನರ ನಡುವೆ ಹುಟ್ಟಿದ ಹಾಡುಕೇಳಿ ಕುಣಿದು ಕಾಲಕಳೆದವಳು
ಆಸರಕ ಬ್ಯಾಸರಕ ಎಲೆ ಅಡಿಕೆ ಹಾಕುವಳು
ಅಜ್ಜಿಯ ತೊಡೆಮೇಲೆ ಕುಂತು ಅಜ್ಜಿ ಬಾಯಿಯೊಳಗಿನ
ಜಗಿದ ಎಲೆ ಅಡಿಕೆಗೆ ಕಾಳಗ ಮಾಡಿದ ಮೊಮ್ಮಕ್ಕಳಿಗೆ
ಅವ್ವನ ಚಂಚಿ ನೆಪ್ಪಿಲ್ಲವಂತೆ.

ಕಾಚು, ಸಣ್ಣಗಾಳು, ಬಜ್ಜಿ, ಗಸಗಸಿ
ಒಂದೊಂದು ಪದರದಲ್ಲಿ ರಾರಾಜಿಸುತ್ತಿದ್ದರೆ
ಅಡಿಕೆಗೆ ಒಂದು ಪದರು ಮೀಸಲು

ಸುಣ್ಣದ ಡಬ್ಬಿ ಮಾತ್ರ ಏಳೂ ಪದರಗಳಲ್ಲಿ ಪವಡಿಸುತಿತ್ತು
ಒಮ್ಮೊಮ್ಮೆ ನಮ್ಮ ಇವತ್ತಿನ ಘಟ್‌ಬಂಧನ್ ಸರ್ಕಾರದ ಪಕ್ಷಗಳಂತೆ

ಕೆಸಿಡಿಯ ದಿನಗಳಂದು ಅವ್ವನಿಗೆ ವಸೂಲಿ ಹಚ್ಚಿ
ಹಿಂದೆ ಅವಿತುಕೊಂಡಾಗ ಅಪ್ಪ ಉಗುಳು ಹಚ್ಚಿ ಎಣಿಸಿ
ಎಣಿಸಿ ಕೊಟ್ಟರೂ ನೂರೈವತ್ತು ಸೇರುತಿತ್ತು.
ಅವ್ವನ ಒಳಖಾತೆಯಲ್ಲಿದ್ದ ಸಿಲ್ಕ ತೆಗೆದು ಅಚ್ಚರಿ ಮೂಡಿಸುತ್ತಿದ್ದಳು.

❖

ಮನಸ್ಸೆಂಬ ಮಾಯಾವಿ ಕುದುರೆ

ಒಳ ಜಗತ್ತಿನ ಕೊಳಕುತನವ
ಮುಗುಳು ನಗೆಯೊಂದು ಮುಚ್ಚಿಟ್ಟು
ದೊಡ್ಡ ಮನುಷ್ಯರಾಗಿ
ಮೆರೆಯುತ್ತೇವೆ ಹೊರ ಜಗತ್ತಿನಲ್ಲಿ.

ಮನಸ್ಸೆಂಬ ಊಸರವಳ್ಳಿ ಪಿಸಿಪಿಸಿದು
ಮಾಡಬಾರದ್ದ ಮಾಡಿಸಿ
ವ್ಯಕ್ತಿತ್ವಕ್ಕೆ ಕುತ್ತು ತಂದೊಡ್ಡಿ
ತಲೆ ತಗ್ಗಿಸುವಂತೆ ಮಾಡಿಬಿಡುತ್ತದೆ ಒಮ್ಮೊಮ್ಮೆ.

ಮನಸ್ಸೆಂಬ ಮಾಯಾವಿ ಕುದುರೆ
ಲಂಗು ಲಗಾಮಿಲ್ಲದೆ ಓಡುತ್ತಿದೆ
ನನ್ನ ಮೇಲೆ ಸವಾರಿ ಮಾಡುವ ಮೊದಲು
ನಾ ಅದನ್ನ ಸವಾರಿ ಮಾಡಬೇಕಿದೆ

ಅಸಂಬದ್ಧ ವಿಷಯಕ್ಕೆ
ಚುಚ್ಚುವ ಮಾತುಗಳಿಗೆ
ಮುದುಡಿಕೊಳ್ಳುತ್ತದೆ ಮನ
ಮರಗುತ್ತೆ ಮತ್ತೆ ಕರಗುತ್ತೆ

ಗಟ್ಟಿ ಗೊಳಿಸಬೇಕೆಂದು ಒಳ ಜಗತ್ತಿನಲ್ಲಿ
ವಿಹರಿಸಿ ನೋಡಿದೆ
ಹೊಲಸು ಹೊರ ಜಗತ್ತು
ಅದಕ್ಕಿಂತ ಗಲೀಜು ಒಳ ಜಗತ್ತು

❖

ಗೊಂದಲಗಳ ನಡುವೆ

ಅರ್ಥವಾಗದ ವಿಷಯಗಳು
ಪರಮಾರ್ಥಗೊಳ್ಳುವ ಸಮಯ
ಹಗುರವಾಗಬಾರದು ಜಗದಿ
ಯಾವುದೊ ಕ್ಷಣಿಕ ಸುಖದಹಿಂದೆ ಬಿದ್ದು

ಹಪಹಪಿಸದಿರು ಮನವೆ
ಸಿಗದಿರುವ ಸುಖಕ್ಕೆ
ಸಿಗಲಾರದು ನಿನಗಲ್ಲದ್ದು
ಸಿಕ್ಕಿದನ್ನೆ ಸ್ವೀಕರಿಸಿ ಸುಖಪಡು

ನೀನು ಬಯಸಿದ್ದು ಮತ್ತೊಬ್ಬರಲ್ಲಿದೆಯೇ
ಏನೂ ಇಲ್ಲದವರು ನಮ್ಮ ನಡುವೆ ಬದುಕಿಹರು
ಅರ್ಥವಿಲ್ಲದ ವ್ಯರ್ಥ ಬದುಕ ಅನುಭವಿಸುತಿಹರು
ಅಂಥವರ ನೋಡಬೇಕೊಮ್ಮೆ

ಪ್ರಾಪಂಚಿಕ ವೈಭೋಗ ಕ್ಷಣಕಾಲ
ಪರಲೋಕದ ಪರಿಜ್ಞಾನ ಪಡಿಬೇಕು
ಮನದ ಮುಂದಣ ತಮಂದವ ಕಳೆದು
ದಿವ್ಯ ಬೆಳಕು ಭರವಸೆಯಲ್ಲಿ

ನಿನ್ನದಲ್ಲದ ಸಿರಿ
ನಿನ್ನದಲ್ಲದ ನಾರಿ
ನಿನ್ನದಲ್ಲದ ನೀನು
ಕೇವಲ ಹಪಹಪಿ

ಹಗುರವಾಗಬೇಕು ಒಳ ಬೇಗುದಿಯ ಕಳೆದು
ಒಳಗೊಂದು ಹೊರಗೊಂದು ತೊರೆದು
ನೋಡು ನಿನ್ನ ಒಳಗಣ್ಣನ್ನು ತೆರೆದು
ವಿಶಾಲ ಹೊರ ಜಗತ್ತು ಕಂಡೀತು

❖

ನೆರಳಿಗಂಜುವ ಸಮಯ

ಮನದ ಪರದೆಯೊಳಗೆ ಮುಸುಕಿನ ಗುದ್ದಾಟ
ಸಿಗದ ಸುಖ
ನೀಗದ ದಾಹ
ದಹಿಸುತ್ತಿದೆ ದೇಹವ

ಜಗ್ಗಬೇಕು ಹಗ್ಗ ಹಾಕಿ
ಎತ್ತಿಗೆ ಮೂಗುದಾರ ಪೋಣಿಸಿದಂತೆ
ಅಳಕಬೇಕು ಎಳೆದಾಗ
ಬಳಕಬೇಕು ಸಾಗಿದಾಗ

ನೆರಳಿಗಂಜಿ ನಡೆವ ಸಮಯ
ಸಮಾಜವೆಂಬ ವಿಷಸರ್ಪ
ಹೆಡೆ ಎತ್ತಿದೆ ಕುಟುಕಲು
ಕಟುವಾಗು ಗೆಳೆಯ ಕದವ ಮುಚ್ಚು

ಮನದ ಕಿಟಕಿಯ ತೆರೆಯದೆ
ಮಾತು ಮಥಿಸಬೇಕು ಮನಸ್ಸು ಪರಿಪಕ್ವ ಗೊಳ್ಳಬೇಕು
ದೂರವಿರಬೇಕು ಕೆಲ ಘಟನೆಗಳಿಂದ
ಗಳಿಸಬೇಕು ಒಳ್ಳೆಯದನ್ನ

ಹೊತ್ತಿಗೊದಗದ ಮಾತು ಸತ್ತವನ ಎಬ್ಬಿಸಿದಂತೆ
ಹೊತ್ತಿಗೊದಗದ ಮಾತಾಗಬಾರದು
ಹೊರೆ ಹೊತ್ತ ನೆತ್ತಿಗೇನು ಗೊತ್ತು
ಕಾಲಿಗೆ ಚುಚ್ಚುವ ಕಲ್ಲುಮುಳ್ಳುಗಳ ನೋವು

ನೆನಪಿರಲಿ ನಿನ್ನ ನಿನ್ನೆಗಳು
ನಾಳೆಗಳ ಕಳೆದುಕೊಂಡು
ಹುಡುಕುವ ಮುಂಚೆ
ಹಪಹಪಿಸದಿರು ಎಳೆ ಮಗುವಂತೆ

❖

ಗಾಳಕ್ಕೆ ಸಿಲುಕದಿರು

ಮನದ ತುಂಬೆಲ್ಲಾ ಗೊಂದಲಗಳು
ಗರಿಗೆದರುವ ಮನ
ಬೆದರಿ ಕಮರುವ ಸಮಯ
ಸಾರಿ ಹೇಳುತ್ತಿದೆ ನಾನು ಬದುಕಿರುವೆ ಸಮಾಜದಲ್ಲಿ ಇನ್ನೂ

ಕೋಟೆ ಕೊತ್ತಲಗಳು ಉರುಳಿ ಹೋದವು
ಮಾಯವಾದವೂ ಕ್ರೌರ್ಯದ ದಿನಗಳು
ಕೇವಲ ನೆನಪುಗಳು ಭವಿಷ್ಯದ ತುಂಬ
ಮಹಾಕ್ರೂರಿ ರಾಜನಿದ್ದ ಎಂದು

ಜಡವಾಗು ಮನಸ್ಸೆ ಜಂಜಾಟಗಳ ನಡುವೆ
ಪಿಸದು ಹೋಗದಿರು ಪಿಸುಮಾತಿಗೆ
ಪಂಡಿತನಂತೆ ತರ್ಕವ ಮಾಡಿ
ತೂಕವಾಗಿರು ಮರದ ತೊಲೆಯಂತೆ

ಯಾವ ಮಾಯ ಮುಸುಕಿಹುದೊ
ಮತ್ತನಾಗಿ ಮೆರೆಯದಿರು
ಮತ್ತವೇ ತಪ್ಪುಗಳ ಹಿಂದೆ ಗಿರ್ಕಿ ಹೊಡೆಯಬೇಡ
ಹೊಸಕಿ ಹಾಕು ಮಜವೆಂಬ ಮಜಲ

ಕಾದ ಕಬ್ಬಿಣಕ್ಕೆ ಬೇಕು ಸುತ್ತಿಗೆ ಪೆಟ್ಟು
ಹೊಡೆದೊಡೆದು ಮಾಡಬೇಕು
ಹದ್ದು ಮೀರದಂತೆ
ಗುದ್ದು ಬಿದ್ದರೆ ಗಣನೆಗೆ ಬಂದೀತು

ಗಾಳಕ್ಕೆ ಸಿಗದಿರು
ಅವರು ತಿಂದಾರು ಸುಟ್ಟ ಮೀನಂತೆ
ಸಿಗಬೇಡ ಪವಾಡಗಳ ಪರಿಕಲ್ಪನೆಗೆ
ಪರಪೀಡೆಯ ತೊರೆ

❖

ಮನದ ಮುಂದಿನ ಕತ್ತಲು

ಕಾಡುತಿತ್ತು ಮನದೊಳಗಣ ದ್ವಂದ್ವವೊಂದು
ಸವಾರಿ ಮಾಡುವ ಸಂಚು
ಯಾವುದೊ ಸೆಳೆತ ಸುತ್ತಿಕೊಂಡಿತ್ತು
ಕರುಳ ಬಳ್ಳಿಯಂತೆ

ಕತ್ತು ಹಿಸಿಕಿ ಉಸಿರು ಕಟ್ಟುವ ಅನುಭವ
ಮುಷ್ಠಿಯೊಳಗಿನ ಉಸಿರಿನಂತೆ
ಕೈಗೆ ಸಿಗದೆ ಮನವೆಂಬ ಮರ್ಕಟ
ಕಳ್ಳು ಕುಡಿದು ಕುಣಿಯುತ್ತಿತ್ತು

ಕಾಡು ಕುದುರೆಗೆ ಲಗಾಮ
ಕತ್ತಿನ ಕೂದಲು ಹಿಡಿದು
ಜೀನು ಹಾಕಿ ಬೆನ್ನಮೇಲೆ ಕುಳಿತು
ಸವಾರಿ........

ದುರ್ಬಲ ಮನಸ್ಸಿನ ದುರಳತೆ
ದಂಗೆ ಎದ್ದ ಕಾಮನೆಗಳು
ದಳ್ಳುರಿ ನಡಿಸಿವೆ ದಿನವಿಡಿ
ದುರುಳ..... ದುಡುಕಿನ ಕೇಡು

ತಪ್ಪುಗಳ ಸರಮಾಲೆ ಎಲ್ಲಿಯವರೆಗೆ
ಯಾಕೊ ದುರುಳಾ ಈ ದುಷ್ಟತೆ
ಚಟಗಳಿಗೆ ದಾಸನಾಗಿ ಕಳೆದು ಹೋಗಬೇಡ
ಮನದ ಮುಂದಣ ಕತ್ತಲಕೂಪ ಹೊರ ಸೂಸಬೇಕಿದೆ ಬೆಳಕೊಂದು

❖

ನಾಗರಿಕ ಮನುಷ್ಯನ ಅನಾಗರಿಕ ಮುಖಗಳು

ಒಳಗೊಳಗೆ ಉರಿಯುತ್ತ ಹೊಸಮುಖದ ದರ್ಶನ
ಮುಖವಾಡದೊಳಗೆ ಮುಚ್ಚಿಕೊಂಡ ನೈಜತೆ ನಿದರ್ಶನ
ನಕ್ಕರೂ ಬಾರದ ನಗೆ
ಸ್ವಾರ್ಥ ಸಮಾಜದ ಬಗೆ

ನಾಗರೀಕನಂತೆ ನಟನೆ ಮಾಡುವ ನಿಕೃಷ್ಟ ಮನದವನೆ
ಒಳಗೊಮ್ಮೆ ಇಣುಕಿ ನೋಡಿಕೋ ನಿನ್ನ ಮನವ
ಪ್ರತಿಫಲಿಸೀತು ನಿನ್ನ ಅಸಲಿ ರೂಪ
ನೀ ಒಪ್ಪಿಕೊಳ್ಳಲಾರೆ ನಿಜವ ನೀನೇ ಅದೆಂದು

ನಾವಲ್ಲದ ನಾವುಗಳು ಬದುಕಿದ್ದೇವೆ ಇಲ್ಲಿ
ಸೋಗಲಾಡಿ ಸೆರಗನ್ನು ತಲೆತುಂಬಾ ಹೊದ್ದು
ಸವಾಲಿಗೆ ಪಾಟಿಸವಾಲು
ತಲೆ ಬುಡವಿಲ್ಲದ ಒಣವಾದಗಳು

ಬಸವಣ್ಣನಂತೆ ಬದುಕಿದ್ದೆವೆಂಬ ದುರುಳರು
ಕಗ್ಗೊಲೆ ಮಾಡಿದರು ಬಸವಾದಿ ಶರಣರನ್ನು
ಹೊತ್ತಾರೆ ದೇವರೆಂಬ ಮಹಾಮಾಯಾವಿಯ
ಚಿತ್ರಪಟಗಳಿಗೆ ದೀರ್ಘದಂಡ ನಮನ

ಹಸಿದ ಹೊಟ್ಟೆಯ ಮೇಲೆ ಕಾದ ಕಬ್ಬಿಣದ ಬರೆ
ಉಣ್ಣದ ಲಿಂಗಕ್ಕೆ ನೈವೇದ್ಯದ ಎಡೆ
ಹಗಲಿಡಿ ಧರ್ಮದ ಪ್ರೋಕ್ಷಣೆ
ರಾತ್ರಿಯ ಏಕಾಂತದಲಿ ಪಾಪಪ್ರಜ್ಞೆ ಮರೆಯಲು ತೀರ್ಥಸೇವನೆ

ಒಳ್ಳೆಯದನ್ನ ಹುಡುಕಾಡುತ್ತಿದ್ದೇನೆ ಸೂರ್ಯನ ಬೆಳಕಲ್ಲೂ ಟಾರ್ಚ್‌ಬಿಟ್ಟು
ಸಿಗುವ ಲಕ್ಷಣಗಳೇನು ಕಾಣುತ್ತಿಲ್ಲ
ಸೂರ್ಯನ ಬೆಳಕಲ್ಲೂ ಕತ್ತಲ ಕೂಪ
ಹಗಲು ದರೋಡೆಯ ನಿತ್ಯೋತ್ಸವ ನಿತ್ಯನಿರಂತರ.....

❖

ಶತಕದ ಕಾವ್ಯ

ಒಳ್ಳೆಯದರ ಎದೆಯೊಳು ಕೆಟ್ಟದ್ದು ಹೊಕ್ಕಿದೆ
ಕೇಡಿಗಳ ನಡೆ ನುಡಿ ಅಶುದ್ಧ ಅನಿರ್ಬಂಧ
ಸತ್ಯದ ಬಾಯಿಗೆ ಬಟ್ಟೆ ತುರುಕಿ ಕೈಕಾಲು ಕಟ್ಟಿ ಮಲಗಿಸಿದಂತೆ
ಮತಿಹೀನ ಮತಾಂಧರ ಕಾರುಬಾರು

ಕೃತ್ರಿಮ ಮೆದಳು ಗೊಂದಲ ಸೃಷ್ಟಿಸಿ
ಮನುಷ್ಯನ ಅಸ್ತಿತ್ವವೇ ಸರ್ವನಾಶಗೊಳ್ಳುವುದೆಂಬ
ಸ್ಟೀಫನ್ ಹಾಕಿನ್ಸ್‌ನ ವಾದ
ಆದರೆ ಟಿವಿಗಳ ತುಂಬೆಲ್ಲಾ ಪಂಡಿತರದ್ದೆ ಕರ್ಮಟಕೂಟ

ಮತಾಂಧ ಯುಗದ ಮರುಜನ್ಮದ ಆತಂಕ
ಕಡುಬಡವರ ಕನಸಿನಲ್ಲೂ ಕನವರಿಕೆ
ಕೋತಿ ಬಾಲಕ್ಕೆ ಬೆಂಕಿ ಇಟ್ಟಂತೆ ಮುಟ್ಟಿಸಿಕೊಳ್ಳದ ಮುಟ್ಟಿಸಿ
ಕೊಳ್ಳುವವರ ವಿಚಾರ
ಮೇಕೆ ಬಾಯಿಗೆ ಮಂಗ ಬೆಣ್ಣೆ ಒರೆಸಿದಂತೆ

ರೈತರ ಆತ್ಮಹತ್ಯೆ ವೈಯಕ್ತಿಕ ಎಂದ ಪಾಪಿಗಳಿಗೆ ಗಲ್ಲಿಗೇರಿಸಿ
ಮಳೆಯೆ ಇಲ್ಲದೆ ಬೆಳೆ.....
ಓ ಸರ್ಕಾರ ಬೆಂಬಲ ಬೆಲೆ ಘೋಷಿಸಿದೆ.. ತಮ್ಮವರಿಗಷ್ಟೆ

ದಲ್ಲಾಳಿಗಳ ವಿರಾಟರೂಪ ಕಾಣಸಿಗುವುದೇ ಇಲ್ಲ
ತೊಂಬತ್ತೇಳುಮಂದಿ ಎಷ್ಟೆ ಗಿರ್ಕಿ ಹೊಡೆದರು
ಅವರು ಜಾಗ ತಲುಪಿಯಾಯಿತು
ಸಮಾನತೆ ಕೇಳುವವರು ಕಾರ್ಡು ಹಿಡಿದು ಬೀದಿಯಲ್ಲಿ ಕೂಗುತ್ತಲೆ ಇದ್ದಾರೆ
ಸದ್ದಿಲ್ಲದೆ ಮಹಡಿ ಹತ್ತಿದ ಮಂದಿ
ಚಹದ ಗ್ಲಾಸಲ್ಲಿ ಸ್ಕಾಚ್ ಸೇವಿಸುತ್ತಿದ್ದಾರೆ

ಓದಿದವರು ಮೂಲೆಗುಂಪಾದರು
ಓದದೆ ಉನ್ನತ ಹುದ್ದೆಗೆ ಹೋದರು ಕೆಲವರು
ಅಯ್ಯೊ ಬಿಡಿಯಪ್ಪ, ಇದು ರಾಮರಾಜ್ಯ
ಇಲ್ಲಿ ಅವೆಲ್ಲವೂ ಪೂರ್ವನಿಶ್ಚಿತ

ದುಡ್ಡಿದ್ದವನು ದುನಿಯಾ ಮಾಡ್ತಾನೆ
ದಡ್ಡ ಅವನು ಮಾಡುವುದನ್ನೆಲ್ಲಾ ನೋಡ್ತಾನೆ
ಕಣ್ಣು ಬಿಟ್ಟರೆ ಉಸಿರು ನಿಲ್ಲಿಸುತ್ತಾನೆ
ಬಾಯಿ ಬಿಟ್ಟರೆ ಭೂಮಿಯಿಂದಲೆ ಗಡಿಪಾರು ಮಾಡ್ತಾನೆ

ಅತ್ಯಾಚಾರಿಗಳು, ಲಂಚಕೋರರು
ಕೈಯಲ್ಲಿ ಮಚ್ಚು, ಬಾಂಬು ಹಿಡಿದವನೆ ದೊಡ್ಡವನು
ಕಾನೂನು ಅವನಿಗೆ ಡೊಗ್ಗುಸಲಾಂ ಹೊಡೆಯುತ್ತದೆ
ನ್ಯಾಯಾಧೀಶ ಕುಂತಲ್ಲೆ ಸ್ಥಾನ ಮರೆಯುತ್ತಾನೆ

ಬದುಕಬೇಕೆಂದರೆ ಬಾಯಿ, ಕಣ್ಣು, ಕಿವಿ ಮುಚ್ಚಬೇಕು
ಕಂಡರು ಕಾಣದಂತೆ
ಕೇಳಿದರು ಕೇಳಿಸದಂತೆ

ಬಡವಾ ನೀ ಮಡಗಿದಂಗಿರು ಎಂಬಂತೆ
ಅವರ ಒಳಕೋಣೆಯಲ್ಲಿ ಬಡ ಹೆಂಗಸರ ಸೀರೆ ಸೆಳೆಯಲಾಗುತ್ತೆ
ಅಯ್ಯೋ ಕೃಷ್ಣನ ಆಗಮನವೇ ಇಲ್ಲ....
ರಸ್ತೆಯಲ್ಲಿ ರುಂಡ ಚೆಂಡಾಡುತ್ತಾರೆ
ಶಿವ ಶಿವ ರಾಮನವತಾರವೆಲ್ಲಿ?

ಕಲಿಯುಗದ ಹೆಸರಲ್ಲಿ ಕಮ್ಮಟ
ಕಾಕಿ, ಕಾವಿ, ಖಾದಿ ನಮೋ ನಮಃ
ನೀವು ಕೇಳುವಂತಿಲ್ಲ
ಏಕೆಂದರೆ ನೀವು ಜನಸಾಮಾನ್ಯರು

ದಲಿತ ಹೆಣ್ಣುಗಳ ಮೇಲೆ ಅತ್ಯಾಚಾರ
ರಾತ್ರೋರಾತ್ರಿ ಹೆಣವಾದವರ ಸುಟ್ಟ ಕಾವಿ
ಸಮರ್ಥಿಸಿಕೊಂಡ ಪೋಲಿಸರು
ರಾಷ್ಟ್ರದ ತುಂಬ ಸುದ್ದಿಯಾಗುವುದೇ ಇಲ್ಲ

ಗಂಟೆಯಲ್ಲಿ ಕೋಟಿಲೂಟಿ ಶ್ರೀಮಂತರ ಗಿಮಿಕ್‌ಗಳು
ಅವರ ಬೂಟು ನೆಕ್ಕುವ ದಲ್ಲಾಳಿಗಳು
ಹಾಡು ಹಗಲೆ ದೇಶವನು ಲೂಟಿ ಮಾಡುತ್ತಿದ್ದರೆ
ಎಲ್ಲಿ ನೋಡಿದರಲ್ಲಿ ಹಗರಣಗಳೆ

❖

ಖಾತೆಗಳ ಕಾಯುತ್ತ

ನೆನ್ನೆಗಳೆ ಇಲ್ಲದವರಿಗೆ
ನಾಳೆಗಳು ಇರಬಹುದೆ?
ಭೂತಕಾಲದ ಗತವನ್ನ ಕಳೆದುಕೊಂಡವರು
ಕೂಗಿ ಕೂಗಿ ಕೇಳುತ್ತಿದ್ದಾರೆ

ಬದುಕು ಕೊಟ್ಟಿದ ಮಹಾನಾಯಕನಿಗೆ
ತಿಲಾಂಜಲಿ ಇಡಲಾಗುತ್ತಿದೆ
ಮತ್ತವೆ ಹಳವಂಡಗಳು
ಯಾರು ಯಾವ ಕೆಲಸ ಮಾಡುತ್ತಿದ್ದರೊ
ಅವೆ ಮುಂದುವರಿಯಬೇಕೆಂಬ ಹೊಸವಾದ

ಮೀಸಲಾತಿ ಬೇಕೆ?
ಹೊಳೆ ದಾಟಿದವರ ಪ್ರಶ್ನೆ
ಶತಮಾನಗಳಿಂದ ಶೋಷಣೆಗೊಳಗಾದವರ
ಬದುಕಿಗೊಂದು ಅರ್ಥ ಬರುತ್ತಿದ್ದಂತೆ

ಸರ್ಕಾರಿ ಸಂಸ್ಥೆಗಳಲ್ಲಿ ತಾನೆ ಮೀಸಲಾತಿ
ಎಲ್ಲವನ್ನು ಅವನು ಉಳ್ಳವರಿಗೆ ಮಾರುತ್ತಿದ್ದಾನೆ

ಖಾಸಗಿಯವನಿಗೆಲ್ಲಿದೆ ಮುಲಾಜು
ಸಾಯಲಿ ದಮನಿತರು

ಯಾವ ಮೋಹದ ಬೂದಿ
ಮತ್ತೆ ಅವರಿಗೆ ಮತದಾನ ಮಾಡುವಂತೆ ಪ್ರೇರೇಪಿಸಿದೆ?
ದಮನಿತ, ಶೋಷಿತ, ಅಲ್ಪಸಂಖ್ಯಾತರು ಸೇರಿಕೊಂಡು
ಪೆಟ್ರೋಲ್, ಡೀಸೈಲ್, ಅಷ್ಟೆ ಯಾಕೆ ಬದುಕನ್ನೆ ಬರ್ಬರ ಮಾಡಿಬಿಟ್ಟರು

ತೆರೆದ ಖಾತೆಗಳನ್ನ ಮಂದಿ
ಮತ್ತೆ ಮತ್ತೆ ನೋಡಿಕೊಳ್ಳುತ್ತಿದ್ದಾರೆ
ನಾಳೆ ನಿಮ್ಮ ಖಾತೆಯಲ್ಲಿ ಕಪ್ಪು ಹಣದ ಕೊಪ್ಪರಿಗೆ ಇರುವುದು
ಕಾದು ಕಣ್ಣುಗಳು ಸಾಕಾಗಿವೆ

ಇಂದೇ ತನ್ನದಲ್ಲದವರಿಗೆ
ನಾಳೆಗಳ ಹುಸಿ ಆಮಿಷ ತೋರಿಸಿ
ದರಬಾರು ಮಾಡುತ್ತಿದ್ದರೆ
ದುರುಳರು ಶಾಪ ತಟ್ಟಲಾರದೆ

❖

ಮೌನಿ ಬುದ್ಧನಂತೆ

ಮೌನ.....
ಯಾರೋ ಅಳುತ್ತಿದ್ದಾರೆ
ಮತ್ಯಾರೋ ನಗುತ್ತಿದ್ದಾರೆ
ಸಹಜವೇ ಕೆಲವರ ನಗು ಕೆಲವರಿಗೆ ಅಳು

ಅನುಭವಿಸಿದ ಅವಮಾನಗಳೆಷ್ಟೋ
ಅಪಮಾನ ಮಾಡಿದವರು ಅದೆಷ್ಟೋ ಜನ
ತನ್ನ ತಾ ಪರೀಕ್ಷೆಗೊಡ್ಡಿ ನಡೆದ ದಾರಿ ದೂರ
ರಗಳೆ, ಕಿರಿಕಿರಿ, ಗೊಂದಲದ ಗೂಡಲ್ಲವೆ ಜೀವನ

ಜಾತಿ, ಧರ್ಮ, ಪಂಥ ಮೀರಲಾಗದ ಸಂತೆ
ಸಂತನಂತೆ ಧ್ಯಾನಾವಸ್ಥೆ ತಲುಪಬೇಕೆಂದಿದ್ದ
ದುಷ್ಟರ ನಡುವೆ ನೂಕು ನುಗ್ಗಲು
ಜರ್ಜರಿತವಾದ ಬದುಕು

ಕಾಳ ಸಂತೆಯಲಿ ಕೇಳುವರ್ಯಾರು?
ಕುಟುಂಬಸ್ಥರೆಲ್ಲರೂ ವಸೂಲಿಗೆ ನಿಂತಿರುವಾಗ
ಕಬೀರನಂತೆ ಬೇಡಲಾಗದ ಸ್ಥಿತಿ
ಅದೇ ಬದುಕಪಯಣ ಸಾಗಲೇ ಬೇಕು

ಸೂರ್ಯೋದಯಕ್ಕೆ
ಆರಂಭವಾಗುವ ಮನಸ್ತಾಪ
ಸೂರ್ಯಾಸ್ತವಾದರೂ ಮುಂದುವರೆದರೆ
ಬದುಕಿಗೆ ಇದೆಯೆ ಅರ್ಥ?

ಆದರೂ ಅವನು ಬದುಕಿದ್ದ
ಮನದ ಎಲ್ಲೆಯ ಮೀರಿ
ಮೌನ ಮುರಿದು ಮಾತಾಡದ ಬುದ್ಧನಂತೆ
ಸಂಘರ್ಷವ ಸಹಿಸಿ

❖

ಹೀಗೆ ಇರಬೇಕು ಎಂದರೆ

ಹೀಗೆ ಇರಬೇಕು ಎಂದರೆ
ಹೃದಯ ನಿರ್ಮಲವಾಗಿ
ಭಾವ ನಿರ್ಜಲವಾಗಿ
ಚಿತ್ತ ಪ್ರಾಂಜಲದಂತೆ

ಹೀಗೆ ಇರಬೇಕು ಎಂದರೆ
ಆಶೆಗಳ ಸರಪಳಿ ತುಂಡರಿಸಿ
ಬೇಕು ಎಂಬ ಬಯಕೆ ಹೊಸಕಿ ಹಾಕಿ
ಬಾರದರ ಬೆನ್ನು ಬೀಳದಂತೆ

ಹೀಗೆ ಇರಬೇಕು ಎಂದರೆ
ಮನ ಮರ್ಕಟವ ಕಟ್ಟಿಹಾಕಿ
ಅತ್ತ ಇತ್ತ ಜಾರದಂತೆ ಬೀಗಿಮಾಡಿ
ಹಿಡಿದು ಗೂಟಕ್ಕೆ ಕಟ್ಟಿದ ಹೋರಿಯಂತೆ

ಹೀಗೆ ಇರಬೇಕು ಎಂದರೆ
ನಿಂದಕರೆದುರು ನೊಂದುಕೊಳ್ಳದೆ
ಶ್ರೇಷ್ಠನೆಂದು ಬೀಗುವನೆದುರು
ಸಣ್ಣವನಾಗಿಯೆ ಇರುವಂತೆ

ಹೀಗೆ ಇರಬೇಕು ಎಂದರೆ
ಸರ್ವಸಂಗ ಪರಿತ್ಯಕ್ತ ಬುದ್ಧನಂತೆ
ಇದ್ದರೂ ಇಲ್ಲವೆಂಬಂತೆ
ನೀರೊಳಿದ್ದು ಕಮಲ ಕೆಸರಿಗಂಟದಂತೆ

ಹೀಗೆ ಇರಬೇಕು ಎಂದರೆ
ಭವದ ಸುಖಕ್ಕಿಂತ ಭಾವ ಸುಖಕೆ ಬಯಸಿ
ಹೊತ್ತ ಹೊರೆಗಳನ್ನು
ಕೆಳಗಿಳಿಸಿ ಹಗುರಾದಂತೆ

ಹೀಗೆ ಇರಬೇಕು ಎಂದರೆ
ಜಿಹ್ವೆ ಹದ್ದುಬಸ್ತಿನಲ್ಲಿದ್ದು
ಜೀವ ಭಾವಗಳ ಸಂಗವ
ಒಂದಾಗಿಸಿದಂತೆ

❖

ಮನುಷ್ಯನೆಂದರೆ ಹೀಗೆ

ಮನುಷ್ಯನೇ ಹೀಗೆ ಯಾರಿಗೂ ಅರ್ಥವಾಗುವುದಿಲ್ಲ
ಅವನ ಒಳಗೊಂದು
ಹೊರಗೊಂದು ಮುಖಗಳಿವೆ
ಹೀಗೆ ಎನ್ನುತಿರುವಂತೆ ಬೇರೆಯಾಗಿರುತ್ತಾನೆ

ಊಸರವಳ್ಳಿಯಂತೆ
ಬಣ್ಣ ಬದಲಿಸುತ್ತ
ಹಾವಿನಂತೆ ಪೂರೆ ಕಳಚುತ್ತ
ಪ್ರಪಂಚಕ್ಕೆ ಘಾತಕ

ಅವನ ತಲೆಯಲ್ಲೇನೊ ಇದ್ದರೆ
ಮುಖದಲ್ಲಿ ಮತ್ತೊಂದಿರುತ್ತೆ
ಹೀಗೆ ಇದ್ದೀತೆಂದವಗೆ
ದಿಗ್‌ಭ್ರಮೆಯಾದಂತೆ

ಒಳ್ಳೆಯವನೂ ಹೌದು
ಕೆಟ್ಟ ಕ್ರಿಮಿನಲ್ ಕೂಡ
ಏಕೆಂದರೆ ಅವನಿಗೆ ವಿವೇಚನೆ ಎಂಬುದೆ ಇಲ್ಲ
ಪ್ರಾಣಿಗಳಂತೆ

ಒಮ್ಮೆ ಮೃಗವಾದರೆ
ಕರುಣಾಮೂರ್ತಿಯಂತೆ
ಸಮಚಿತ್ತನಾಗಲಾರ
ಸಮಷ್ಠಿಯಂತೆ

ಮನುಷ್ಯನೆ ಹೀಗೆ
ಬೇಕು ಬೇಕೆನ್ನುವ ಬಿಸಿಲುಗುದುರೆ ಏರಿ
ಮತ್ತೊಬ್ಬರ ಧ್ವಂಸಮಾಡಿ
ಕೃತಕ ಮಹಲುಗಳ ಕಟ್ಟಿದಾತ

❖

ಬಂದು ಬಿಡು ಸರಳತೆಯ ಕಡೆಗೆ

ವಿಕ್ಷಿಪ್ತ ಮನ
ಹಂಗು ತೊರೆಯದೆ
ಜಗದ ರಂಗಿನಾಟದಲಿ
ಜಂಗ್ಲಿ ದನಗಳಂತೆ ಓಡಾಡುತ್ತಿದೆ

ಗೆಲ್ಲಬೇಕು ಭವಸಾರ
ನಾಕು ದಿನದ ಸಂತೆಯಲಿ
ಇಷ್ಟೊಂದು ಖರೀಧಿ
ತಯಾರಿ ಇಲ್ಲಿಗೊ ಅಲ್ಲಿಗೊ

ಬೇಕು ಬೇಡಗಳ ಬಡಿದಾಟದಲಿ
ಮನದ ಮಾತಿಗೆ ಮಣಿದವರೆ ವಿರಳ
ಸರಳ ಬದುಕಿಗೆ
ಸಂಕೀರ್ಣತೆಯ ಸರಪಳಿ ಸುತ್ತಿಕೊಂಬಂತೆ

ಸರಳವಾದ ಮನಸು
ಹರಿವ ನೀರಿನಂತೆ
ಬೀಸುವ ತಂಗಾಳಿಯಂತೆ
ಗೊಂದಲಗಳ ಗೂಡಾಗದೆ

ಹೆಣ್ಣ ಹಿಂದೆ ಗಂಡುನಾಯಿ ಗುರ್ ಎಂದಂತೆ
ಹೊನ್ನ ಹಿಂದೆ ಭಿಕಾರಿ ಬೇಡುವಂತೆ
ಮಣ್ಣಿಗಾಗಿ ಕೌರವರು ಜೀವ ಬಿಟ್ಟಂತೆ
ಬೇಡ ಗೆಳೆಯ ಬಂದು ಬಿಡು ಮರಳಿ ಸರಳತೆಯ ಗೂಡಿಗೆ

❖

ಸ್ವೀಕೃತಿ ಗೊಂದು ಸಹಿ

ಸೃಷ್ಟಿ ಕರ್ತನಿಗೊಂದಿಷ್ಟು ಸವಾಲು ಕೇಳಿ
ಕಣ್ಣು ಮುಚ್ಚಿ ರೆಪ್ಪೆಯೊಳಗೆ ತುಂಬಿಕೊಂಡ ಸಾಗರ
ಉಕ್ಕಿ ಹೊರಬಂದಂತೆ ಒಂದೇ ಸಮನೆ ಕಣ್ಣೀರು ಹರಿಯುತ್ತಿದೆ
ಮನಸ್ಸಿನ ಉದ್ವೇಗ ವೇಗವಾಗುತ್ತಿದೆ ಮುಗ್ದ ತಂದೆಗೆ

ಮನಸ್ಸು ಬಿಚ್ಚಿ ಅಳಲಾರದ ಸ್ಥಿತಿ
ಮಗಳ ನೋವ ಹೊರಲಾರದ ಗತಿ
ಯಾಕೆ?
ಅವನಿಗೊಂದೆ ಪ್ರಶ್ನೆ

ಮುಗ್ದ ಬಾಲಕಿಯ ಮೂತ್ರ ಪಿಂಡಗಳು ನಿಂತಿವೆ
ದೇಹ ರೋಗದ ಗೂಡಾಗಿದೆ
ಸಾವು – ಬದುಕಿನ ಸೆಣಸಾಟ
ಇರುವ ಒಬ್ಬಳೆ ಮಗಳ ಯಾತನೆ ಸಹಿಸದ ನೋಟ

ನಾಳೆಯ ತವಕದಲ್ಲಿ
ನೆನ್ನೆಯ ನೆನಪು ಮಾಸಿಹೋಗಿವೆ
ಮೌನ ಒಂದೆ ಮನಕೊಪ್ಪವ ಪರಿ
ಸಾಂತ್ವಾನ ನೀಡಿದ ಮನುಜರ ನಡುವಿನ ವಿಪ್ಲವ ಬದುಕು

ಯಾರಿಗೆ ಯಾರಿಲ್ಲ.......ತಂಬೂರಿ ಹಿಡಿದ ತತ್ವಪದಕಾರನ ಹಾಡು
ನೀರ ಮೇಲಿನ ಗುಳ್ಳೆ ಜೀವ ಎಂಬುದ ನೆನಪಿಸಲು
ಕಾಣದ ಲೋಕದ ಹಂಬಲ
ಕಾಡುವ ಬದುಕಿನೊಂದಿಗೆ ಕಣ್ಣಮುಚ್ಚಾಲೆ

ಕನಸುಗಳೇ ಬಾರದ ಭಯಾನಕ ರಾತ್ರಿ
ಮಗಳ ಮರಗಟ್ಟಿದ ದೇಹದಲ್ಲಿ ಜೀವ ಆಡುತ್ತಿದೆ
ನಿಲ್ಲುವ.........
ಬದುಕಿನ ಬರವಸೆಯ ಕಿರಣ ಆಗೊಮ್ಮೆ ಈಗೊಮ್ಮೆ

ಯಾರಿಗೂ ಕೊಡಬೇಡ ನರಕ
ಆತನೊಂದಿಗೆ ಜಟಾಪಟಿ
ತನ್ನ ಪಾಲಿನ ಬದುಕ ಸ್ವೀಕರಿಸಿ
ಸ್ವೀಕೃತಿ ಕಳುಹಿಸಿಕೊಡಲೇ ಬೇಕಲ್ಲ
ಸಮಾಧಾನಕೊಂದು ಸಹಿ ಮಾಡಿ

❖

ದುನಿಯಾ ತೋರಿಸುವ ದುಖಾನ್

ಮುಖ ಪುಸ್ತಕದ ತುಂಬ
ಬರಿ ಸೆಲ್ಫಿಗಳು
ಟೀಕೆಗಳು
ಮತ್ತೊಂದಿಷ್ಟು ಕವಿತೆಗಳು

ನಮ್ಮ ನಾಯಿಗೀಗ ಆರು ತಿಂಗಳ ಸಿಲ್ವರ್ ಜ್ಯೂಬಲಿ
ಮತ್ತೊಬ್ಬ ಅದನೋಡಿ ವರ್ಷ ತುಂಬಿದಕ್ಕಾಗಿ ಗೊಲ್ಡನ್ ಜ್ಯೂಬಲಿ
ಫೇಸ್‌ಬುಕ್ಕಿಗಂಟಿಸಿದ
ಯಾರೊ ಸತ್ತದಕ್ಕೆ ಶೋಕ.....

ಮೊಬೈಲ್ ಎನ್ನುವ ಮಾಯಂಗನೆ
ಯುವಕರ ನಿದ್ದೆ ಕೆಡಿಸಿದ್ದಾಳೆ
ನಿನ್ನೆಯ ನೆನಪಿಲ್ಲ
ನಾಳೆಯ ಹುರುಪಿಲ್ಲ

ಮತ್ತವೆ ಚಾಟ್‌ಗಳು
ಗೇಮ್‌ಗಳು
ಫೇಸ್‌ಬುಕ್, ಇನ್ಸ್ಟಾಗ್ರಾಮ್, ಗೂಗಲ್, ವಾಟ್ಸ್‌ಆಪ್
ಟ್ವಿಟರ್ ಪಟರ್‌ಗಳದ್ದೆ ಹಾವಳಿ

ಹಾಳೆಗಳ ಮೇಲೆ ಬರೆಯಲಿಲ್ಲಾ
ಹಾಳಾದ ಯಾವ ಯೋಚನೆ, ಯೋಜನೆಗಳು ತಲೆಯಲ್ಲಿಲ್ಲಾ
ಯಾರ ಗೋಜು, ಯಾರ ಮುಲಾಜೂ ಇಲ್ಲ
ಅವರವರ ಮೊಬೈಲುಗಳಲ್ಲಿ ಅವರದ್ದೆ ಕಾರುಬಾರು.

ತರಗತಿ ಕೂರಬೇಕಂದಿಲ್ಲ
ಪಾಠಕೇಳುವ ಪರಿವೆ ಗೊತ್ತಿಲ್ಲ
ಅಂಟಿಕೊಂಡರೆ ಮೊಬೈಲ್‌ಗೆ
ಕತ್ತಲಾಗಿ ಬೆಳಕು ಹರಿದ ಪರಿವೆಯೆ ಇಲ್ಲ

ಅವರ ತಪ್ಪೆಂದು ಸಾರುವ ಸಾರಾಂಶ ಒಂದೆಡೆಯಾದರೆ
ಕೋಮುವಾದದ ಅವಾಂತರ
ಶತ್ರುಗಳ ಸಂಹಾರದ ಸಿಹಿಸುದ್ದಿ
ಏನಿಲ್ಲ ಹೇಳಿ ಮೊಬೈಲಿನಲ್ಲಿ

ಟಿಪ್ಸ್‌ಗಳು
ದುಡ್ಡಿನ ಡಿವಿಡೆಂಡ್‌ಗಳು
ದಲ್ಲಾಳಿಗಳ ಮಾತುಗಳು
ದುನಿಯಾ ಮರೆಸುವ ದುಖಾನ್ ಈ ಮೊಬೈಲ್ ಫೋನ್

❖

ಕವಿ

ನಾಕು ಸಾಲುಗಳ ಬರೆದು
ವಸೂಲಿ ಹಚ್ಚಿ ಪ್ರಶಸ್ತಿ ಪಡೆದವನು
ನಾನೆ........ ದೊಡ್ಡ ಕ..... ಎಂದು ಬೀಗುತ್ತಿದ್ದಾನೆ
ಕವಿ ಪ್ರಶಸ್ತಿಯೇ ಪರಮೊಚ್ಚವಲ್ಲ

ಯಾರದೊ ಹುಟ್ಟುಹಬ್ಬಕ್ಕೆ ಹೊಗಳಿ ಬರೆದವರಿಲ್ಲ ಈಗ
ಓಲೈಕೆಯೇ ಕಾವ್ಯವಲ್ಲ
ಕಾವ್ಯ ಎಂದೂ ಆರದ ಒಡಲ ಕಿಚ್ಚು
ನೊಂದ ಬದುಕಿನೊಂದಿಗೆ ನಿಲ್ಲುವ ಸಂಗಾತಿ

ಕೆಲವರು ಬಾರಿನಲ್ಲಿ ಬೀರು ಹೀರುತ ಕಾವ್ಯವನ್ನರಿಸುತ್ತಾರೆ
ಮತ್ತೆ ಕೆಲವರು ಹಳಿಸಿದ ಪದಗಳೊಂದಿಗೆ
ಸ್ಪಂಧನೆಯಿಲ್ಲದ ಪದ್ಯ ಬರೆಯುತ್ತಾರೆ
ಹೌದು ಹೆಂಡತಿಯ ಮಾತುಗಳು ಸತ್ಯವೆ ?
ಕವಿಯ ಅನುಮಾನ

ಕವಿ ನೀನು ಸೃಷ್ಟಿಕರ್ತನಲ್ಲ
ಸ್ಮೃತಿಯಲ್ಲಿರುವ ಪದಗಳೊಂದಿಗೆ ಆಟ ಆಡುವ ಆಟಗಾರ
ಕೌಶಲ್ಯದಿಂದ ಕಾಲ್ಚೆಂಡನ್ನು ತಪ್ಪಿಸಿ ಹಲವು ಜನರ
ಗುರಿಯ ಗೆರೆಯೊಳಗೆ ಹಾಕುವ ರೊನಾಲ್ಡೋನ ಹಾಗೆ

ಭಾವನೆಗಳ ಹುತ್ತದಲ್ಲಿ ಹುದುಗಿ ಹೋಗಬೇಕಿದ್ದ ಕವಿ
ಯಾರದೊ ದುಡ್ಡಿನಲ್ಲಿ ಯಾತ್ರೆ ಮಾಡುತ್ತ
ಯಾರನ್ನೊ ಒಲೈಸುತ್ತ
ಮತ್ಯಾರದೊ ಮುಲಾಜಿಗಾಗಿ ಮಣಿ ಹಾಕುತ್ತಿದ್ದಾನೆ.

❖

ಯುಗಧರ್ಮ

ಸುಳ್ಳಿನ ಸರಮಾಲೆಯನ್ನ ಧರಿಸಿ
ತೀರ್ಥಯಾತ್ರೆಗೆ ಜನ ಹೊರಟ್ಟಿದ್ದಾರೆ
ಮೋಸದ ಮಸಲತ್ತುಗಳು ನಡೆಯುತ್ತಲೇ ಇವೆ
ಸತ್ಯವಂತರ ಸೊಲ್ಲು ಅಡಗುತ್ತಿದೆ

ಮಾತು ಮಾತು ಬರಿ ಮಾತುಗಳೆ
ಯಾರ ಮಾತು ಅರ್ಥವಾಗುತ್ತಿಲ್ಲ
ವ್ಯರ್ಥಮಾತುಗಳ ಹುಸಿಗೋಪರಗಳು
ಗಾಜಿನ ಮನೆ ಕಟ್ಟಿ ಮತ್ತೊಬ್ಬರ ಕಿಟಕಿಯ ಗಾಜಿಗೆ ಕಲ್ಲೆಸೆದಂತೆ

ಯಾರಲ್ಲಿ ಕತ್ತಲ ಕೂಪದಲ್ಲಿ ಮುಸಿಮುಸಿ ಅಳುತ್ತಿರುವವರು
ಅಯ್ಯೋ ಬಡವರು, ದೀನ ದಲಿತರಿರಬೇಕು ಬಿಡಿ ನಿತ್ಯಕರ್ಮ
ಪಾಪ ಅವರಿಗೂ ಬದುಕಿದೆಯಲ್ಲವೆ?
ಕ್ಷಮಿಸಿ ಇದು ಬಾರಲ್ಲಿ ಆಡುವ ಸಾರ್ವಜನಿಕ ಮಾತಲ್ಲ

ಜಗದ ರೀತಿಯ ಕಂಡು ಶಿಕ್ಷಕನೊಬ್ಬನ ಆತ್ಮಹತ್ಯೆ
ವ್ಯವಸ್ಥೆಯಲ್ಲಿ ಎಲ್ಲ ಸಾಮಾನ್ಯ
ಯಾರೊ ಒಂದಿಬ್ಬರಿಗೆ ಶಿಕ್ಷೆ
ಮತ್ತವೆ ಮಾಮೂಲ ನಿಲ್ಲದ ನಿಯಮಗಳು

ಗುರುವಿನ ಹೆಗಲ ಮೇಲೆ ಶಿಷ್ಯನ ಕೈ
ಛೆ ಕಾಲ ಕೆಟ್ಟು ಹೋಗಿದಯಪ್ಪ
ಗುರುವಿನ ಗುಲಾಮನಾಗುವವರೆಗೂ
ಉಲ್ಟಾ ಹಾಡುತ್ತಿದ್ದಾರೆ ಶಿಷ್ಯರಿಲ್ಲಿ

ಆರುಕೊಟ್ಟರೆ ಆ ಕಡೆ ಮೂರುಕೊಟ್ಟರೆ ಈ ಕಡೆ,
ಹಗ್ಗ ಜಗ್ಗಾಟದ ನಡುವೆ ರಾಜಕೀಯ ಡೊಂಬರಾಟ
ಅವರೆಲ್ಲ ಒಂದೇ ಪಾರ್ಟಿಯಲ್ಲಿ ಕಂಟಮಟ ಕುಡಿದು ತೇಲಾಡಿದರೆ
ಯಾರೊ ಕಾರ್ಯಕರ್ತನ ಕಗ್ಗೊಲೆಯ ಸುದ್ದಿ ಪತ್ರಿಕೆಗಳಲ್ಲಿ

ಟಿ.ವಿ.ಯ ಧಾಂದಲೆ ಕಡಿಮೆ ಯಾಗಿ
ಮೊಬೈಲ್ ಮಾಫಿಯ ಸುರುವಾಗಿದೆ
ಬದುಕೆ ಮೊಬೈಲಿಗಾಗಿಯೊ ಇಲ್ಲ ಮೊಬೈಲಿಗಾಗಿ ಬದುಕು?
ತಿಳಿಯಲು ಬುದ್ದನಲ್ಲಿಗೆ ಹೋಗಬೇಕಿದೆ.

ಬರೆಯುವವನ ಬೆರಳುಗಳಲ್ಲೀಗ ತಾಕತ್ತಿಲ್ಲ
ಸೂಟಕೇಸ್‌ಗಳು ಕಸಿದುಕೊಂಡಿವೆ
ದಿನವಿಡಿ ಹಳಸಿದ ಸುದ್ದಿಗಳ ನೋಡಿ
ಜನ ರಿಯಾಲಿಟಿಗೆ ಬಂದಿದ್ದಾರೆ

ತುಂಡು ಪ್ರಶಸ್ತಿಗೆ ಮಾರಿಕೊಂಡ
ಕವಿ ಚಿಂತಕರು ಪಾನಮತ್ತರಾಗಿ
ಬರೆಯಬೇಕಾದ್ದ ಬರೆಯದೆ
ಪರಾಕು ಹೇಳುತ್ತಿದ್ದಾರೆ ವಂದಿಮಾಗದರಂತೆ

❖

ಮೌಲ್ಯದ ಮುಖವಾಡಗಳು

ಪಾಪಿಗಳ ಧ್ವಂಸಿಸಲು
ಮತ್ತೆ ಅವತಾರಿ ಬರುತ್ತಾನೆಂದು
ಕೆಲವರು ಕಣ್ಣಿಗೆ ಕೈ ಅಡ್ಡಗಟ್ಟಿ
ಕಾಯುತ್ತಲೆ ಇದ್ದಾರೆ...... ಎಂದಿನಂತೆ

ಮಾಯಂಗನೆಯರ ಮಂದ ನಗೆಗೆ
ಕುಂಡಿ ಅಡಿಯ ಖುರ್ಚಿ ಕಳಕೊಂಡವರದೆಷ್ಟೋ ಮಂದಿ
ಮಂದ ಹೀರುತ ಮುಂದಾಲೋಚನೆಯಲ್ಲಿದ್ದಾರೆ
ಮತ್ಯಾವ ಸರ್ಕಾರವನ್ನುರುಳಿಸಬೇಕೆಂದು.

ಎಲ್ಲೆಲ್ಲೂ ಮೌಲ್ಯದ ಮುಖವಾಡಗಳು
ಸನ್ಯಾಸಿಯಾದ ಬೆಕ್ಕಿನಂತೆ
ಒಳಗೊಳಗೆ ವ್ಯವಸ್ಥೆಯೊಂದಿಗೆ ಒಳ ಒಪ್ಪಂದ
ಸಿಕ್ಕರೆ ಬಿಡರೆ ಇವರು ಲೂಟಿಯ ಲೋಕಾಭಿಚಾರ!

ಯೂಕ್ರೇನ್ ಯುದ್ದಕ್ಕೆ ಕೇವಲ ತುಟಿಗಳಿಂದಲೆ ಸಂತಾಪ
ರಷ್ಯದ ರಾಕ್ಷಸನ ಎದುರಿಸದಾಯಿತೆ ಜಗ
ಟರ್ಕಿಯಲ್ಲಿ ಭೂಕಂಪದ ನೆಲನರ್ತನ
ಹೆಣದ ರಾಶಿಗಳಿಗೆ ಇಲ್ಲ ಶವ ಸಂಸ್ಕಾರ

ಅಗೊ ಅಲ್ಲಿ ಮೊಬೈಲಿನಲ್ಲಿ ಆಟ ಆಡುತ್ತಿದ್ದಾರೆ ಮಂದಿ
ಜಗದ ಗೊಂದಲವ ಮರೆತು
ದುಡಿಮೆ ಬೇಡ ದುಡ್ಡು ಬೇಕು
ಪರೀಕ್ಷೆ ಬೇಡ ಪಾಸಾಗಬೇಕೆಂದು ವಿದ್ಯಾರ್ಥಿಗಳ ಹರತಾಳ

ಮೌನ ಮಂಥನದ ನಡುವೆ ಜಗಕಂಡವರು
ಮುಗಳ್ ನಗುತ್ತಲ್ಲಿದ್ದಾರೆ
ಯುಗಧರ್ಮದ ರೀತಿ ರಿವಾಜಿಗೆ
ಸೋಜಿಗಗೊಂಡು ಹೇಳಲಾಗದೆ ತೊಳಲಾಡುತ್ತಿದ್ದಾರೆ.

❖

ಓದದೆ ಇದ್ದಿದ್ದರೆ?

ಓದದೆ ಇದ್ದಿದ್ದರೆ
ತಾಂಡದ ಬೇರೆ ಮಕ್ಕಳಂತೆ ಜೀತ
ತಂಗಳುಂಡು ಸತ್ತ
ಪಕ್ಕೀರನ ಮಗನಂತೆ ......

ಕಾಫಿ ತೋಟದಲ್ಲಿ
ಅರ್ಧಕೂಲಿಗೆ ದುಡಿಯುತ್ತಿದ್ದ ಬಾಲಕಾರ್ಮಿಕನಾಗಿ
ಛಳಿಗೆ ಗಳಗಂಡ ಬಂದು ಸತ್ತು
ಹಾದಿ ಹೆಣವಾದ ಅನೇಕ ಮಕ್ಕಳ ಸಾಲು ಸೇರುತ್ತಿದ್ದೆ

ಕಬ್ಬು ಕಡಿಯಲು ಊರೂರು ಅಲೆದು
ಅರ್ಥವೆ ಆಗದ ಬದುಕಿನೊಂದಿಗೆ ಸೆಣಸಾಡುತ್ತಿದ್ದೆ
ಇಲ್ಲ, ಕೇರಳಕ್ಕೊ ಮಂಗಳೂರಿಗೊ ವಲಸೆ ಹೋಗುತ್ತಿದ್ದೆ
ಬಾರದ ಮಳೆ ಬೆಳೆಯದ ಭೂಮಿ ಕಂಡು ಜಿಗುಪ್ಸೆಗೊಳ್ಳುತ್ತಿದ್ದೆ

ದನ ತಿರುವಲು ಹೋಗಿ ಈಜ ಬಾರದೆ ಗುಂಡಿಗೆ ಬಿದ್ದದ್ದು
ದೆವ್ವ-ಭೂತಗಳ ಕತೆಯ ನಡುವೆ ಬದುಕಿದ್ದು
ದೇವರು ಬಲಿಕೇಳಿದಾಗ
ಜನರ ಮನಸ್ಸಿನ ದುಗುಡ ಅರ್ಥೈಸಿಕೊಳ್ಳಲಾಗದಿದ್ದು

ಯೋಚಿಸುತ್ತಿದ್ದೇನೆ
ಬುದ್ಧ ಹೇಳಿದ್ದು ಸರಿನೊ
ಬಸವ ಹೇಳಿದ್ದು ನಿಜವೊ
ಫುಲೆ ಅಂಬೇಡ್ಕರ, ಪೇರಿಯಾರ ಯೋಚನೆಗಳ ಪರಿ

ಹೀಗೆ ಯೋಚಿಸಿದರೆ
ಮೂಲೆ ಗುಂಪು ಮಾಡುವ ಪುಂಡರು
ಭಾಷೆ ನೋಡಿ ಭಾವನೆ ಕೊಲ್ಲುವ ಸಂಪಾದಕರು
ಯಾರು ಸರಿ ಇವರೆಲ್ಲರೊಳು

❖

ಬದುಕೆ ಹೀಗೆ

ಕ್ಲಿಷ್ಟ ಬದುಕಲಿ
ಕಷ್ಟಗಳದ್ದೆ ಕಾರುಬಾರು
ಅವರು ಕಟ್ಟಿಗೆ ಕಡಿಯುತ್ತಾರೆ
ಕಬ್ಬಿನ ಗದ್ದೆಯಲ್ಲೂ ದುಡಿಯುತ್ತಾರೆ

ತಮ್ಮ ಸ್ವಾಭಿಮಾನವೆ ದೊಡ್ಡದುಡಿಮೆ
ತಿರಪೆ ಎತ್ತರೆಂದು
ಹೆದರಿಸಿ ಹಣಸುಲಿಯರು
ಹೀಗೆ ಎಂದು ಕೆಲವರಂತೆ ಹಕ್ಕೊತ್ತಾಯ ಮಾಡರು.

ರಸ್ತೆ ಬದಿಯ ಖಾಲಿ ಜಾಗ
ಛಳಿ ಮಳೆ ಬಿರು ಬಿಸಲಿರಲಿ ಮೂರು ಮೂಲೆಯ ಟೆಂಟು
ಅರಮನೆ
ಬದುಕಿನ ಬಹುತೇಕ ಕ್ಷಣ ಭೂಮಿ ಅಗಿಯುವುದರಲ್ಲೆ ಕಳೆಯುತ್ತಾರೆ

ಯಾರ ಮೇಲೆ ಅವರಿಗೆ ಮುನಿಸಿಲ್ಲ
ಹೊಟ್ಟೆ ಕಿಚ್ಚಿಗೆ ಸಮಯವಿಲ್ಲ
ರಟ್ಟೆ ಮುರಿದು ಮಣ್ಣು ಅಗಿದರೆ
ನಿದ್ದೆಯಲಿ ಕನಸುಗಳಿಗೆ ಕೆಲಸವೆ ಇಲ್ಲಾ

ಮೈ ನೋವಿಗೆ ಮದ್ಯವೆ ಮದ್ದು
ರಾಗಿ ಮುದ್ದೆ ಚಟ್ನಿ ಉಂಡರೆ ಮುಗಿತು ಊಟದ ಶಾಸ್ತ್ರ
ರಾಜ್ಯ ಆಳಬೇಕೆಂದಿಲ್ಲ
ಕೋಟೆ ಕಟ್ಟುವ ತೆವಲು ಇಲ್ಲ

ಕೋಟಿ ಕೋಟಿ ಕೂಲಿಗಾರರ ಬದುಕೆ ಹೀಗೆ
ಅರ್ಥವಿಲ್ಲದೆ ಪ್ರಾಣಿಗಳಂತೆ
ಎಲ್ಲೊ ಹುಟ್ಟು, ಎಲ್ಲೊ ಪಯಣ
ಪ್ರಾಮಾಣಿಕತೆಯೊಂದೆ ಆಭರಣ

❖

ಬದುಕಿನ ಪರಿ

ಇನ್ನೂ ನೆನಪುಗಳನ್ನು ಕದಿಯುವ
ಕನಸನ್ನು ಕಾಣದಂತೆ ತಡೆದ ಮನಸ್ಸುಗಳು ಹುಟ್ಟುತ್ತವೆ
ಏಕೆಂದರೆ ಮನಸ್ಸು ಓದುವ ಮಿಷನ್
ಬಂದರು ಬಂದೀತು.

ಮನುಷ್ಯನಂತೆ ಕೆಲಸಮಾಡಲು ರೊಬೊ
ಹೊಟ್ಟೆ ತಲೆಯನೆಲ್ಲಾ ನೋಡಲು ಸ್ಕ್ಯಾನ್
ಯಾವ ಭಾಗದಲ್ಲಿ ಏನಿದೆ ಕಂಡು ಹಿಡಿಯುವವರಿಗೆ
ಮನಸು ಓದಲು ಅಸಾಧ್ಯವಾದೀತೆ?

ಸುಳ್ಳು ಹೇಳಿದರೆ ಶಬ್ದ ಮಾಡುವ ಮಿಷನ್
ಮಂಪರು ಬರಿಸಿ ಸತ್ಯ ತಿಳಿವ ಪರಿ
ಎಂಥ ಕಾಲವಯ್ಯ
ಮಾತಾಡಿದರೆ ಹೊಯ್ತು ಮುತ್ತು ಹೊಡೆದರೆ ಹೊಯ್ತು

ಮಾತು ಮೃತ್ಯುವಾಗುವ ಪರಿ
ಪರಿಪರಿಯಾಗಿ ಪರದಾಡುತ್ತಿರುವ ಹಲವರು
ಮಾತಿಗೆ ಮಾತಿಲ್ಲದೆ ಗುಂಡಿಗೆ ಬಲಿ
ಯಾರ ಮಾತು ಸತ್ಯವಿಲ್ಲ.

ಅಭಿವ್ಯಕ್ತಿ ಕಸಿದುಕೊಂಡು
ತಲೆಯಿಲ್ಲದೆ ಹೂಂ ಗುಟ್ಟುವ ಪರಿ
ಮಾತಾಡಿದರೆ ಜೈಲು
ಚಿಂತಿಸದರೆ ಪರಲೋಕಕ್ಕೆ ಟಿಕೇಟು

❖

ಬಯಕೆಗೂ ಬರ

ನಕ್ಕರೆ ನೈದಿಲೆಯಂತೆ
ಮಾತುಗಳು ಮಧುವಿನಂತೆ
ಮನಸು ಕದ್ದಳಾ ಕುವರಿ
ಕೋಮಲಾಂಗಿ

ಕಣ್ಣೆದುರು ಕವಿತೆಯಾಗಿ
ಹಾಡಾಗುತ್ತಾಳೆ ಗಾಯಕನ ಸಿರಿಕಂಠಕ್ಕೆ
ಗಾಳಿಯಂತೆ ಸುಂಯ್ಮ್‌ನೆ ಒಮ್ಮೆ ಬೀಸಿ
ತಂಪಾಗುತ್ತಾಳೆ ನನ್ನ ಎದೆಯ ಭಾವಕ್ಕೆ

ಬೇಡ ಎಂದುಕೊಂಡಷ್ಟು ಹತ್ತಿರವಾಗುತ್ತಾಳೆ
ಲೋಕ ಅಪವಾದನೆಗೆ ಹೆದರಿದಷ್ಟು ಹರಿದಾಡುತ್ತಾಳೆ ನನ್ನೊಳಗೆ
ನೋಡುತ್ತಿದ್ದಂತೆ ನಕ್ಕು ಹೆಣಮಾಡುತ್ತಾಳೆ
ರೂಪರೂಪಗಳ ಮೀರಿ ಮರೀಚಿಕೆಯಾಗುತ್ತಾಳೆ

ನೋಡಬೇಕು ಚೆಲುವ ಎನ್ನುವ ಹಂಬಲ
ಕೇಳಬೇಕು ಧ್ವನಿ ಎಂಬ ತವಕ
ಚಿಟ್ಟೆಯಂತೆ ಭಾವನೆಗಳ ತುಂಬಾ ಹಾರಾಡಿ
ಮರೆಯಾಗುತ್ತಾಳೆ.

ಏನೊ ದುಗುಡ, ಬೇಸರ, ಕಳವಳ
ಕದ್ದು ನೋಡುವ ತಲುಬು
ಒಮ್ಮೆ ಬಾಚಿತಬ್ಬಿಕೊಳ್ಳುವ ತಳಮಳ
ತುಟಿಜೇನ ಹೀರುವ ಅವಸರ

ಆದರೆ ....
ಒಲಿದರೆ.... ನಾರಿ
ಮುನಿದರೆ..... ಬರಿ ಮಾರಿಯಲ್ಲ ಹೆಮ್ಮಾರಿ
ನೆನಪಾಗಿದ್ದೆ ಮನಸ್ಸು ಮಂಜಾಯಿತು

❖

ಅಸಲಿ ಯಾದರೂ ಕೆಳಗುಳದನೆ

ಹುಟ್ಟಿಗಂಟಿದ ಹೊಲಸುಗಳ ತೊಳೆಯಲಾಗದೆ
ಜಗದಲ್ಲಿ ಜನರು ತೊಳಲಾಡುತಿಹರು
ಯಾರಿಗೊ ಜಾತಿ
ಯಾರಿಗೊ ಧರ್ಮ

ಅವರು ಕೇಳುತ್ತಾರೆ ನಮಗೆ ಬೇಕಿತ್ತ ಈ ಕರ್ಮ?
ಕೇಳಿರಲಿಲ್ಲ ಹುಟ್ಟಿಸೆಂದು?
ಬುದ್ದ ಕೇಳಲಿಲ್ಲಾ ಅಸಂಬದ್ದ ಮಾತು
ಬಸವ ಕಿತ್ತೆಸೆದ ಜನಿವಾರವನು

ತಲೆಯಿಂದ ಹುಟ್ಟಲು ಸಾಧ್ಯವೆ?
ಭುಜದಿಂದ, ಹೊಟ್ಟೆ ಹಾಗೂ ಪಾದ
ಇವುಗಳಲಿ ನಿಜ ಯಾವುದಯ್ಯ
ಓ ಸಕಲ ಚರಾಚರ ವಸ್ತುಗಳ ಹುಟ್ಟಿಸಿದಾತ

ತಲೆಯಿಂದ ಹುಟ್ಟಿದ ಶ್ರೇಷ್ಠ
ಭುಜದಿಂದ ಹುಟ್ಟಿದ ಕನೀಷ್ಠ
ಹೊಟ್ಟೆಯಿಂ ಹುಟ್ಟಿದ......
ಕಾಲ ನಿಂದ ಹುಟ್ಟಿದ ನಿಕೃಷ್ಟನೆ

ಸುಳ್ಳುವಾದವ ಸಾರಿದ ನೀಚನಿಗೇನು ಶಿಕ್ಷೆ
ಜನ ಕಾಯುತ್ತಿದ್ದಾರೆ ಸಾವಿರಾರು ವರ್ಷಗಳಿಂದ
ಬೋಕಿಯೊಳಗೆ ಹುಟ್ಟಿದವನು ಈಹ ಪರಗಳ
ಅರಿಯದಾದನೆ ಹುಲ್ಲು ಮನುಜ.

ಬದುಕನ್ನರಿಸಿ ಬಂದವ ಸಿಕ್ಕ ಕಾಯಕಮಾಡಿದ
ಇಂದು ಲಾಭಕ್ಕಾಗಿ ಚಪ್ಪಲಿ ಮಾರುವವ ಚಮ್ಮಾರನೆ?
ಗುಡಿ ಗಂಟೆ ಬಾರಿಸುವವ ಪೂಜಾರಿಯೆ?
ಫರಕು ಭಿನ್ನವಾಗಿದೆ ಇಲ್ಲಿ

ಆದರೂ ಹುಟ್ಟಿಗಂಟಿದ ಹೊಲಸು ಕಳೆಯಲೊಲ್ಲದು
ಹುಸಿಯನಾಡುವ ಶ್ರೇಷ್ಠತಮ ಅಸಲಿಯಾಗದೆ ಮೇಲೆ ಹೋದ
ಅಸಲಿಯಾದರೂ ಕೆಳಗಿನವ
ಉಳಿದು ಬಿಟ್ಟನೆ ಕೆಳಗೆ?

ಸಿದ್ಧಾಂತಗಳ ಅಸಲಿಯತ್ತು

ಶಾಲೆಯಲ್ಲಿ ಭಾಷೆಯನ್ನ ಬೋಧಿಸುವ ಮೇಷ್ಟ್ರು
ಮಾತು ಹೀಗೆ ಎಂದು ಹೇಳಿ
ಸಂಸಾರದಲ್ಲಿ ಮೌನವಹಿಸುತ್ತಾನೆ
ಏಕೆಂದರೆ ಹೆಂಡತಿಯೆದರು ಮಾತುಬಾರದೆ

ಹುಡುಗರಿಗೆ ಅಲ್ಪ, ಪೂರ್ಣವಿರಾಮ
ಹೇಳಿಕೊಟ್ಟ
ಸ್ವಲ್ಪ ವಿರಾಮಕೊಡದಾದ
ಹೆಂಡತಿ ಯಾವ ವಿರಾಮ ಕೊಡುವುದಿಲ್ಲವೇ

ಧ್ವನಿ ಏರು, ಇಳಿತಗಳ ತಿಳಿಸಿ
ತನ್ನ ಧ್ವನಿಯ ಏರನ್ನೆ ಮನೆಯಲ್ಲಿ ಮರೆತ
ಇಲ್ಲಿ ಏರುವುದೆ ಹೆಂಡತಿಯದು
ಇವನದೇನಿದ್ದರೇ ಇಳಿಯುವುದು

ಸಿದ್ಧಾಂತಗಳು ಬರಿ ಮತ್ತೊಬ್ಬರಿಗೆ ಪ್ರವಚನಮಾಡಲು
ಮನೆಯಲ್ಲಿ ಮೇಷ್ಟ್ರ ಸಿದ್ಧಾಂತಕ್ಕೆ ಪರ್ಯಾಯ ಸಿದ್ಧಾಂತ ಸದ್ದುಮಾಡಿದಂತೆ
ಭಾಷೆ ಶುದ್ಧಿಮಾಡುವ ಮೇಷ್ಟ್ರ ಭಾಷೆ
ಮನೆಯಲ್ಲೇಕೆ ಖರಾಬು.....

ಎಷ್ಟೋ ಗೊಂದಲ ನಿವಾರಿಸಿದಾತ
ಗೊಂದಲಗೊಳ್ಳುವುದೆ
ಹೆಣ್ಣು ಹೆಣ್ಣಿಗೆ ವೈರಿ
ನಿರ್ಮಾಣದ ಮೂಲವೂ, ಅಂತ್ಯದ ಕಾರಣವೂ

ಅವನು ಪಾಠ ಮಾಡುತ್ತಲೇ ಹುಡುಕುತ್ತಿದ್ದಾನೆ
ಯಾರು ಪರಿಯೆಂದು
ತಾನೋ, ಪಾಠವೊ, ಬದುಕೊ
ಮನೆಯೊಳು ಅವನಿಗೆ ಕ್ಲಾಸ್ ತಗೊಳ್ಳೊ ಹೆಂಡತಿ?

❖

ನಮ್ಮೊಳಗಿನ ನಾಜುಕಯ್ಯ

ಕಿವಿಯವರೆಗೆ ಹಲ್ಲುಗಿಂಜಿ
ಡೊಗ್ಗಿ ಸಲಾಮು ಹೊಡೆದು
ವಂದಿಮಾಗದರಂತೆ
ಪರಾಕ್ ಹೇಳುವವರೆ..........

ಸ್ವಾರ್ಥತೆ ಮತ್ತೊಬ್ಬರ ತೇಜೋವಧೆ
ತಮ್ಮ ಕೆಲಸ ಆಗುವವರೆಗೆ
ಜೀ ಹುಜೂರ್ ಎಂದು
ಬೇರೆಯವರ ಕೀಳಾಗಿಸಿ ಬೇಳೆ ಬೇಯಿಸಿಕೊಳ್ಳುತ

ಅಧಿಕಾರಕ್ಕೆ ಹತ್ತಿರವಾಗಲು
ತಲೆಹಿಡಿಯಲು ಹೇಸದ
ಸೋ ಕಾಲ್ಡ್ ಗಳು
ನಮ್ಮೊಳಗಿನ ನಾಜುಕಯ್ಯನಂತೆ

ತಲೆಯೆ ಇಲ್ಲದ ತಲೆಹರಟೆ
ಕೊಟ್ಟಿರುವ ಕೋಟಿಗಳಿಗೆ ಬಡ್ಡಿ ಕೂಡಿಸಲು
ಭಿನ್ನಮತದ ಪಾಠಮಾಡಿ
ಪವಡಿಸಿಹನು ಅಧಿಕಾರದ ಗದ್ದುಗೆ ಏರಿ

ಪಾಖಂಡಿಗಳಿಗವನು ಪದ್ಮನಾಭನಂತೆ
ಪ್ರೀಯತಮೆಯರೊಂದಿಗೆ ಸರಸಸಲ್ಲಾಪವಾಡಿ
ಬಾಗಿಲೆದುರೆ ಕುಳಿತ
ಪರಮಾಪ್ತನ ಎಡೆ ಸ್ವೀಕರಿಸಲು ಕದ ತೆರೆದಂತೆ

ಬಯಲು ಆಲಯದೊಳಗೊ
ಆಲಯ ಬಯಲೊಳಗೊ
ಅವನು ಕ್ಯಾಕರಿಸಿ ಮುಖಕ್ಕೆ ಉಗಿದ ಎಂಜಲನ್ನು
ಮಹಾಪ್ರಸಾದ ಎಂದು ಸ್ವೀಕರಿಪ

ಅಧಮರ ಹಿಂಡು ಸುತ್ತಾಡುತ್ತದೆ ಅಧಿಕಾರದ ಹಿಂದೆಮುಂದೆ
ಅವನು ಹೀಗೆಂದು ಒಪ್ಪಿಸಿ
ಇವನು ಹಾಗೆಂದು ಒಪ್ಪಿಸಿ
ಬಿಸಾಕಿದ ಎಂಜಲು ನೆಕ್ಕುವ ನಿಯತ್ತಿನ ನಾಯಿಗಳದ್ದೆ ರಾಜ್ಯಭಾರ

ನಮ್ಮ ನಡುವೆಯೆ ಇದ್ದು
ನಮ್ಮದೆ ತಿಂದು ತೇಗಿ
ವಿದ್ರೋಹ ಮಾಡುವ ಹೃದಯಹೀನರು
ದಂಡು ಬರುತ್ತಿದೆ ದಾರಿಬಿಡಿ

ಏನೂ ಅರಿಯದ ಸೋಗಲಾಡಿಗಳಂತೆ
ಊಟಮಾಡಿದ್ದು ಜಗ ತಿಳಿಯದೆಂಬಂತೆ
ನಟಿಸುತಿಹರು ನಟುವಾಂಗರಂತೆ
ಇವರೊ ನಮ್ಮ ನಡುವಿನ ನಾಜುಕಯ್ಯ

❖

ಯಾರೊ ಸತ್ಯದ ಪರ ಕೋರ್ಟು ಮೆಟ್ಟಲು ಏರಿರಬೇಕು

ಮೋಹವೆಂಬ ವ್ಯಾಮೋಹದಲಿ ಸದಾ ತೊಳಲಾಡುವ ಮನ
ಬರಿ ಸುಖಲೋಲಪದ ಗುಲಾಮ
ಲಂಗುಲಗಾಮಿಲ್ಲದ ಕುದುರೆಯಂತೆ ಸವಾರಿ ಮಾಡುತಿಹುದೆ
ಹೊತ್ತ ದೇಹದ ವ್ಯಾಕುಲತೆ

ಚಿತ್ತ ಚಂಚಲ ಗೆಲ್ಲದ ಈ ಜಗದಲ್ಲಿ
ಬುದ್ದನಾಗಲು ಆದೀತೆ
ಸತ್ಯದ ಚರ್ಮಸುಲಿದು ಗಲ್ಲಿಗೇರಿಸಲಾಗಿದೆ
ಯಾರೊ ಸತ್ಯದ ಪರ ಕೋರ್ಟ ಮೆಟ್ಟುಲೇರಿರಬೇಕು.

ವಸ್ತು ಸುಖಕ್ಕಂಟಿಕೊಂಡ ಜೀವ
ನೆಲ, ಜಲ, ಕಾಡು ತನ್ನ ಕಪಿಮುಷ್ಠಿಯಲ್ಲಿಡಲು ಹಂಬಲಿಸಿದೆ
ಕ್ಷಣಾರ್ಧದಲ್ಲಿ ಹೊರಟು ಹೋಗುವ ಜೀವಕ್ಕೆ
ಎಷ್ಟೆಲ್ಲಾ ವ್ಯಾಮೋಹ.

ಪರರ ಸಂಪತ್ತನ್ನ ಲೂಟಿಮಾಡಿ
ಪರಸ್ತ್ರೀಯ ಸಂಗವನೆ ಬಯಸಿ
ಪರರದೆಲ್ಲವ ತನ್ನದಾಗಿಸುವ ಪರಿಯಲ್ಲಿ
ಪಾಪ ಪ್ರಜ್ಞೆಯೂ ಕಾಡದ ಪಾಪಾತ್ಮಜರು

ಪರಮಸುಖವೆಂಬ ಭ್ರಮೆಯ ಬೆನ್ನೇರಿ
ಬೃಂಗ ಸಿಲುಕಿದ ಜ್ವಾಲೆಯಲಿ ಜಿಗಿವ
ಮನುಜನೆಂಬ ನಿಕೃಷ್ಠ ಕ್ಷುದ್ರಜೀವಿ
ಶಾಶ್ವತವಲ್ಲದ ಬದುಕಲಿ ಯಾಕಿಷ್ಟು ಪಡಿಪಾಟಲು

ಮಾಯ ಸಂಸಾರ ನೆಚ್ಚಿ
ಅದು ಬೇಕು, ಇದು ಬೇಕು
ವಿಸಿ, ಡಿಸಿ ಯಾಗಬೇಕು...
ಅವನ ಕಣ್ಣೆದುರು ನಗೆ ಪಾಟಲು.

❖

ಮುಖದ ತುಂಬ ಬರಿ ಮುಖವಾಡವೆ

ಮನುಷ್ಯನೆ ಹೀಗಿರಬೇಕು
ಒಮ್ಮೆ ಎಲ್ಲಾಬಲ್ಲ ಪಂಡಿತನಂತಾಡುತ್ತಾನೆ
ಮತ್ತೊಮ್ಮೆ ಏನು ತಿಳಿಯದ ಮುಗ್ಧನಂತೆ
ಸತ್ಯ ಮರೆಮಾಚಲು ಎಷ್ಟು ಮುಖವಾಡಗಳು

ಢೊಂಗಿ ಬಾಬಾನಾಗಿ ಎಲ್ಲದಕ್ಕೂ ದಿವ್ಯ ಔಷಧಿ ಕೊಡುವಾತ
ನೀವು ತಪ್ಪು ಮಾಡಬೇಡಿ ಎಂದು ಪ್ರವಚನ ನೀಡಿದಾತ
ಭಕ್ತರು ಕೊಟ್ಟಿದ್ದನ ಭಕ್ತರಿಗೆ ಸಿಗದಂತೆ ಮಾಯ ಮಾಡುವ ಮಠಾಧೀಶನಂತೆ
ಕಣ್ಣಿಗೆ ಕಾಣುವುದನ್ನು ಕಣ್‌ಕಟ್ಟ ಮಾಡಲು ಎಷ್ಟು ಮುಖವಾಡಗಳು?

ಹೀಗೆ ಬಿಳಿ ಅಂಗಿಯೊಳಗೆ ಕರಿ ಮನಸು
ತಲೆಗೆ ಗಾಂಧಿಟೋಪಿ ಮೆದಳೊ ಹಲಾಲ್ ಟೋಪಿ
ಪಂಚವಾರ್ಷಿಕ ಸುಳ್ಳುಗಳ ಸರದಾರ
ಅಧಿಕಾರ ಗಿಟ್ಟಿಸಿಕೊಳ್ಳಲು ಮುಖಕಾಣದ ಮುಖವಾಡ...!

ಹೌದು ಯಾರಿಗೆ ಯಾರು ಮುಖವಾಡ ತೊಡಿಸುತ್ತಿದ್ದಾರಿಲ್ಲಿ
ತಂದೆಗಳಿಸಿದ್ದನ್ನ ಮಜ ಮಾಡುವ ಭಾವನಾತ್ಮಕ ಮುಖವಾಡ
ಗಂಡನೆದರು ವೈಯಾರದಿಂ ನಲಿವ ಪಾತರಗಿತ್ತಿ ಮುಖವಾಡ
ಜನರ ನಡುವೆ ಇದ್ದು ದೇವರೆ ತೊಟ್ಟಿರಬಹುದು ಮುಖವಾಡದ ಪವಾಡ

ಬೀದಿಯ ತುಂಬೆಲ್ಲಾ ದೇಶಾವರಿ ಮುಖಗಳು
ತಮ್ಮ ಕೆಲಸಕ್ಕಾಗಿ ಕಿಸಕ್ಕನೆ ನಕ್ಕು ಒಳಗಿನ ದ್ವೇಷ ಮುಚ್ಚಿಕೊಳ್ಳುವ ಮುಖ
ಬರುತ್ತಿರುವನು ಶತೃವೆಂದೆನಿಸಿದರು ಸಹಜ ಎನ್ನುವ ಮುಖಭಾವ
ಅಂಕೆಗೊಂದು ಶಂಕೆಗೊಂದು ಮುಖ ಬದಲಾಗುತ್ತಲೆ ಇವೆ

ಅರ್ಥಮಾಡಿಕೊಂಡ ಉಳಿದುಕೊಂಡ
ಅರ್ಥವಾಗದವನ ಬದುಕು ಮತ್ತೊಂದು ಅನರ್ಥ
ಪಾಪ ಕೆಲವರಿಗೆ ಮುಖವಾಡ ಕಾಣುವುದೇ ಇಲ್ಲ
ಅಂತವರ ಕಾಪಾಡಯ್ಯ ಶಿರಗಾನಹಳ್ಳಿಯ ಹನುಮತಂದೆ

❖

ಅವನ ಕೂಗಿಗೆ

ಯಾರೊ ಕವಿ ಎಂದು ಕೂಗಿದರ ಹಿಂದೆ
ವ್ಯಂಗ್ಯವೋ ವಿಡಂಬನೆ ಅರ್ಥವಾಗಲಿಲ್ಲಾ
ಹೇಳಿದವನ ಮುಖಭಾವ ನೋಡುವ ಹಂಬಲ
ಗುಂಪಿನಲಿ ಬೇಕೆಂದೆ ಕೂಗಿರಬೇಕು ಎನ್ನುವ ತರ್ಕ

ತರ್ಕ ವಿತರ್ಕಗಳ ನಡುವೆ ಹಲವು ದಶಕಗಳೆ ಕಳೆದವು
ಕೂಗಿದವನ ಆಶಯ ಮಾತ್ರ ಅರ್ಥವಾಗದೆ
ಒಮ್ಮೊಮ್ಮೆ ಹಿಂಸೆಯಾದರೆ
ಮಗದೊಮ್ಮೆ ಹೆಮ್ಮೆಯಾಗುತ್ತದೆ

ನನ್ನ ಮನೆಯಲ್ಲೆ ಯಾರಿಗೂ ಅರ್ಥವಾಗದ ಕವಿತೆ
ಬಹುಶಃ ಅವನಿಗೆ ಅರ್ಥವಾಗಿರಬೇಕು
ಇವನೇನು ಮಹಾ ಎಂದು ಹೀಯಾಳಿಸುವವಗೆ
ಕೂಗಿ ಹೇಳಬೇಕು ನಾನು ಕವಿಯೆಂದು.

ಕವಿ ಹುಚ್ಚನೆಂದು ಯಾರೊ ಹೇಳಿದ್ದು ನೆನಪಾಗಿ
ಆ ಕಾರಣ ನನ್ನ ಒಯ್ದು ಧಾರವಾಡದ
ಹುಚ್ಚಾಸ್ಪತ್ರೆಗೆ ದಾಖಲಿಸಿಯಾರೆಂಬಂಜಿಕೆ
ಕವಿ ಹುಚ್ಚನೆಂದಾದರೆ
ಜಗದ ಒಳಿತಿಗೆ ಬರೆದ 'ಸರ್ವಜ್ಞ' ಶರಣಾದಿಗಳು ಅವರೆ

ದಾಸರು, ಸಂತರು ಜಗದೊಳತಿಗೆ ಗೀತೆ ರಚಿಸಿದಂತೆ
ಕೃಷ್ಣ – ಅರ್ಜುನನಿಗೆ ಗೀತೆ ಬೋಧಿಸಿದಂತೆ
ದಿನಾ ಬೆಳಿಗ್ಗೆ ಭಟ್ರು ಸಿನೀಮಾದಲ್ಲಿ ಕೆಟ್ಟ ಹಾಡು ಬರೆದಂತೆ
ನನಗೂ ಏನೊ ತೆವಲು ನಾಕಕ್ಕೆದು ಕಿರಿಕಿರಿಯ ನಡುವೆ ಗೀಚಿದಂತೆ

ಹೌದು ಅವನನ್ನ ಹುಡುಕಬೇಕು
ಗಲ್ಲಿಗಲ್ಲಿ, ಬೀದಿಬೀದಿಯಲ್ಲಿ
ಪುಣ್ಯಾತ್ಮ ಒಮ್ಮೆ ಮಾತ್ರ ಕೂಗಿದ
ಓ ಕವಿ ಎಂದು...

❖

ಕಾಯುತ್ತಿದೆ ಅಜ್ಜನಾತ್ಮ

ಯಾರವರು ಯಾರದ್ದು ಮುಲಾಜಿಗೆ ಅರ್ಜಿ ಹಿಡಿದವರು
ಜನತಾಮನೆ
ಪುಗಸಟ್ಟೆ ರೇಷನ್
ಜನ ದುಡಿಮೆ ಬಿಟ್ಟರೆಂದು ಜಮಿನ್ದಾರರ ಕಳಕಳಿ

ಶತಮಾನಗಳಿಂದ ದುಡಿದರು ತೀರದ ಹಸಿವು
ಬ್ರಹ್ಮಾಂಡವನ್ನೆ ನುಂಗಿ ಬಿಡಬೇಕು ಎನಿಸುತ್ತೆ
ಬಡತನದ ಮನೆಯಲ್ಲಿ ಬರಿ ಕೊರತೆ
ತಂಪು ಹವಾನಿಯಂತ್ರಿತದ ಕೋಣೆಯಲಿ ಕುಂತವನಿಗೇನು ಗೊತ್ತು

ಅಜ್ಜನ ಅರ್ಜಿ ಸರ್ಕಾರಕ್ಕೆ ತಲುಪಲೆ ಇಲ್ಲ
ಪರಲೋಕದಲ್ಲಿ ಆತ್ಮ ಮಗನ ಅರ್ಜಿ ತಲುಪಿದರ ಬಗ್ಗೆ ಕೇಳುತ್ತಿದೆ
ನಮ್ಮ ಹುಡುಗನ ಅರ್ಜಿ ಸರ್ಕಾರಕ್ಕೆ ತಲುಪಿತೆ?
ಹೋದ ಜೀವಗಳಿಗೆ ಮಾಹಿತಿ ಇಲ್ಲವೆ

ಹೋಗಲಿ ಬಿಡು ಮಗ ಹೇಗಾದರು ಬರುತ್ತಾನೆ
ಅಜ್ಜ ನಮ್ಮಪ ಹೋದಾಗ ಕೇಳಲು ಮರೆತ
ಅರ್ಜಿ ಇಲ್ಲೆ ಗಿರ್ಕಿ ಹೊಡೆಯುತ್ತಿವೆ
ವಿಧಾನಸೌಧದ ನೂರೆಂಟ್ಟು ಕೊಠಡಿಗಳಲ್ಲಿ

❖

ಮೌನವೆಂದರೆ

ಮೌನವೆಂದರೆ ಸನ್ಯಾಸಿಯ ಅಂತರಾತ್ಮ
ಸಾಗರದ ತಳದಲ್ಲಿ ನಿಶ್ಚಲತೆ
ಮರದೆಲೆಯೂ ಅಲುಗಾಡದ ಜಡತ್ವ
ಕತ್ತಲ ಗರ್ಭಸೀಳಿದ ಬೆಳಕಿನಂತೆ

ಮೌನವೆಂದರೆ ಪ್ರೀತಿಯಲಿ ಬಿದ್ದ ಫಕೀರನಂತೆ
ಎಲ್ಲವನೂ ತೊರದ ಹುಚ್ಚನಂತೆ
ಸ್ಮಶಾನದ ನಿರವತೆಯಂತೆ
ಶತಕಗಳ ಪುರಾತನ ಕೋಟೆಗಳಂತೆ

ಮೌನವೆಂದರೆ ಭೀಷ್ಮನೆದೆ ಹೊಕ್ಕ ಬಾಣದಂತೆ
ಕಂಡರು ಕಾಣದ ಗಾಂಧಾರಿಯ ಕಣ್ಣುಗಳಂತೆ
ಅಂಧ ಕೌರವ ಯುದ್ಧದ ನೋವ ಅನುಭವಿಸಿದಂತೆ
ಪಾಂಡವರ ವನವಾಸದಂತೆ

ಮೌನವೆಂದರೆ ಗುಜರಾತಿನ ಗಲ್ಲಿಯಲ್ಲೆದ್ದ ಕೋಮ ಗಲಭೆಯಂತೆ
ಗರ್ಭಿಣಿಯ ಗರ್ಭಸೀಳಿ ಮಕ್ಕಳ ಕೊಂದಂತೆ
ಕೊಂದ ಪಾಪಿಯ ವಿಜಯೋತ್ಸವವನ್ನ
ಹೆತ್ತಮ್ಮ ನೋಡುತ್ತಲೆ ಇರುವಂತೆ

ಮೌನವೆಂದರೆ ದಲಿತ ಹೆಂಗಸರ ಮೇಲೆ ನಡೆದ ಬಲಾತ್ಕಾರದಂತೆ
ಕೆಡಿಸಿಕೊಂದ ಪಾಪಿಗಳಿಗೆ
ಫರಾಕು ಹೇಳುವ
ಪಾಪಿ ಸರ್ಕಾರದಂತೆ

ಮೌನವೆಂದರೆ ಕಣ್ಣೆದುರೆ ನಡೆವ
ಹಗಲು ಧರೋಡೆಗೆ ಸಾಕ್ಷಿಯಾದಂತೆ
ಲೂಟಿ ನಡೆದರು ಹೇಳದ ಹೇಳಿದರ ಸಂದಿಗ್ಧ
ಸಂವೇದನೆಯಂತೆ

❖

ಹೇಳಬಿಡಬೇಕು

ಅವಳಿಗೆ ಹೇಳಬೇಕು
ಹೀಗೆ ಸುಖಾಸುಮ್ಮನೆ ಕಾಡಬೇಡವೆಂದು
ಮನಸು
ಪಿಸಿವ ಹುಸಿದಾರದಂತೆ

ಅವಳಿಗೆ ಹೇಳಬೇಕು
ಕಣ್ಣ ಕವಡೆಯಿಂದ
ಕಲ್ಲು ಬೀಸಬೇಡವೆಂದು
ದೇಹನಾಜೂಕು ಗಾಯವಾದೀತೆಂದು

ಅವಳಿಗೆ ಹೇಳಬೇಕು
ನೋಟದ ಈಟಿಯಿಂದ ತಿವಿಯಬೇಡವೆಂದು
ಹೃದಯ ಮೃದು
ಹರಿದು ತೂತಾದಿತೆಂದು

ಅವಳಿಗೆ ಹೇಳಬೇಕು
ಕನಸಲ್ಲಿ ಬರಲೇಬೇಡವೆಂದು
ಮನಸ್ಸು ವೇದನೆ ಪಡುವಾಗ
ಸಹಿಸಲಾಗದೆಂದು

ಅವಳಿಗೆ ಹೇಳಬೇಕು
ಎದುರಿಗೆ ಬರಬೇಡವೆಂದು
ಬೇಡವೆಂದರು ಚಕ್ಷು
ನಿನ್ನತ್ತಲೆ ನೋಟ ಬೀರಿಯಾವೆಂದು

ಅವಳಿಗೆ ಹೇಳಬೇಕು
ಒಮ್ಮೆ ನನ್ನ ಎದೆಯ ಮೇಲೆ ಕಿವಿಯಟ್ಟು ಕೇಳು
ಶಬ್ದದಾಚೆಯ ಮಾತು
ನಿನಗೂ ಅರ್ಥವಾದೀತು ಎಂದು.

❖

ಹೇಗೆ ಪ್ರೀತಿಸಲಿ

ಹೇಳು ಗೊಂಬೆ
ನಿನ್ನನ ಹೇಗೆ ಪ್ರೀತಿಸಲಿ?
ಕತ್ತಲೊಳಗೆ ಬೆತ್ತಲಾಗುವ ಮನೋವಿಕಾರದ ಅಗ್ನಿ
ಕ್ಷಣ ಕ್ಷಣವೂ ಸುಡುತಿರಲು....

ಹೇಗೆ ನಿನ್ನ ಮುದ್ದಾಡಲಿ
ದ್ರೌಪದಿಯ ಕಂಡ ಕೀಚಕನಂತಾದ ಮನ
ಭೀಮ ನಾಗಮನದ ಮುನ್ನ
ತಣಿಸಿಕೊಳ್ಳಲೆ ಮನದ ಇಂಗಿತವನ್ನ

ಎಷ್ಟು ಸಲ ಕೊಲೆಯಾಗಲಿ ನಾನು
ನಿನ್ನ ಕಣ್ಣುಗಳ ಬಾಣಗಳಿಂದ
ವಿರಾಮ ಹೇಳು
ನನ್ನೊಳಗೆ ನಡೆದಿರುವ ಯುದ್ಧಕ್ಕೆ

ಬದುಕು ಇಷ್ಟೇನಾ
ಮತ್ತೊಬ್ಬರಿಗೆ ಕಾಯುವುದೆ?
ಇಷ್ಟ ಇರುವವನ ಜೊತೆಗೆ
ಹಂಚಿಕೊಳ್ಳದ ಬಯಕೆ ಮತ್ತೇತಕೆ ಹೇಳು

ಕಟ್ಟಿಹಾಕುವೆ ನನ್ನ ಸ್ವತಂತ್ರವಾಗಿ ಹಾರುವ ಮನವನೊಮ್ಮೆ
ಒಂದೇ ಶಬ್ದ ಗೌರವವೆಂದು
ಪ್ರೀತಿಯ ನಡುವೆ
ಈ ಬಾರ್ಡರು ....

ಕನಸು ಕನವರಿಕೆಯ ಹಾವಳಿಯಲಿ
ನುಜ್ಜು ಗೊಜ್ಜಾಗಿ ಜರ್ಜರಿತಗೊಂಡ
ಹೃದಯಕ್ಕೆ
ಒಮ್ಮೆ ಮುದನೀಡುವೆಯಾ ಗೊಂಬೆ?

❖

ಎಚ್ಚರ !

ರಕ್ಕಸರಿದ್ದಾರೆ ಎಚ್ಚರ
ಗಾಳಿಯಲಿ ಸುಳ್ಳಿನ ಗೋಲಿ ಬಿಡುವ
ಗಾಳಿಮಾತುಗಳ ಸರದಾರರು
ಘಳಿಗೆಗೊಮ್ಮೆ ಬಣ್ಣ ಬದಲಿಸುವ ಗೊಸುಂಬೆಗಳಂತೆ

ನಮ್ಮಂತಿದ್ದು ನಮ್ಮನೆ ತೆಗಳುವ
ತಗಾದೆಯಿಲ್ಲದೆ ತೆಪ್ಪಗಿದ್ದು
ತುಪಾಕಿಯಂತೆ ಚಾರಿತ್ರ್ಯವಧೆ ಮಾಡುವ
ರಕ್ಕಸರಿದ್ದಾರೆ ಎಚ್ಚರಿಕೆ ಈ ಸಮಾಜದಲ್ಲಿ

ಅವರಿವರ ಬಳಿ ಹೋಗದಂತೆ ಹೆಳವನ ಮಾಡಯ್ಯ ತಂದೆ
ಎಂದೆನಿಪ ಶರಣರ ವಚನದಂತೆ
ಅತ್ತಿತ್ತ ಸುಳಿದಾಡದಂತೆನ್ನ ಚಿತ್ತವನಿಡಯ್ಯ ತಂದೆ
ಸೃಷ್ಟಿ ಕರ್ತನಲಿ ಬೇಡುತ

ಅವರದ್ದೆ ಬೆನ್ನು ಕಾಣದಿದ್ದರೂ
ಮತ್ತೊಬ್ಬರಿಗೆ ಹಳಹಳಿಪ
ರಕ್ಕಸರದಂಡಿಗೆ
ಧನ್ಯರಾಗಿರಬೇಕು..

❖

ಸುಳ್ಳುಸುದ್ದಿಕೋರರನ್ನು ಗಡಿಪಾರು ಮಾಡಿಬಿಡಿ

ಸುದ್ದಿಯೊಂದು ಹಾಗೆ ಬಂದು
ಒಬ್ಬರ ಪಕ್ಕ ಕುಳಿತಿತ್ತು
ಪಾಪ ಸುದ್ದಿಗೇನು ಗೊತ್ತು
ತಾನು ಇಷ್ಟೊಂದು ಸುದ್ದಿಯಾದೇನು ಎಂದು.

ಅವರು ಅದೇ ಸುದ್ದೀಯನ್ನ ಸದ್ದಿಲ್ಲದೆ
ಮತ್ತೊಬ್ಬರ ತಲೆಗೆ ಬಿಟ್ಟರು
ಬಿಡಿಸಿಕೊಂಡವರ ಮೆದುಳಿಗೆ ಕಚಗುಳಿಯಿಟ್ಟಿದ್ದೆ
ನೂರ್ ಸುದ್ದಿಯಾಗಿ ಬಿಡುವುದೆ?

ಸುದ್ದಿ ಮಾಡಿದವರಿಗೇನು ಗೊತ್ತು
ಯಾರ ಬದುಕಿನ ಕಾಪೀನಿಗೆ ಮೊಳೆ ಬಡಿಯುತ್ತಿದ್ದಾರೆಂದು
ಸುದ್ದಿಯಾದವರ ನೋವು ಎಷ್ಟು ಎಂದು
ಅದೇನೊ ಅಂತಾರಲ್ಲ ಮಾಡಿಲ್ಲ ಮಟ್ಟಿಲ ಮುಖಮಸಿಯಾತು ಅಂದಂಗೆ

ಪಾಪ ಸುದ್ದಿಗೆ ಹೈರಾಣಾಗಿದೆ
ಬಾಯಿಂದ ಬಾಯಿಗೆ ಅಪಾರ್ಥಗೊಳ್ಳುತ್ತ
ಏನೊ something ಇದೆ
ಏನದು something?

ಪ್ರಶ್ನೆಯಾಗಿ ದೊಡ್ಡ ಪರ್ವತದಷ್ಟು ಸಮಸ್ಯೆ
ಅವಳು ಯಾರು?
ಅವನು?
ಪಾಪ ಜಗಿಯುವವರ ಬಾಯಿಗೆ ಎಲೆಯಡಿಕೆಯಂತೆ

ಅಗಿದು ಅಗಿದು ಉಗಳಿ ಉಗಳಿ
ಸುದ್ದಿ ಮಾಡಿದವರ ತಲೆಯೊಳಗೆ ತೂತುಬಿತ್ತು
ಸುದ್ದಿಗಳೆಲ್ಲಾ ಸೋರಿ ನಿಲ್ಲದಾದವು
ಸುದ್ದಿಗಳಿಗ ಸದ್ದಿಲ್ಲದಾದವು

ಛೆ ಎಂಥ ಮಾನಸೀಕ ರೋಗಿ
ಸುದ್ದಿ ಮಾಡುವವ
ಮತ್ತೊಬ್ಬರ ಮನಸು ಕೆಡಸಿ ಸುಕಾಸುಮ್ಮನೆ ಹೆಸರೂ ಕೆಡಸಿ
ಏನೊ something ಏನೂ ಇಲ್ಲಾ ಮಣ್ಣನಗಟ್ಟೆ

ತಾತ್ಕಾಲಿಕ ಖುಷಿಗೆ ನೆಮ್ಮದಿ ಹಾಳುಮಾಡುವ
ಸುಳ್ಳು ಸುದ್ದಿಖೋರರನ್ನ ದೇಶದಿಂದಲೆ ಓಡಿಸಿ
ಓ ಇದೇನು ಹೊಸ ಸ್ಲೋಗನ್
ಯಾರೊ ಹೇಳಿದರು ಸುದ್ದಿಗೆ ಆತಂಕ

ಪಾಪ ಸುಖಾಸುಮ್ಮನೆ ಸುದ್ದಿಯಾದ ಹುಡುಗಿ
ಪೆಚ್ಚಾಗಿದ್ದಾಳೆ
ಯಾರು ಹಿತರಯ್ಯ
ಈ ಇರ್ವರಲ್ಲಿ ಎಂದು ನಿಜ ಹುಡುಕುತ್ತಿದ್ದಾಳೆ

❖

ಅವಳಿಗೆ ಬುಕ್ಕಾದ ಮನಸು

ಗೊತ್ತಿಲ್ಲ ಆರಂಭ
ಮದಲು ಬರಿ ಹುಸಿನೋಟ
ನಂತರ ಒಂದು ಕಿರುನಗೆಯ ಮಾಟ
ದೇಹದ ತುಂಬ ಹರಿದ ವಿಷದಂತೆ

ಪ್ರೀತಿ ಹುಟ್ಟಲು ಯುಗ ಬೇಕೆ
ಕಣ್ಣು ಕಣ್ಣು ಸಂಧಿಸಿದರೆ ಮುಗಿಲೆ ಕತ್ತರಿಸುವ ಮಿಂಚಿನಂತೆ
ನನ್ನೊಳಗೆ ಯಾವಾಗ ಸಂಚರಿಸಿತೊ
ವಿದ್ಯುತ್ ಪ್ರವಾಹದಂತೆ

ಈಗ ಬೇಡವೆಂದರೂ ತವಕ
ಒಮ್ಮೆ ಮನಸ್ಸಿಗೆ ಬೊಯ್ಯುತ್ತೇನೆ ಬೇಡವೆಂದು
ಚಿಕ್ಕ ಮಕ್ಕಳಂತೆ ರಚ್ಚೆಗಿಳಿದು
ರಂಪ ಮಾಡುತ್ತದೆ ಸಾಗರದಾಳದಲ್ಲೆದ್ದ ಭೀಕರ ಬಿರುಗಾಳಿಯಂತೆ

ಅವಳು ಮಾತ್ರ ನಿಶ್ಚಲ ಬಂಡೆಯಂತೆ
ನಿಶಬ್ದ ಮೌನದಲ್ಲೆ ಕೊಲೆಮಾಡುವ ಮಾಟಗಾತಿ
ಯಾವ ಕ್ಷಣದಲ್ಲಿ ಇರಿದಳೊ ಎದೆಯ
ಗಾಯ ಒಳಗೊಳಗೆ ದೊಡ್ಡದಾಗುತ್ತಿದೆ ಪ್ರೀತಿ ಹೆಸರ ಹೇಳಿ

ನೋಡು ಅವಳನೊಮ್ಮೆ
ಹೇಗೆ ಸುಮ್ಮನಿದ್ದಾಳೆಂದು
ಬೇಕಿತ್ತ ನಿನಗೆ ಈ ರಂಪಾಟದ ರಂಗಿನಾಟ
ಬುದ್ದಿ ಹೇಳಲು ಹೊರಟೆ

ಮನಸ್ಸು ಮೆದಳು ಅವಳಿಗೆ ಬುಕ್ಕಾಗಿವೆ
ನನ್ನ ಮಾತು ಕೇಳುತ್ತಿಲ್ಲ
ಅವಳ ನೆನಪಿಸುತ್ತಲೆ ಸುತ್ತುತ್ತಿವೆ
ನನ್ನ ನೆಮ್ಮದಿಯ ಹಾಳುಮಾಡಿ.

ಗುಂಡುಹಿಡಿದು ನಿಂತಿದ್ದಿರಿಲ್ಲಿ

ನನಗಿನ್ನು ಆ ಕ್ಷಣ ನೆನಪಿದೆ
ಬಿಸಿಲ ಬೇಗೆಯಲ್ಲಿ ನೀರು ಕೇಳಿದಾಗ ನೀನು
ಮೇಲಿಂದ ನೀರು ಸುರಿದದ್ದು
ದೂರದಿಂದಲೆ ಲೇ ಲಮಾಣ್ಯ ದೂರ ಸರಿ ಎಂದದ್ದು

ಕಟ್ಟಿಗೆ ಹೊರೆ ಹೊತ್ತ ಲಂಭಾಣಿ ಹುಡುಗಿಯರನ್ನ
ಬೇ ಲಮಾಣಿ ಬರ್ತೀಯ ಎಂದು ಚುಡಾಯಿಸಿದ್ದು
ನೆತ್ತಿ ಉರಿತಾಳದೆ ಹೂಂ ಅಂದವಳ ತಳಮಳ ಅರ್ಥವಾಗದೆ
ಸೆರಗು ಎಳೆದು ಶೀಲ ಕೆಡಿಸಿ ಕಾಸು ಕೊಟ್ಟದ್ದು

ಸಮಾಜ ಯಾಕೆ ಹೀಗೆ
ಜಾತಿ ಹೆಸರಲ್ಲಿ ನಡೆವ ದೌರ್ಜನ್ಯ
ಕೋಮುದ್ವೇಷದ ಕೊಲೆಗಳು
ಬರುವುದೇ ಇಲ್ಲವೆ ನೆಮ್ಮದಿಯ ನಾಳೆ....

ಸತ್ಯ ಮಾತನಾಡುವವನ ಎದೆಸೀಳುವ ಗುಂಡುಗಳು
ಯಾವ ಬಣ್ಣದ್ದವೆಂದು ಗೊತ್ತಿದ್ದರು
ಜನರು ಮೌನವಹಿಸಿರುವದಾದರು ಯಾಕೆ
ಜನರ ಎದೆಯಲ್ಲಿ ಗೊಂದಲದ ಭಾವ

ಲಂಭಾಣಿ ಹುಡುಗಿಯ ಮನಸ್ಸಲ್ಲಿ ಅದೇ ದುಗುಡ
ಕಾಲ ಬದಲಾದರೂ ಮೇಲ್ಜಾತಿ ಎನ್ನುವ ಬೇವರ್ಸಿಯ ಭಾವ ಬದಲಾಗಿಲ್ಲ
ಕೆಳಗಿನವನು ಸತ್ಯ ಮಾತಾಡಿದರೆ ಸಹಿಸದ ಆ ಮೂವರು
ಬಸವ ತತ್ವಕ್ಕೆಪಚಾರ ಮಾಡಿದ ತಾಯ್ಗಂಡರು.

ಬುದ್ಧ, ಬಸವ, ಫುಲೆ ಬದುಕಿದ್ದಾರೆ
ನಡೆಯುತ್ತಿರುವ ವೈರುಧ್ಯಗಳಿಗೆ ಸಾಕ್ಷಿಯಾಗುತ್ತಿದ್ದಾರೆ?
ಪನ್ಸಾರೆ, ದಾಬೊಳ್ಕರ್, ಕವಿತ, ಕಲ್ಬುರ್ಗಿ
ಮತ್ತೆ ಬರಬೇಡಿ ಗುಂಡು ಹಿಡಿದು ಜನ ನಿಂತಿದ್ದಾರೆ.

❖

ಅವಳು

ನನ್ನೆದೆಯ ಕದವ ಸರಿಸಿ
ಮನದ ಮೌನವನ್ನು ಹರಿಸಿ
ಇರುಳು ಸರಿದ ಕತ್ತಲಂತೆ
ಮಾಯವಾದಳು

ಯಾವ ಭಾವ ಅದ್ಯಾವ ಭಂಗಿ
ಹೊಕ್ಕಿತೆದೆಯ ಒಳ ಸುರಂಗಿ
ಹೊತ್ತು ನೆತ್ತಿ ಗೇರಿದಂತೆ
ಚಿತ್ತ ಅಮಲು ತರಿಸಿ ಮತ್ತೆ ಮರೆಯಾದಳು ॥ನನ್ನದೆಯ॥

ಮತ್ತೆ ಮತ್ತೆ ಅವಳ ನೆನಪು
ಯಾವ ಮಾಯ ಮೋಹವಿದು
ನಕ್ಕು ಒಮ್ಮೆ ನೋಡದಂತೆ
ಓಡಿ ಹೋದಳು ॥ನನ್ನದೆಯ॥

ಕಾದು ಕಾದು ಮನಕೆ ದುಗುಡು
ಸ್ಪಷ್ಟವಾಗದ ನೋಟ ಬೀರಿ
ಕನಸುಗಳೆಲ್ಲವ ಚೂರು ಮಾಡಿ
ಮತ್ತೆಂದು ಬಾರದಂತೆ ದೂರ ಹೋದಳು ॥ನನ್ನದೆಯ॥

❖

ಯಾರೊ ಹೀಗೆ

ಯಾರು ಹೀಗೆ ಕರೆಯುತಿಹಳು
ಮನದ ತುಂಬ ಹರಿಯುತಿಹಳು
ಭಾವಕೊಮ್ಮೆ ಕಚಗುಳಿಯಿಟ್ಟು
ಎಸಿದೆಯಾ ಪ್ರೀತಿ ಗುಟ್ಟು ಹೇಳದಾದಳು... ॥ಯಾರೊ ಹೀಗೆ॥

ಪ್ರೀತಿ ಗೀತಿ ಬೇಡವೆಂದೆ
ಕಣ್ಣ ಕವಣೆ ಬೀಸಿ ಹೊಡೆದು
ಸುಮ್ಮನಿದ್ದ ಮನದ ತುಂಬ
ಆಶೆ ಬೀಜ ಚೆಲ್ಲಿ ಅವಳು ಎಲ್ಲಿ ಹೋದಳು ॥ಯಾರೊ ಹೀಗೆ॥

ಕನಸ ತುಂಬ ತುಂಬಿಕೊಂಡು
ಕನವರಿಕೆಯಲ್ಲೊ ಕಾರುಬಾರು
ಮೆದುಳ ಮೂಲೆ ಮೂಲೆ ಬಿಡದೆ ಅವಳು
ಪಸರಿಸಿ ಏಕೆ ಪರಾರಿಯಾದಳು ॥ಯಾರೊ ಹೀಗೆ॥

❖

ನಾನು ಮತ್ತು ನನ್ನ ನೆರಳು

ನನ್ನ ನೆರಳು ನನ್ನೊಂದಿಗೆ ವಾದ ಮಾಡಿತ್ತು
ಯಾರು ನಿನ್ನೊಂದಿಗಿಹರೆಂದು ಪ್ರಶ್ನೆ ಕೇಳಿತ್ತು
ಅಪ್ಪ, ಅಮ್ಮ, ಸಹೋದರರು, ಸಹೋದರಿಯರು, ಕುಟುಂಬ, ಸ್ನೇಹಿತರು
ಸಮಾಜ ದೊಡ್ಡ ಪಟ್ಟಿಯನ್ನೆ ಇಟ್ಟಿದ್ದೆ

ಮೂರ್ಖನೆಂದು ಒಮ್ಮೆಂದೊಮ್ಮೆಗೆ ತೀರ್ಮಾನಿಸಿತು
ಅಮ್ಮ ಕೊಟ್ಟಳು ಜನ್ಮ, ಅಪ್ಪ ಕೊಟ್ಟನು ತಿಳುವಳಿಕೆ
ಅಣ್ಣ ತಮ್ಮಂದಿರು ದಾಯಾದಿಗಳಾದರು
ಹೆಂಡತಿ ಮಕ್ಕಳು ಸಂಪತ್ತಿರುವವರೆಗೆ...

ನಕ್ಕಾಗ ಹಿಂದೆ ನಗುತ್ತ
ನೀ ಅತ್ತಾಗ ಅಳುತ್ತ
ನಿಂತರೆ 60 ಡಿಗ್ರಿಗೆ ವಾಲಿ
ಬಗ್ಗಿದರೆ 50 ಡಿಗ್ರಿಗೆ ಬಾಗಿ

ಮಲಗಿದರೆ ನಿನ್ನೊಂದಿಗೆ ಲೀನವಾಗಿ
ಕುಡಿದಾಗ ನೀ ವಾಲಿದರೆ 20 ಡಿಗ್ರಿ, 30 ಡಿಗ್ರಿ ವಾಲಿ
ನಿನ್ನೆಡಕ್ಕೆ ಬಲಕ್ಕೆ ನಾನೆ
ಅಸ್ತಿತ್ವದ ಪ್ರತಿರೂಪ

ಸುಖ ಹಂಚಿಕೊಳ್ಳುವ ಗೆಳೆಯ
ದುಃಖ ಕೇಳದ ಜಗ
ಸಾಕ್ಷಿ ನಾನೆ ನಿನ್ನಿರುವಿಕೆಗೆ
ನಿನ್ನ ಸಾವಿನ ಕ್ಷಣದವರೆಗೂ ನಾನೆ

ಹೌದು ಒಮ್ಮೆ ಹಿಂದಿರುಗಿದರೆ
ಎಲ್ಲವೂ ಮಾಯ
ಮಾಯಾಂಗನೆಯರು, ಮನದನ್ನೆಯರು, ಗೆಳೆಯರು, ನೆಂಟರು, ಇಷ್ಟರು
ನನ್ನ ನೆರಳೊಂದೆ ಶಾಶ್ವತ.

❖

ನೀನು ಬಯಸುವುದಾದರೆ

ನೀನು ಬಯಸುವುದಾದರೆ
ನಿನ್ನ ಬೊಗಸೆಗಣ್ಣುಗಳನ್ನೊಮ್ಮೆ
ನನ್ನ ತುಟಿಗಳಿಂದ ಚುಂಬಿಸಿ
ಅವುಗಳ ನೋಟದ ಮಾಟ ಸವಿಯಲೆ

ನೀನು ಬಯಸುವುದಾದರೆ
ನಿನ್ನ ತುಟಿಗೊಮ್ಮೆ ತುಟಿ ಒತ್ತಿ
ಜಿನಗುತ್ತಿರುವ ಮಧುವ ಹೀರಿ
ಮನಸ್ಸಿಗೊಂದಿಷ್ಟು ಮುದ ನೀಡುವೆ

ನೀನು ಬಯಸಿದ್ದೆ ಆದರೆ
ನಿನ್ನ ಎದೆಯ ಮೇಲೆ ಒಮ್ಮೆ ತಲೆಯನಿಟ್ಟು
ವಿರಹವೇದನೆಯನ್ನ
ಹಂಚಿಕೊಳ್ಳುವಾಸೆ

ನೀನು ಬಯಸಿದ್ದೆ ಆದರೆ
ನಿನ್ನ ಬಿಸಿ ಉಸಿರಿನ
ಹಬೆಯಲ್ಲಿ ಮಿಂದು
ಮತ್ತು ಬರಿಸಿಕೊಳ್ಳಲೆ

ನೀನು ಬಯಸಿದ್ದೆ ಆದರೆ
ಬಾಹುಗಳಲ್ಲಿ ಬಿಗಿದಪ್ಪಿ
ಹಾಗೆ ಯುಗ ಕಳೆಯಲೆ
ಮರೆತು ನನ್ನ ಅಸ್ತಿತ್ವವನ್ನೆ

❖

ಮನಸ್ಸೆಂಬ ಹಠಮಾರಿ

ಮನಸ್ಸೆ ಹೀಗೆ
ಹಠಮಾರಿ
ಬೇಡವೆಂದರೆ ಬೆಡಗಿರ ಹಿಂದೆ
ಲಾಡಿಯಂತೆ ಅಲ್ಲಾಡಬಯಸಿ

ಅವರು ಬೇಡವೆಂದಾಗ
ಬಿಸಾಡಿದ ವಾಟೆಯಂತೆ
ಮರ್ಕಟ ಬುದ್ಧಿ ಬಿಡದೆ
ಹೊಯ್ದಾಡುತ್ತದೆ

ಚಿತ್ತ ಚಂಚಲೆಯರಿದ್ದಾರೆಂದು
ತಿಳಿಯದೆ ಪಾಪ
ಅಲೆವ ಬೀದಿನಾಯಿಯಂತೆ
ಅಲೆಯುತ್ತದೆ

ಮುದುಡಿ ಮುದ್ದೆಯಾಗಿ
ಮೂಲೆ ಸೇರಿ
ನೋವ ಅನುಭವಿಸುತ್ತದೆ
ನಿದ್ದೆ ಮಾಡದೆ ಒದ್ದಾಡುತ್ತದೆ

ಬೆಂಕಿ ಸುಡುತ್ತೆಂದರು
ಕೆಂಡ ಮುಟ್ಟುವ ಚಪಲ
ಅಂದು ಸುಟ್ಟ ಬೆಕ್ಕಿನಂತೆ
ನೊಂದುಕೊಳ್ಳುತ್ತದೆ

ಬೇಕಿಲ್ಲ ಕಣಯ್ಯ ನೀನು
ಕಾಲ ಮೀರಿದವನು
ಕೃತಕ ನಗೆಯದ್ದೆ ಕಾರುಬಾರು
ಮತ್ತೆ ಬೀಳದಿರು ಕೊಚ್ಚೆಗೆ ಹುಷಾರ್

ಕವಿ ಕೇಳುವ ಸಾಮಾಜಿಕ ನ್ಯಾಯ

ಯಾರಿಗೂ ಅರ್ಥವಾಗದ
ಸಾಲುಗಳನ್ನ ಗೀಚುತ್ತಿದ್ದೇನೆ
ವ್ಯರ್ಥವಾಗಿ ಸಮಯ, ಶ್ರಮ ಹಾಳುಮಾಡಿ
ಹಾಳೆತುಂಬ ಶಬ್ದಗಳ ಜೋಡಿಸುತ್ತ

ಪ್ರೀತಿ ಅರಿಯದ ಹುಡುಗಿ
ಕರುಣೆಯಿಲ್ಲದ ಜನರು
ಓದಲೆನ್ನ ಕವಿತೆ ಉಳಿದರು ಯಾರು?
ಹಾಗೆ ಬಾಲಿಷ ನನ್ನ ಕವಿತೆ

ಎಷ್ಟೊ ಕವಿಗಳು ಬಂದುಹೋದರು
ಬದಲಾಗಲಿಲ್ಲಾ ಬದುಕು
ಜೋಪಡ ಪಟ್ಟಿಗಳಲ್ಲಿ ಅವೆ ಕನಸುಗಳು
ಬಿಕರಿಯಾಗಿ ಬಿದ್ದು ಒದ್ದಾಡುತ್ತಿವೆ ನೆಲದಮೇಲೆ

ಬದಲಿಸುತ್ತೇನೆ ಎನುವ ಛಲದಂಕಮಲ್ಲ
ಮೂರು ಜನ ಮತಿಹೀನರೆದೆಯಲ್ಲಿನ
ಜಾತಿಯ ಕೊಳೆತುಂಬಿದ ಭಾವ ಬದಲು ಮಾಡಿದ
ಕವಿ ಅವಕಾಶ ಕಸಿದವರ ವಿರುದ್ಧ ಪ್ರತಿಭಟಿಸಲೇ ಇಲ್ಲ

ಪಾಖಂಡಿ ಮೇಲ್ವರ್ಗ
ಬಸವನ ಹೆಸರು ಹೇಳಿ ಅವಕಾಶ ಬಾಚಿಕೊಳ್ಳುತಿರಲು
ನಮ್ಮಂತ ಸಾವಿರ ಕವಿಗಳಿಗೆ
ಸಾಮಾಜಿಕ ನ್ಯಾಯ ಸಿಗಲು ಸಾಧ್ಯವೆ?

❖

ಮದ್ದು ಯಾವುದೊ?

ಲಯತಪ್ಪಿದ ಎದೆ ಬಡಿತ
ಪ್ರೀತಿಗೆ ಪರಿಮಿತಿ ಹಾಕಿ
ಕಟ್ಟಿ ಹಾಕಿದ
ಖೂನಿ ನೀನು

ಹೀಗೆ ಹೆದರುವುದೇ ಆದರೆ
ಪ್ರೀತಿಯ ಅರಿವಾಗುವುದೆಂದು
ನಿನ್ನ ಹೃದಯದ ಬಡಿತವೆ ನಿನಗೆ ಕೇಳಿಸದು
ಇನ್ನೂ...

ಕಳವಳಿಸುತ್ತಿದೆ ಕಳ್ಳಮನ
ಥೆ ಇದರದೊಂದು
ಬೇಡವೆಂದರೂ ಬಿಡದೆ
ಮತ್ತೆ ಮತ್ತೆ ಕಾಡುವ ಅವಳ ನೆನಪಿನತ್ತಲೆ ಸುಳಿಯುತಿದೆ

ಪ್ರೀತಿಗೆ ವಯಸ್ಸಿಲ್ಲ ಎಂದ ನೀನು
ಮೋಸ ಮಾಡಿದೆ ಯಾಕೆ?
ನಿನಗೆ ಖುಷಿಯೆ ಬೇಡವೆ
ನಿನಗೆ ನಾ ಆಹಾರವಾದರೆ

ಬಲೆ ಹೆಣೆದವಳು ನೀನೊ ನಾನೊ
ಬಿದ್ದು ಒದ್ದಾಡುವುದ ಕಂಡು ಖುಷಿ ಪಡುತ್ತಿರುವಳು ನೀನೆ
ಶಾಂತಗೊಳಿಸಲು ಮನಕೆ
ಯಾವ ಮದ್ದು ಕೊಡಬೇಕೊ ಒಸಿ ಹೇಳು

ಮಲಗಿಸುತ್ತೆನೆ ಗಾಢನಿದ್ರೆಯಲಿ
ಕಿತ್ತು ಬಿಸಾಕಲಾಗದ ನೆನಪು
ನರಕ ಮಾಡಿದೆ ಬದುಕ
ಹಾಳು ಒಂಟಿತನವೆ ಹೀಗೆ

ಬೆನ್ನು ಬಿಡದ ಭೇತಾಳದಂತೆ
ಬೆನ್ನುಬಿಡದೆ ಕಾಡಿ
ಹಿಂಸಿಸುತ್ತಿವೆ
ನಿನಗೆ ಮಾತ್ರ ಇದಾವುದರ ಗೊಡವೆಯೆ ಇಲ್ಲ

❖

ಗುಂಡಿಂದ ಗೆಲ್ಲಲಾಗದು ಜಗ

ಯುದ್ಧ ಬಂದೂಕಿನಿಂದ, ಗುಂಡುಗಳಿಂದ
ಗೆಲ್ಲಲಾಗುವುದಿಲ್ಲ
ಅಣುಬಾಂಬಿನ ಬೆದರಿಕೆಯಿಂದಲ್ಲ
ಪ್ರೀತಿ ಎನ್ನುವ ಎರಡಕ್ಷರದಿಂದ

ನಾನೆ ಎನ್ನುವ ಅಹಂಕಾರಿಗಳಿಗೆ
ನಾಳೆಯ ಸ್ಥಿತಿ ಅರ್ಥವಾಗುವುದಿಲ್ಲ
ಗಾಡಿಗಳು, ಬಂಗಲೆ ಹಣದಲ್ಲೆ ಅಳೆಯುವವರಿಗೆ
ಪ್ರೀತಿಯಾಗುವ ಪರಿಯೆ ಅರ್ಥವಾಗುವುದಿಲ್ಲ

ಪ್ರೀತಿಯಿಂದಲೆ ಸೂರ್ಯ ಹುಟ್ಟುವುದು
ತಂಗಾಳಿ ಬೀಸುವುದು
ಮೋಡ ಮಳೆ ಸುರಿಸಿ
ಇಳೆ ಫಸಲು ಕೊಡುವುದು

ಪ್ರೀತಿಯಿಂದಲೆ ಹೃದಯ ಚೂರಾಗುವುದೆಂದಾಗ
ಅವ್ಯಕ್ತ ನೋವಾಗುವುದು
ಆದರೂ ಪ್ರೀತಿ ಭೂಮಿಯಿರುವವರೆಗೂ
ಅಮರ ನಿರಂತರ ಋತುಗಳಂತೆ

ದ್ವೇಷ ಬಿತ್ತುತ್ತಿರುವ ನಪುಂಸಕರೆಂದು
ಮನುಷ್ಯ ಪ್ರೀತಿಯ ಪರಿಯನ್ನ ಅರಿಯಲಾರರು
ಬುದ್ಧನ ಪ್ರೀತಿಯ ಅಳಿಸಹಾಕಲು ಹೊರಟವರೆ
ಬಸವಾದಿ ಶರಣರನ್ನ ಐಕ್ಯ ಒತ್ತಾಯ ಮಾಡಿದಂತಲ್ಲ

ಕೇವಲದಿಂದಲೆ ಯೂಕ್ರೇನ್ ಗೆಲ್ಲಲು ಹೊರಟ ಮೂರ್ಖ ಪುತಿನ್
ಕಾಲದ ರಕ್ಕಸನೆ
ಮನುಜ ಪ್ರೀತಿ ಅರಿಯದ ಖೂಳ
ಮುಗ್ಧಜನರ ಮಕಾಡ ಮಲಗಿಸಿದನೆ ವಿಧಿಯಾಗಿ.

❖

ಹೇಳಲಾಗದ ಅವ್ಯಕ್ತಭಾವ

ನಿನ್ನ ನೋಟದ ಅರ್ಥ ತಿಳಿಯದು ಗೆಳತಿ
ಹೇಳು ಮನದೊಳಗಿನ ಮರ್ಮವಾದರೂ ಏನು
ಹಸಿದ ಹೆಣ್ಣು ಹುಲಿಯಂತೆ
ಆಕ್ರಮಣ ನಡೆಸುತ್ತದೆ ನನ್ನ ಮೃದು ಹೃದಯದ ಮೇಲೆ

ಹೇಳದ ಹೇಳಲಾಗದ ಅವ್ಯಕ್ತ ಭಾವ
ಹೇಳಲು ತೀರದ ಮನದಾಳದ ನೋವ
ಹೇಳಬೇಕೆಂದರೆ....
ಆಗುತ್ತಿಲ್ಲವಲ್ಲ..

ಯಾರದೊ ಕೋರ್ಟಿನಲ್ಲಿ ಅದೇನೊ ತೀರ್ಪು
ನಿನ್ನ ಎದೆಯಲಿ ಮಾತ್ರ ಸಿಕ್ಕಿತು ನ್ಯಾಯ
ಹಕ್ಕೊತ್ತಾಯವಿಲ್ಲದ ಬಯಕೆ
ಬದುಕಲು ನಮಗೆ ಸಾಕೆ

ಹೇಳಿಬಿಡು ಎಷ್ಟುದೂರದ ಪಯಣ ನಮ್ಮಿಬ್ಬರದು
ನೀನು ಆ ತೀರ ನಾನು ಮತ್ತೊಂದು
ಹತ್ತಿರವಾಗಬೇಕೆಂದು ಹಂಬಲಿಸಿದೆ ಮನ
ಬರುವೆಯ ನನ್ನಾಳಕ್ಕಿಳಿದು ಈಜಿ ಸೇರುವೆ ನನ್ನ

❖

ಆತ್ಮವಿಶ್ವಾಸ

ಮೆಟ್ಟಿನ್ನೆಜ್ಜೆಯಡಿಯ ಹುಲ್ಲು
ಮತ್ತೆ ಪುಟಿದು ಮೇಲೆದ್ದಂತೆ
ಮೂರ್ಖ ಸಮಾಜದಲ್ಲಿ ಬದುಕಬೇಕು
ಆತ್ಮ ವಿಶ್ವಾಸವಿರಿಸಿಕೊಂಡು

ಹರಿವ ನೀರಿಗೆ ಒಡ್ಡು ಹಾಕಿ ತಡೆದೊಡೆ
ಕಟ್ಟೆ ಹೊಡೆದು ಹರಿವಂತೆ
ಸ್ವಾರ್ಥ ಸಮಾಜದ ರೀತಿಯನರಿತು
ಬದುಕ ಕಟ್ಟಿಕೊಳ್ಳಬೇಕು

ಬೇಕು ಬೇಕೆಂಬ ಹಪಹಪಿಯಲಿ
ಹರಿದು ಹಂಚಿ ಹೋಗುವ
ಸಮಯವನ್ನು ಸಾವರಿಸಿ
ಕಾಪಿಟ್ಟು ನಡೆಯಬೇಕು

ತನ್ನದೆ ನಡೆಯಬೇಕೆಂಬ ಸತಿಯ
ನಂಜಿನ ನಾಲಿಗೆಯಿಂ
ಉದ್ಭವಿಸುವ ಶಬ್ದಗಳಿಗಂಜದೆ
ಅಕ್ಕನಂತೆ ಬೆತ್ತಲಾಗಿ ಬಾಳಬೇಕು

ಅಲುಗಿನ ಮೇಲೆ ನಿಂತ ಸಂಬಂಧವನು
ಕತ್ತರಿಸಿಕೊಳ್ಳದಂತೆ
ಕಾಯ್ದುಕೊಂಡೆ
ಎಚ್ಚರಿಕೆ ನಡೆ ನಡೆಯಬೇಕು

ಏನ ಮಾಡಿದರು ಮಾತಾಡುವ ಬೆಪ್ಪು ಸಮಾಜಕ್ಕೆ
ಬೇಸತ್ತು ಆತ್ಮಹತ್ಯೆ ಮಾಡಿಕೊಂಡ
ಹೇಡಿ ಜನರಿಂದ ಪಾಠ ಕಲಿತು
ವಜ್ರದಂತೆ ಕಠೋರವಾಗಿ ಬದುಕಿ ತೋರಿಸಬೇಕು

ಸತ್ಯ ಮಿತ್ಯ ಹಾದಿಯೊಳು
ಕಾಲಿಗೆ ಬೀಳುವ ಸಂಕೋಲೆಗಳ ಕಳಚಿ
ಬದುಕಿನ ಹಾದಿಗುಂಟ
ಒಬ್ಬಂಟಿಯಾಗಿ ಸಾಕಬೇಕು ಆತ್ಮವಿಶ್ವಾಸದ ಬಲದ ಮೇಲೆ

❖

ಮಾತುಗಳೆ ಹಾಗೆ

ಹೇಳಲಾಗದ ಮಾತುಗಳು ಹಾಗೆ
ಎದೆಯೊಳಗೆ ಉಳಿದು
ಮನದ ಮೌನವನು ಕದಡಿಬಿಡುತ್ತವೆ
ಎಸೆದ ಕಲ್ಲೊಂದು ಕೊಳದ ನೀರೊಳುಂಟುಮಾಡುವ ಕಂಪನಗಳಂತೆ

ಯಾರೊ ಬಂದರೆಂದೊ
ಯಾರೊ ಬಿಡಲಿಲ್ಲವೆಂದೊ
ಸಂಕೋಚ ಭಯದ ಭರದಲಿ
ಮತ್ತೆ ಹೇಳಲು ಅವಕಾಶವೆ ಬರದಂತೆ

ತಾಳ್ಮೆಬೇಕು ಬದುಕಿಗೆ
ಹೇಳಲು ಸಮಯ ಬಂದಾಗ
ಮನ ಬಿಚ್ಚಿ ಮಾತಾಡಬೇಕು
ಮೌನವನು ಕಿತ್ತು ಬೆತ್ತಲಾದಂತೆ

ಕಣ್ಣೋಟು ಕೂಡ ಕೆಲಮಾತುಗಳು
ಕೆಲವರಿಗೆ ಮಾತ್ರ ಅರ್ಥವಾದಾವು
ಅರ್ಥೈಸಿಕೊಳ್ಳಬೇಕು ಅಪಾರ್ಥದ ಅನರ್ಥಕ್ಕೂ ಮುನ್ನ
ಸಂಭವ ಅಸಂಭವಗಳ ಹಿಂಸೆಯೊಳಗೆ

ಹೇಳಲಾಗದ ಮಾತುಗಳು ಹಾಗೆ
ಒಳಗೊಳಗೆ ಕೊರೆವ ಛಳಿಯಂತೆ
ನುಂಗಲಾರದ ಬಿಸಿ ತುಪ್ಪದಂತೆ
ಉಗಳಲು ಆಗದಂತೆ

❖

ಬದುಕೆ ನಿನಗೆಷ್ಟು ಕಿರೀಟಗಳು

ಶ್ರೇಷ್ಠೋತ್ತಮರೆಂದು ಬೀಗುವರೊಂದೆಡೆ
ಕನಿಷ್ಠರೆಂದು ತಿರಸ್ಕೃತರೊ
ಅರ್ಥವೆ ಆಗದ ಬದುಕಿನ ಹಾಳೆಗಳಲ್ಲಿ
ಬದುಕೆ ನಿನಗೆಷ್ಟು ಕಿರೀಟಗಳು

ಎಲ್ಲವನು ಬಲ್ಲ ಪಂಡೀತ ನಾನೆಂದು
ಸುಳ್ಳಿನ ಮಹಲುಗಳ ಕಟ್ಟಿಪ
ಅಣ್ಣ ನೊಕ್ಕಲೆಂದು
ಜಾತಿಗೆ ಜೋತುಬಿದ್ದವರು

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೆ?
ಶರಣರಾಣತಿಯ ಮೀರಿ
ಶಾಸನವ ಮಾಳ್ಪರೆ
ಬದುಕೆ ನಿನಗೆಷ್ಟು ಕಿರೀಟಗಳು

ಧನ ಲೊಲಪರು ಹಿಂಡು ಹಿಂಡಾದೊಡೆ
ಸ್ತ್ರೀ ಲೊಲಪರು ದಂಡು ದಂಡು
ಹಿಂಡು ದಂಡುಗಳ ನಟ್ಟನಡುವೆ
ನಿಟ್ಟು ಒಟ್ಟಿರುವ ಅವಮಾನಕ್ಕೆ ಅಂಟಿಕೊಂಡಿಹ ಬದುಕೆ

ಎಷ್ಟು ಕಿರೀಟಗಳು ನಿನ್ನ ಮುಕಟಕ್ಕೆ?
ಜಾತಿಯದ್ದೊ
ಧನದ ದೌಲತ್ತಿನದ್ದೊ
ಪಾಂಡೀತ್ಯದ್ದು......... ಹೇಳು ಕಿರೀಟಗಳಾದರು ಎಷ್ಟು?

❖

ಹೇಳು ಯಾರು ನೀನು?

ಕಾಡುತ್ತಿಯ ನೀನು
ಕವಿತೆಯ ಸಾಲುಗಳಂತೆ
ಅಭಿವ್ಯಕ್ತಿಸಲು ತವಕಿಸುವ
ಪ್ರಸವದ ವೇದನೆಯಂತೆ

ನೀನು ಹಾಡುತ್ತಿಯ
ನನ್ನೆದೆಯೊಳಗೆ ವೇದನೆಯ ತಂತಿಯಂತೆ
ಕೋಗಿಲೆಯಾಗಿ ನನ್ನೆದೆಯ ವಸಂತದಲಿ
ಅಭಿವ್ಯಕ್ತಿಗೊಳ್ಳದ ನೋವಾಗಿ

ಕಲಿಕಿ ಬಿಡುತ್ತಿಯ ಶಾಂತಚಿತ್ತ ಮನವ
ಬಿರುಗಾಳಿಯಂತೆ ಬೀಸಿ
ಅಲ್ಲೋಲ ಕಲ್ಲೋಲವೆಸಗಿ
ವಿಲ ವಿಲ ಒದ್ದಾಡುವಂತೆ ಮಾಡಿ ಬಿಡುತ್ತಿಯಾ

ಹೇಳು ಯಾರು ನೀನು?
ಪ್ರೀತಿ, ಪ್ರೇಮ........
ಭ್ರಮೆಯ ಕನಸಿನ ಲೋಕ
ಇಲ್ಲ ನನ್ನ ಕಾಡಲೆಂದೆ ಬಂದ ಮಾಯಾಮೃಗ

ಪರೀಕ್ಷೆಗಳು ಬೇಡ ಬಿಡು ಈಗ
ಅವಕ್ಕೆ ಬೆಲೆಯಿಲ್ಲ
ಬರುವುದಾದರೆ ಎದೆಗೆ ಬಂದು ಬಿಡು
ತೆರೆದರಮನೆಯ ರಾಣಿಯಂತೆ

ಕನಸುಗಳ ಬೀಜ ಬಿತ್ತಿ
ಮೊಳಕೆ ಒಡೆಯುವ ಮುನ್ನ
ಟಾಟ ಹೇಳಬೇಡ
ಹೊಸ ಬದುಕಿನ ಕಾವ್ಯದಂತೆ

❖

ಹಂಬಲಿಸುವ ಮನಸ್ಸಿಗೆ........

ಬಿಡದೆ ಬೆನ್ನು ಹತ್ತಿ ಕಾಡುವ ನೆನಪುಗಳೆ
ಬಿಡುಗಡೆ ಗೊಳಿಸಿ ಎನ್ನ
ಬಿನ್ನಪೆನು ನಿಮಗೆ ಮತ್ತೆ ಬರುವುದು ಬೇಡವೆಂದು
ಕಣ್ಣಲ್ಲೆ ಕೊಲ್ಲುವವಳ ದಾಸರು ನೀವೆಂದು

ನಾನು ನಾನಾಗಿಲ್ಲದ ಪರಿಯ ನಾ ಅರಿಯೆ
ಎಲ್ಲವೂ ಸಮರ್ಪಣೆ ಅವಳಿಗೆ
ಯಾವ ಮಾಯಾಜಾಲವೊ
ಮನಸ್ಸಿಲ್ಲ ನನ್ನ ಬಳಿಯೀಗ

ಹಂಬಲಿಸುವ ಮನಸ್ಸಿಗೆ ನೆನಪುಗಳದ್ದೆ ಬೆಂಬಲ
ಸುಮ್ಮನೆ ಇರುವ ನನಗೆ ಹಾಳುಮಾಡುವುದು ಸರಿಯೆ
ಮನದ ಸಮಚಿತ್ತ ಹಾಳುಮಾಡುತ
ಅಗೋ ಅಲ್ಲಿ ಹಾಡು ಹಾಡುತ್ತಿವೆ

ಇಲ್ಲಿ ಬಿಡಾಡಿದನಗಳಂತೆ ಸುತ್ತಾಡುತ್ತಿದೆ
ದುರ್ಬಲವಾಗ ಬೇಡವೆಂದರೂ
ಪಿಸಿವ ಮನಕೆ
ಮೂಗುದಾರ ಹಾಕಲೆ? ಕೊಸರಿ ಹೋಗದಂತೆ

ಮತ್ತೆ ಹೊಸದೊಂದು ಅವತಾರ
ಬೆಕ್ಕು ಸನ್ಯಾಸಿಯಾಗಿ ಜಪಮಾಲೆ ಹಿಡಿದಂತೆ
ಬಿಲಬಿಟ್ಟ ಇಲಿಗಳ ಬಿಡದೆ ತಿಂದಂತೆ
ಯಾಕೆ ಬೂಟಾಟಿಕೆಯ ಬಯಲಾಟ ಸಾಕು ಸುಮ್ಮನಿರು

ಹೀಗಾದರೆ ನೋಡು ನಿನ್ನ ಸಂಗವನೆ ತ್ಯಜಿಸಿ
ಒಂಟಿಯಾಗಿ ಬಿಡುವೆ
ಜಗದ ಜಂಜಡದಿಂದ ದೂರ........
ನಿನ್ನ ಅಣತೆಗೂ ಮೀರಿ ಹೋಗಿ ಬಿಡುವೆ

❖

ಒಳಗೆದ್ದ ಬಿರುಗಾಳಿ

ಹೊರಗಿನ ಬಿರುಗಾಳಿ
ಒಮ್ಮೊಮ್ಮೆ ಒಳಗಿನ ಗಾಳಿ
ಅಸ್ತಿತ್ವವನೆ ಅಲುಗಾಡಿಸುತ್ತದೆ
ಬದುಕಿನ ಭರವಸೆಯನ್ನೆ ಹಾಳುಮಾಡಿ

ಹೊರಗೆ ಮತ್ತು ಒಳಗೆ ಏನೊ ನಡೆಯುತ್ತದೆ
ಕಣ್ಣಿಗೆ ಕಾಣದಂತೆ
ಪ್ರಕೃತಿಯಲ್ಲಾಗುವ ವೈಪರಿತ್ಯವೆ
ಹೊರಗಿನ ಭೀಕರತೆಗೆ ಕಾರಣವಾದರೆ

ಪಾಪಾತ್ಮಜರು ನಮ್ಮೊಳಗೆ ಬಿರುಗಾಳಿಯನ್ನೆಬ್ಬಿಸುತ್ತಾರೆ
ಮನಸು ತರಗೆಲೆಯಂತೆ ಗಿರಿಗಿಟ್ಲೆ ಯಾಡಿ
ಹೊಯ್ದಾಡುತ ನೆಮ್ಮದಿಯನ್ನೆ ಕಳೆದುಕೊಂಡು
ಒಳಗೊಳಗೆ ಅಳುತ್ತದೆ ಹೆದರಿ ಮುದುಡುತ್ತದೆ

ಯಾರಿವರು ನನ್ನೊಳಗೆ ಬಿರುಗಾಳಿ ಎಬ್ಬಿಸಿದವರು?
ಮಂದಗೆ ಉರಿಯುತ್ತಿದ್ದ ಎದೆಯೊಳಗಣ ಬೆಂಕಿಗೆ ಕಿಚ್ಚ ಹಚ್ಚಿ
ಕಾಣದೆ ನಾಪತ್ತೆಯಾದವರು
ಹುಡುಕಬೇಕೆಂದರೆ ಕಾಣುತ್ತಿಲ್ಲ

ಒಳಗಿನ ಬೀರುಗಾಳಿ ಜಗ್ಗದವನೆ ಬುದ್ದ
ಶಾಂತ ಚಿತ್ತ ಮಂದಸ್ಮಿತ
ಹೊರಗೂ ಅಶಾಂತಿ ಅವಮಾನ ಅಪಮಾನ
ಒಳಗೆ ಮಾತ್ರ ನಿಶ್ಯಬ್ದ ಮೌನ

ಹೌದು ನಾವು ಬುದ್ದನಾಗಬೇಕು
ಬದ್ದತೆಯ ಪರಿಕಳಚಿ
ನನ್ನಿಂದಲೆ ಎನ್ನುವ ಭ್ರಮೆ ಅಳಿಸಿ
ಸಾಮಾನ್ಯರಲಿ ಸಾಮಾನ್ಯರಾಗುತ.......

❖

ಮನ ಅರಳೀತು

ತಲೆಯಿಂದ ಆಲೋಚಿಸುವವರಿಗೆ
ಹೃದಯದ ಭಾಷೆ ಅರ್ಥವಾಗುವುದೆ
ಎದೆಯೊಳಗೆ ಬರೆದ ಅವಳ ಕವಿತೆ ಸಾಲುಗಳು
ಅವ್ಯಕ್ತಗೊಳ್ಳದೆ ಹಾಗಿ ಉಳಿದುಕೊಂಡವು

ಹಾಳೆ ಮೇಲೆ ಅಕ್ಷರಗಳಲ್ಲಿ ಬರೆದರೆ
ಅಳಿಸಿ ಹೋದಾವೆಂದು
ರಾಜ ಕೊರೆಸಿದ ಬಂಡೆ ಶಾಸನಗಳಂತೆ
ಹೃದಯ ಶಾಸನವಿದು

ಅವಳು ಕೇವಲ ತಲೆಯಿಂದ ಆಲೋಚಿಸಿ
ತಲೆನೋವು ತರಿಸಿಕೊಂಡಳೆ?
ಹೃದಯಕ್ಕೆ ಸಮಾಧಾನ ಪಡಿಸುವುದು ಸುಲಭವೆ?
ವಿಲ ವಿಲ ಒದ್ದಾಡಿ ರಂಪಮಾಡುತ್ತದೆ

ಹೃದಯ ಮೃದು ಮನೋಹರ ಮಾಯಂಗ
ಮೋಹಪಾಶದಲಿ ಸಿಲುಕಿ ಬದುಕಿನಾಶೆ
ಹೊತ್ತ ಸಿಂಬಳದೊಳಗಿನ ನೊಣದಂತೆ

ಮೆದಳು ನಿರ್ಲಿಪ್ತ ಯಾರಿಗೂ ಆಪ್ತನಲ್ಲದ ನಂಟ
ಒಮ್ಮೆ ಹೃದಯದಿಂದ ಆಲೋಚಿಸು

ಹೃದಯ ಬುದ್ದಿವಂತನಾದರೆ
ಮೆದಳಿಗೆ ಕರುಣೆ ಬಂದೀತೆ
ಹೃದಯದೊಳಗಿನ ವೇದನೆ
ಮೆದುಳಿಗಿಲ್ಲದ ಸಂವೇದನೆ

ಒಮ್ಮೆ ಹೃದಯಕ್ಕೂ ಅವಕಾಶಕೊಟ್ಟುನೋಡು
ನಿನ್ನ ತುಟಿಯಂಚಿನ ನಗೆಗೆ ನಾಚುವ ನನ್ನ ಹೃದಯದ ಭಾವನೆ ತಿಳಿದೀತು
ಮೆದುಳ ಮಾತು ಕೇಳುವುದು ಕಮ್ಮಿಯಾದೀತು
ಮನಸು ಗುಲಾಬಿಯ ಪಕಳೆಗಳಂತೆ ಅರಳೀತು........

❖



ಕಾವ್ಯ ಭಾವನೆಯ ಜೊತೆಗೆ ಮುಖಾಮುಖಿಯಾಗಿ ವಿಷ್ಮಯ ರೂಪದ ಪದಗಳೊಂದಿಗೆ ಮೂರ್ತ ರೂಪವನ್ನು ಪಡೆದುಕೊಳ್ಳುತ್ತದೆ. ಕಾವ್ಯಕ್ಕೆ ಇರುವ ಶಕ್ತಿ ಅಗಾಧವಾದದ್ದು. ಕಾವ್ಯ ಹಾಡಾಗಿ ಬೇಸರವನ್ನು ಹೋಗಲಾಡಿಸುವ ಅಸ್ತ್ರವಾದರೆ, ಕ್ರಾಂತಿ ಉಂಟುಮಾಡುವ, ಜನರ ಮನಸನ್ನು ಬದಲಿಸುವ ತಾಕತ್ತು ಕಾವ್ಯಕ್ಕಿದೆ. ಕಾವ್ಯವನ್ನು ಆಸ್ವಾದಿಸುವ ಮನಸ್ಸುಗಳನ್ನು ಹುಡಕಬೇಕಾಗಿದೆ. ಹಾಗಂತ ಕಾವ್ಯದ ಆರಾಧಕರು ಇಲ್ಲ ಎಂದಲ್ಲ. ಇವತ್ತು ಸರ್ವಜ್ಞ ಬಸವಾದಿ ಶರಣರು ಉಳದಿರುವುದು ಅವರ ಕಾವ್ಯದ ಸಾಲುಗಳಿಂದಾಗಿಯೆ. ಇಂತ ಗಟ್ಟಿಯಾದ ಕಾವ್ಯ ಶಾಶ್ವತವಾಗಿ ಜನಮಾನದಲ್ಲಿ ಉಳಿಯುವುದು ಏಕೆಂದರೆ ಕೆಲವರ ಕಾವ್ಯ ಜೊಳ್ಳು ಜೊಳ್ಳಾಗಿದ್ದರು ವಂದಿಮಾಗದರಿಂದ ಸುತ್ತುವರಿಯಲ್ಪಟ್ಟಿರುವುದರಿಂದಾಗಿಯೆ ಅವರು ಪ್ರಶಸ್ತಿಗೆ ತೃಪ್ತರಾಗಬೇಕೆ ವಿನಃ ಅದು ಜನರ ಮನಸ್ಸಿನೊಳಗೆ ಉಳಿಯಲ್ಲ ಸಾಧ್ಯವೆ? ಇಂತಹ ಬಹಳಷ್ಟು ಕವಿಗಳು ಪ್ರಶಸ್ತಿ ಪಡೆದು ಮಾಯವಾಗಿ ಹೋಗಿದ್ದಾರೆ.

ISBN 939477188-3
9 789394 771888

ಅಕ್ಷರ ಮಂಟಪ